ಹೊಯ್ಸಳೇಶ್ವರ

ವಿಷ್ಣುವರ್ಧನ

ತ ರಾ ಸು

ಹೊಯ್ಸಳೇಶ್ವರ

ವಿಷ್ಣುವರ್ಧನ

ತ ರಾ ಸು

ಮೊದಲ ಮುದ್ರಣ : ೧೯೫೬

ಬೆಲೆ: ೧-೪-೦

ಮುದ್ರಕರು:

ಶ್ರೀ ಸೀತಾರಾಘವ ಪ್ರೆಸ್

ರಾಮಸ್ವಾಮಿ ಸರ್ಕಲ್, ಮೈಸೂರು.

ಆಕರ:

https://archive.org/details/in.ernet.dli.2015.364287/page/n5/mode/2up

ಕೆಲವು ಮಾತು

ಕರ್ನಾಟಕವನ್ನು ಆಳಿದ ನೂರಾರು ಜನ ರಾಜಾಧಿರಾಜ ಮಹಾರಾಜರ ಮಾಲೆಯಲ್ಲಿ ಧ್ರುವಕಾಂತಿಯಿಂದ ಬೆಳಗುತ್ತಿರುವ ಉಜ್ವಲ ತಾರೆ, ಹೊಯ್ಸಳ ವಿಷ್ಣುವರ್ಧನ ಮಹಾರಾಯನದು. ಇಂದು ನಾವು ಕರ್ನಾಟಕವೆಂದು ಪಡೆಯುತ್ತಿರುವಷ್ಟು ಭಾಗವನ್ನು ಒಂದು ನಾಡಾಗಿ ಕಟ್ಟಿದ ಮೊದಲ ಅರಸು ವಿಷ್ಣುವರ್ಧನ. ಕಲಾರಂಗದಲ್ಲಂತೂ ಈ ದೊರೆಯ ಹೆಸರು, ಆತನ ಕಾಲದಲ್ಲಿ ಆತನಿಂದ, ಆತನ ಪರಿವಾರದವರಿಂದ ನಿರ್ಮಿತವಾದ ನೂರಾರು ದೇವಾಲಯ ಬಸದಿಗಳಿಂದಾಗಿ ಆಚಂದ್ರಾರ್ಕಸ್ಥಾಯಿಯಾಗಿದೆ.

ಇಂಥ ಭವ್ಯಜೀವಿಯ ಜೀವನ ಮತ್ತು ಸಾಧನೆಗಳ ಬಗ್ಗೆ ನನ್ನ ಗಮನವನ್ನು ಸೆಳೆದು, ಅಭ್ಯಾಸ ಮಾಡಿ ಗ್ರಂಥ ರಚಿಸೆಂದು, ೧೯೪೭ ರಲ್ಲೇ ನನ್ನ ಗುರುಗಳಾದ ಡಾ|| ಎಸ್. ಶ್ರೀಕಂಠಶಾಸ್ತ್ರಿಗಳು ಅಪ್ಪಣೆ ಮಾಡಿ, ಆಶೀರ್ವದಿಸಿದರು. ಆ ಗ್ರಂಥ ಬರಲಿದೆ ಎಂದು ಆ ವರ್ಷವೇ ಬೇರೊಂದು ಪುಸ್ತಕದಲ್ಲಿ ಬಡಾಯಿಯನ್ನು ಕೊಚ್ಚಿಕೊಂಡೆ. ಆದರೆ ಅಂದು ಆರಂಭವಾದ ಕೆಲಸದ ಒಂದು ಖಂಡ ಹೊರಬರಲು ಒಂಭತ್ತು ವರ್ಷಗಳ ಅವಧಿ ಕಳೆಯಬೇಕಾಯಿತು. ಏನಾದರೂ ಮತ್ತೆ ಕನ್ನಡ ನಾಡು ಒಂದಾಗಿ ಉದಯಿಸುವ ವೇಳೆಗಾದರೂ ಇದು ಹೊರಬಂದಿತಲ್ಲಾ ಎಂಬುದೊಂದೇ ನನಗೆ ಬಹು ದೊಡ್ಡ ಸಮಾಧಾನ.

ಇಲ್ಲಿ ವಾಚಕರ ಮುಂದಿರುವುದು, ನನ್ನಿಂದ ರಚಿತವಾಗುತ್ತಿರುವ 'ಹೊಯ್ಸಳೇಶ್ವರ' ಎಂಬ ಬೃಹತ್ ಕಾದಂಬರಿಯ ಒಂದು ಖಂಡ ಮಾತ್ರ; ವಿಷ್ಣುವರ್ಧನನ ಜೀವನದ ಬಹು ಮುಖ್ಯ ಸಾಧನೆಗಳಲ್ಲೊಂದಾದ ತಲಕಾಡು ವಿಜಯದ ಚಿತ್ರಣ. ಉಳಿದ ಭಾಗವೂ ಕನ್ನಡಿಗರ ಹರಕೆಯಿದ್ದರೆ, ಆದಷ್ಟು ಬೇಗ ಹೊರಬರುತ್ತದೆ.

ಈ ಗ್ರಂಥ ರಚನೆಯ ಸಂದರ್ಭದಲ್ಲಿ ಹಲವಾರು ಮಿತ್ರರಿಂದ ನೆರವಾಗಿದೆ. ಅವರಲ್ಲಿ ಮುಖ್ಯರಾದವರು, ಮೈಸೂರಿನ ಆರ್ಕಿಯೋಲಾಜಿಕಲ್ ಶಾಖೆಯ ಡೈರೆಕ್ಟರರವರಾದ ಡಾ|| ಎಂ. ಶೇಷಾದ್ರಿ, ಶ್ರೀ ಎಂ. ಹನುಮಂತರಾಯರು, ಬೇಲೂರಿನ ಶ್ರೀ ಎಸ್. ಜೋಷಿಗಳು ಮತ್ತು ಶ್ರೀ ಕೊಂಡಿನಾರಾಯಣಾಚಾರ್ಯರು. ಇವರೆಲ್ಲರೂ ಅಗತ್ಯವಾದ ಗ್ರಂಥಗಳನ್ನು ಕೊಟ್ಟು ಸಲಹೆ ನೀಡಿ ಉಪಕರಿಸಿದ್ದಾರೆ. ಇವರಿಗೆ ನಾನು ಋಣಿ.

ಹಾಗೇ ಈ ಪುಸ್ತಕಕ್ಕೆ ಬಹು ಮುದ್ದಾದ ಹೊಯ್ಸಳ ದೇವಾಲಯದ ದ್ವಾರ ಚಿತ್ರವನ್ನು ಬರೆದು ಕೊಟ್ಟ ಶಾಸನ ಇಲಾಖೆಯ ಡ್ರಾಫ್ಟ್‌ಮನ್ ಸಿ. ಕುಪ್ಪಾಚಾರಿಯವರಿಗೂ, ಮತ್ತು ಶ್ರೀ ನಾಗೇಶಮೂರ್ತಿಯನರಿಗೂ ನಾನು ಕೃತಜ್ಞ.

ಈ ಗ್ರಂಥವನ್ನು ನನ್ನಿಂದ ಒತ್ತಾಯ ಮಾಡಿ ಬರೆಯಿಸಿದ ಬೆಂಗಳೂರಿನ ಪ್ರಕಾಶಕರಾದ ಶ್ರೀ ಜಿ. ಕಲ್ಲಯ್ಯನವರಿಗೂ, ಮುದ್ದಾಗಿ ಮುದ್ರಿಸಿದ ಶ್ರೀ ಸೀತಾರಾಘವ ಪ್ರೆಸ್ಸಿನ ಮಾಲೀಕರಾದ ಶ್ರೀ ಪಿ. ಆರ್. ಸೀತಾರಾಂರವರಿಗೂ ನನ್ನ ಸ್ನೇಹಪೂರ್ವಕವಾದ ವಂದನೆಗಳು.

'ಗಿರಿಕನ್ಯಕಾ' ತ. ರಾ. ಸು

ಯಾದವಗಿರಿ : ಮೈಸೂರು.

೧

ಸಿಂಹಾಸನಾರೋಹಣ ಮಾಡಿದ ಗಳಿಗೆಯಿಂದಲೂ ವಿಷ್ಣುವರ್ಧನನಿಗಿದ್ದ ಚಿಂತೆ ಒಂದೇ ಒಂದು—

ರೋಗಗ್ರಸ್ತನಾಗಿದ್ದ ತನ್ನ ಅಗ್ರಜ ಹೊಯ್ಸಳ ಬಲ್ಲಾಳರಾಯನ, ಮೊದಲೇ ವ್ಯಾಧಿಯಿಂದ ಬಳಲುತಿದ್ದ ಜೀವಕ್ಕೆ ಒಂದು ಗಳಿಗೆಯೂ ಬಿಡುವುಕೊಡದಂತೆ ಸಾಲು ಸಮರಗಳಿಂದ ಕಾಡಿದ ಚೋಳ-ಚಾಲುಕ್ಯರನ್ನು ಮೂಲೋತ್ಪಾಟನ ಮಾಡುವುದು.

ವಿಷ್ಣುವರ್ಧನನ ತಂದೆ ಯುವರಾಜ ಎರೆಯಂಗದೇವ, ಆತನ ತಂದೆ ವಿನಯಾದಿತ್ಯ-ಇಬ್ಬರೂ ಒಬ್ಬರ ಬೆನ್ನ ಹಂದೆ ಮತ್ತೊಬ್ಬರು ಕಣ್ಣು ಮುಚ್ಚಿ ಹೊಯ್ಸಳ ಸಾಮ್ರಾಜ್ಯ ಲಕ್ಷ್ಮಿಯನ್ನು ಅನಾಥಳನ್ನಾಗಿ ಮಾಡಿ ತೆರಳಿದ ಹೊತ್ತಿನಲ್ಲಿ, ಎರೆಯಂಗದೇವನ ಮೂವರು ಮಕ್ಕಳಲ್ಲಿ ಹಿರಿಯನಾದ ಬಲ್ಲಾಳರಾಯ ಶಕವರ್ಷ ಸಾವಿರದ ಇಪ್ಪತ್ತೆರಡನೆಯ ವಿಕ್ರಮ ಸಂವತ್ಸರದಲ್ಲಿ ಸಿಂಹಾಸನಾರೋಹಣ ಮಾಡಿದ.

ಆದರೆ ಆತನ ಪಾಲಿಗೆ ಸಿಂಹಾಸನ ಸಿಂಹಾಸನವಾಗಲಿಲ್ಲ; ಸಮರಾಸನವಾಯಿತು.

X X X X X

ಸಳಮಹಾರಾಯ, ವಾಸನ್ತಿಕಾದೇವಿಯ ಮಂದಿರದಲ್ಲಿ, ಸಳೆಯಿಂದ ಹುಲಿಯನ್ನು ಹೊಯ್ದು, ಸುದತ್ತಮುಥಿಗಳ ಹರಕೆ ಪಡೆದು, ಹೊಯ್ಸಳ ರಾಜ್ಯಕ್ಕೆ ಬೀಜಾರೋಪಣ ಮಾಡಿ, ಸುತ್ತಲ ಮಲೆಯರಸುಗಳನ್ನು ಮೆಟ್ಟಿ, ದ್ವಾರಸಮುದ್ರದ ನೂತನ ನಿರ್ಮಿತ ಕೋಟೆಯ ಮೇಲೆ ತನ್ನ ವ್ಯಾಘ್ರಪತಾಕೆಯನ್ನು ಹಾರಿಸಿದ ಗಳಿಗೆಯಿಂದಲೂ, ತಲಕಾಡಿನ ಗಂಗವಂಶದ ಅರಸುಗಳನ್ನು ಕಬಳಿಸಿ, ಕಾವೇರಿಯಿಂದ ತುಂಗಭದ್ರೆಯ ನಡುವಿನ ನಾಡಿನಲ್ಲಿ ತಮ್ಮ ಸಾಮ್ರಾಜ್ಯವನ್ನು ಸ್ಥಾಪಿಸಿದ

ಚೋಳರು, ಹೊಯ್ಸಳರ ವೈರಿಗಳಾಗಿದ್ದರು. ಧರ್ಮಪುರಿಯ ರಾಜಧಾನಿಯಲ್ಲಿ ಬೀಡುಬಿಟ್ಟ ಚೋಳಪ್ರತಿನಿಧಿಗಳು, ಅವರ ಸಾಮನ್ತರಾದ ಚೆಂಗಾಳ್ವ, ಕೊಂಗಾಳ್ವ ಪ್ರಭುಗಳು, ದಿನ ದಿನವೂ ಹೊಯ್ಸಳರಿಗೆ ಕಿರುಕುಳ ಕೊಡುವುದೇ ತಮ್ಮ ಕರ್ತವ್ಯವೆಂದು ನಂಬಿದ್ದರು.

ಹೊಯ್ಸಳ ಅರಸುಗಳು ಚೋಳರನ್ನು ಪ್ರತಿಭಟಿಸಿ, ಕಲ್ಯಾಣಿಯ ಚಾಲುಕ್ಯ ದೊರೆಗಳ ಸಾಮನ್ತರೆನಿಸಿಕೊಂಡ ಬಳಿಕ, ಈ ದ್ವೇಷಭಾವನೆ ಮತ್ತಷ್ಟು ಬಲಿದು, ಹೊಯ್ಸಳ ಅರಸುಗಳು ತಮ್ಮ ಉಳಿವಿಗಾಗಿ ಹಗಲಿರುಳೂ ಖಡ್ಗ ಧರಿಸಿ ಬಾಳಬೇಕಾಯಿತು. ಪ್ರಥಮ ವಿನಯಾದಿತ್ಯ, ನೃಪಕಾಮ ಹೊಯ್ಸಳ ದೊರೆಗಳ ಆಯುಷ್ಯವೆಲ್ಲವೂ ಈ ಸಮರಗಳಲ್ಲಿಯೇ ಸವೆದು ಹೋಯಿತು.

ನೃಪಕಾಮ ದೊರೆಯ ಬಳಿಕ, ಪಟ್ಟಕ್ಕೆ ಬಂದ ಇಮ್ಮಡಿ ವಿನಯಾದಿತ್ಯ ದೊರೆಯ ಕಾಲದಲ್ಲಿ ಹೊಯ್ಸಳರ ಪಾಲಿಗೆ ವಿಧಿ ಕೊಂಚ ಸುಮುಖವಾಯಿತು.

ಆತನ ಪ್ರಚಂಡ ಖಡ್ಗಾಘಾತದ ಇದಿರು ಹೊಯ್ಸಳರ ಕುಲವೈರಿಗಳಾದ ಚೆಂಗಾಳ್ವ, ಕೊಂಗಾಳ್ವರು, ಅಳ್ವಖೇಡದ ಅರಸುಗಳು ಸೋತು, ತಲೆಬಾಗಿದುದಷ್ಟೇ ಅಲ್ಲ, ಕನಸಿನಲ್ಲೂ 'ರಕ್ಕಸ ಹೊಯ್ಸಳ' ನೆಂಬ ಆರಕ್ಕರದ ಬಿರುದು ಕೆತ್ತಿಸಿದ ಪಳವಿಗೆಯನ್ನು ಕಂಡು ಬೆದರುವಂತಾಯಿತು. ವಿನಯಾದಿತ್ಯ ಹೊಯ್ಸಳರಾಯನ ಪುತ್ರ ಯುವರಾಜ ಎರೆಯಂಗದೇವ ತಂದೆಯಷ್ಟೆ ಪರಾಕ್ರಮಶಾಲಿ. ವಿನಯಾದಿತ್ಯನ ಅಸಿಧಾರೆ, ಕೊಂಕಣಿಗರನ್ನು, ಸುತ್ತಲ ಮಲೆಯರಸುಗಳನ್ನು ಸವರಿದರೆ, ಪುತ್ರನ ಪರಾಕ್ರಮ ಚೋಳರು ತಳಿರುಟ್ಟು ಬಾಳುವಂತೆ ಮಾಡಿ, ಭೋಜನ ಧಾರಾನಗರವನ್ನು ಸುಟ್ಟು, ಆ ಕೋಟೆಯ ಮೇಲೆ ಚಾಲುಕ್ಯರ ಜಯಧ್ವಜವನ್ನೂ ತನ್ನ ಕೀರ್ತಿ ಧ್ವಜವನ್ನೂ ಬೆಳಗಿಸಿ 'ಚಾಲುಕ್ಯ ಭುಜಬಲದಂಡ' ಎಂಬ ಪ್ರಶಸ್ತಿಗೆ ಪಾತ್ರವಾಯಿತು.

ಯುವರಾಜ ಎರೆಯಂಗದೇವನ ಪರಾಕ್ರಮವೇ, ಕ್ಷತ್ರತೇಜವೇ ಪುತ್ರರೂಪವಾದಂತೆ, ಆತನ ಪಟ್ಟ ಮಹಾದೇವಿ ಏಚಲಾದೇವಿಯ ಗರ್ಭಸುಧಾಂಬುಧಿಯಲ್ಲಿ ಕಟ್ಟಾಳುಗಳಾದ ಬಲ್ಲಾಳ ದೇವ, ವಿಷ್ಣುವರ್ಧನ, ಉದಯಾದಿತ್ಯರು ಜನಿಸಿದರು. ಕತ್ತಿ ನಡೆದಲ್ಲಿ ಜಯ, ಕಾಲಿಟ್ಟಲ್ಲಿ ಕೀರ್ತಿ, ಕಣ್ಣಾಡಿದಲ್ಲಿ ಹರ್ಷಗಳು ಲಭಿಸಿದ ಹೊಯ್ಸಳರ ಹಿರಿಮೆಯನ್ನು ಕಂಡು ದೇವತೆಗಳ ಕರುಬುಬುದ್ಧಿ ಕೆರಳಿತೇನೊ. ನಡುಹಗಲ ಮಾರ್ತಾಂಡನಂತೆ ಉಜ್ವಲ ವೈಭವದಿಂದ ಬೆಳಗುತ್ತಿದ್ದ ಹೊಯ್ಸಳರ ಅರಮನೆಯಲ್ಲಿ ವಿಧಿ ಇದ್ದಕ್ಕಿದ್ದ ಹಾಗೇ ನಡುರಾತ್ರಿಯ ಕತ್ತಲನ್ನು ಕವಿಯಿಸಿತು—ಎರೆಯಂಗದೇವನ ಬಾಳ ಮರೆವನ್ನ ಸಾವಿನ ಸಿಡಿಲೇಟಿನಿಂದ ಮುರಿದು.

ಹೊಯ್ಸಳರ ಕೀರ್ತಿಲತೆಗೆ ಆಶ್ರಯನಾಗಿ ಹೆಮ್ಮರದಂತೆ ಬೆಳೆದ ಎರೆಯಂಗದೇವ ವಿಧಿಯ ವಿಕಟಾಟ್ಟಹಾಸದ ಸಿಡಿಲಾಘಾತಕ್ಕೆ ಗುರಿಯಾಗಿ ಧರಾಶಾಯಿಯಾದಾಗ, ವೃದ್ಧಾಪ್ಯದಲ್ಲಿ ಮಗನನ್ನ ನಂಬಿ ಬೆಳೆದ ವಿನಯಾದಿತ್ಯನ ಬಾಳಬಳ್ಳಿಯೂ, ಮಗನೊಂದಿಗೆ ಇಳೆಗುರುಳಿ, ಹೊಯ್ಸಳ ರಾಜ್ಯ ಲಕ್ಷ್ಮಿ ಇದ್ದಕ್ಕಿದ್ದ ಹಾಗೇ ಅನಾಥೆಯಾದಳು.

ಆ ಕತ್ತಲು ಕವಿದ ಹೊತ್ತಿನಲ್ಲಿ ಎರೆಯಂಗದೇವನ ಪ್ರಥಮ ಪುತ್ರ ಬಲ್ಲಾಳರಾಯ ಸಿಂಹಾಸನವನ್ನೇರಿದ.

ಬಲ್ಲಾಳರಾಯ ತನ್ನ ತಂದೆ ಎರೆಯಂಗದೇವನಿಗೆ ತಕ್ಕ ವೀರಪುತ್ರ. ಆದರೆ ಹುಟ್ಟಿನೊಂದಿಗೇ ಕೈಹಿಡಿದು ಬಂದು, ಆಗಾಗ ಮರುಕಳಿಸಿ, ಉಲ್ಬಣಿಸಿ, ಕಾಡುವ ರೋಗ ಬಾಧೆ, ಅತನ ಮೈಯನ್ನು ಟೊಳ್ಳು ಮಾಡಿ, ಆತನ ರೋಗಗ್ರಸ್ತ ದುರ್ಬಲ ಹಸ್ತಗಳಿಂದ ಸುಲಭವಾಗಿ ಹೊಯ್ಸಳ ರಾಜ್ಯಶ್ರೀಯನ್ನು ಕಸಿದುಕೊಳ್ಳಬಹುದು ಎಂಬ ಆಸೆಯನ್ನು ಹೊಯ್ಸಳ ಶತ್ರುಗಳಲ್ಲಿ ಮೂಡಿಸಿತು.

ವಿನಯಾದಿತ್ಯ, ಎರಯಂಗದೇವರಿಂದ ಒದೆತಿಂದು, ಬಾಲ ಮುದುರಿಕೊಂಡಿದ್ದ ಚೆಂಗಾಳ್ವ, ಕೊಂಗಾಳ್ವ ಮೊದಲಾದವರು, ಮತ್ತೆ ಹಲ್ಲು ಮಸೆಯಲಾರಂಭಿಸಿದರು.

ಆ ಹೊತ್ತಿನಲ್ಲಿ ನೃಪಕಾಮ ದೊರೆಯಿಂದ ಪಾಲಿತನಾದ ಏಚದಂಡನಾಯಕನ ಮಗ ದಂಡನಾಯಕ ಗಂಗರಾಜ, ವಿನಯಾದಿತ್ಯನ ಮಡದಿ ಕೆಳೆಯಬ್ಬರಸಿಯಿಂದ ಪರಿಪಾಲಿತನಾದ ಮರಿಯಾನೆದಂಡನಾಯಕನ ಮಕ್ಕಳಾದ ಮರಿಯಾನೆ ಮತ್ತು ಭರತದಂಡನಾಯಕರು, ಎರೆಯಂಗದೇವನ ಅಳಿಯನಾದ ಹರಿಗೆಯ ಹೆಮ್ಮಾಡಿರಾಯ ಮೊದಲಾದ ನಿಷ್ಠರ ನೆರವು—

ಅವರೆಲ್ಲರಿಗಿಂತ ಹೆಚ್ಚಾಗಿ, ಬಲ್ಲಾಳರಾಯನ ಎರಡು ಬಾಹುಗಳಂತಿದ್ದ ಸೋದರರು ವಿಷ್ಣುವರ್ಧನ-ಉದಯಾದಿತ್ಯರ ಭ್ರಾತೃವಾತ್ಸಲ್ಯಪೂರ್ಣವಾದ ಪರಾಕ್ರಮ—

ಇವು ಉಕ್ಕಿನ ಕೋಟೆಯಾಗಿ ನಿಂತು, “ಅರಸು ದುರ್ಬಲನಾದ ಮಾತ್ರಕ್ಕೆ ರಾಜ್ಯವೇ ದುರ್ಬಲವಾದಂತಲ್ಲ” ಎಂಬ ನಿಷ್ಠುರ ಸತ್ಯವನ್ನು ಹೊಯ್ಸಳರ ಆಜನ್ಮ ವೈರಿಗಳಿಗೆ ಎಂದೆಂದೂ ಮರೆಯದಂತೆ ಮನವರಿಕೆ ಮಾಡಿಕೊಟ್ಟವು.

ಆ ವಿಜಯಗಳೊಂದಿಗೆ, ವಿಜಯ ಶ್ರೀ, ಕೀರ್ತಿಲಕ್ಷ್ಮಿ, ಭಾಗ್ಯದೇವತೆಗಳಂತಿದ್ದ ಮರಿಯಾನೆದಂಡನಾಯಕನ ಮಕ್ಕಳಾದ ಪದ್ಮಲೆ, ಚಾಮಲೆ, ಬೊಪ್ಪಲಾದೇವಿಯರನ್ನು ಪಾಣಿಗ್ರಹಣ ಮಾಡಿ, ಬಲ್ಲಾಳರಾಯ, ಕತ್ತಲುಕವಿದ ಹೊಯ್ಸಳ ಆಕಾಶದಲ್ಲಿ ಮತ್ತೆ ಆಶಾತಾರೆಯನ್ನು ಹೊಳೆಯಿಸಿದ.

ಎಲ್ಲರೂ ಮತ್ತೆ ಇನ್ನು ಏಳಿಗೆಯ ಕಾಲ ಆರಂಭವಾಯಿತು ಎಂಬ ತೃಪ್ತಿಯನ್ನು ತಳೆದರು.

ಆದರೆ ಅಷ್ಟುಬೇಗ, ಅಷ್ಟು ಸುಲಭವಾಗಿ, ಆ ತೃಪ್ತಿಯನ್ನು ನೀಡುವ ಬಯಕೆ ವಿಧಿಗಿರಲಿಲ್ಲ.

ಬಲ್ಲಾಳರಾಯನ ವಿವಾಹೋತ್ಸವವಾದ ಹರ್ಷದಲ್ಲಿ ಹೊಯ್ಸಳ ರಾಜ್ಯ ತಲ್ಲೀನವಾಗಿದ್ದ ಹೊತ್ತನ್ನೇ, ತಮ್ಮ ಮಿತ್ರದ್ರೋಹದ ಕಿರಾತ ಕಾರ್ಯಕ್ಕೆ ಆರಿಸಿಕೊಂಡಂತೆ, ಹೊಯ್ಸಳರ ರಕ್ತದಿಂದ ಪುಷ್ಟನಾದ ಚಾಲುಕ್ಯ ಚಕ್ರವರ್ತಿ ವಿಕ್ರಮಾದಿತ್ಯ, ಕಾಪಾಡಿದ ಕೈಯನ್ನು ಕಡಿಯುವ ಅಳಿಯಾಸೆಯಿಂದ, ತನ್ನ ಸಾಮನ್ತನಾದ ಪೊಟ್ಟಿಪೊಂಬುರ್ಚಪುರದ ಸಾಂತರ ಅರಸು ಜಗದೇವನನ್ನು ಹೊಯ್ಸಳ ರಾಜ್ಯದ ಮೇಲೆ ಧಾಳಿಮಾಡಲು ಅಟ್ಟಿದ.

ಆ ದಿಕ್ಕಿನಿಂದ ಬಲ್ಲಾಳರಾಯನಾಗಲಿ, ಅಥವಾ ಆತನ ದಂಡನಾಯಕರಾಗಲಿ, ಯಾರೂ ಭೀತಿಯನ್ನು ನಿರೀಕ್ಷಿಸಿರಲಿಲ್ಲ. ರಕ್ಷಣೆಯನ್ನು ನಿರೀಕ್ಷಿಸಿದ ದಿಕ್ಕಿನಿಂದಲೇ, ಆಪತ್ತು ಕವಿದು ಬರುವುದೆಂದು ಕನಸುಮನಸಿನಲ್ಲೂ ಊಹಿಸದ ಹೊಯ್ಸಳರ ನಂಬಿಕೆಯನ್ನು ದುರುಪಯೋಗಪಡಿಸಿಕೊಂಡ ಜಗದೇವರಾಯನ ಸೇನೆ, ರಾಜಧಾನಿ ದ್ವಾರಸಮುದ್ರದ ಬಳಿಗೇ ಬಂದು, ಕೋಟೆಯಮೇಲೆ ಅಂಬಿನ ಮಳೆಗರೆಯುವವರೆಗೂ, ಯಾರಿಗೂ ಆ ದಾಳಿಯ ಸುಳಿವು ಸಿಗಲಿಲ್ಲ.

ಎಂತಲೇ ಒಂದು ಗಳಿಗೆ ಎಲ್ಲರೂ ದಿಗ್ಭ್ರಾಂತರಾದರು. ನಿಂತ ನೆಲವೇ ಕುಸಿದಂತಾದ ಆ ಗಳಿಗೆಯಲ್ಲಿ ಅಲ್ಪಕಾಲ ಕಿಂಕರ್ತವ್ಯಮೂಢನಾಗಿದ್ದ ಬಲ್ಲಾಳರಾಯನ ಹೃದಯದಲ್ಲಿ, ಮರುಗಳಿಗೆಯೇ ಕ್ರೋಧದ ದಾವಾಗ್ನಿ ಪ್ರಜ್ವಲಿಸಿತು. ಈ 'ಮಿತ್ರದ್ರೋಹ ಮೃತ್ಯುವಿಗೆ ಆಹ್ವಾನ'ವೆಂಬ ಪಾಠವನ್ನು ಜಗದೇವರಾಯನಿಗೆ, ಅವನ ಸೋಲಿನ ಮೂಲಕ ಚಾಲುಕ್ಯ ಚಕ್ರವರ್ತಿಗೆ ಕಲಿಸುವ ನಿರ್ಧಾರದಿಂದ, ಬಲ್ಲಾಳರಾಯ ಸ್ವಯಂ ಖಡ್ಗ ಧರಿಸಿದ.

ಬಲ್ಲಾಳರಾಯ ಅಟ್ಟಿದ ವೇಗಾಯರಿದಿಂದ ಜಗದೇವರಾಯನ ದಾಳಿಯ ಸುದ್ದಿಯನ್ನರಿತ, ವಿಷ್ಣುವರ್ಧನ ತೊಂಡನೂರಿನಿಂದ, ಪ್ರಬಲವಾದ ಸೇನೆಯೊಂದಿಗೆ ರಾಜಧಾನಿಯ ರಕ್ಷಣೆಗೆ ಧಾವಿಸಿದ.

ಜಗದೇವರಾಯ ದ್ವಾರಸಮುದ್ರದ ಮೇಲೆ ಧಾಳಿ ಮಾಡಿದಾಗ, ಬಲ್ಲಾಳರಾಯನ ಆರೋಗ್ಯ ನೆಟ್ಟಗಿರಲಿಲ್ಲ. ಹುಟ್ಟಿದಂದಿನಿಂದಲೂ ಆತನನ್ನು ಬಳಲಿಸುತ್ತಿದ್ದ ವ್ಯಾಧಿ ಮತ್ತೆ ಮರುಕಳಿಸುವ ಸೂಚನೆಗಳನ್ನು ನೀಡಿತ್ತು. ಎಂತಲೇ ಆತನೇ ಸ್ವಯಂ ರಣರಂಗಕ್ಕೆ ಹೋಗುವುದನ್ನು ತಪ್ಪಿಸಲು, ಆತನ ಸಚಿವರು, ದಂಡನಾಯಕರು ಪ್ರಯತ್ನಿಸಿದರು. ಆದರೆ ಬಲ್ಲಾಳರಾಯ ಅವರು ಯಾರ ಮಾತಿಗೂ ಕಿವಿಕೊಡಲಿಲ್ಲ.

'ಈ ಧಾಳಿಯಿಂದ ಚಾಲುಕ್ಯ ಚಕ್ರವರ್ತಿಗಳು ನಮ್ಮ ಪೌರುಷಕ್ಕೇ ಸವಾಲು ಹಾಕಿದ್ದಾರೆ. ರೋಗಿಷ್ಟನಾದ ಇವನೇನು ನಮ್ಮ ದಾಳಿಯನ್ನು ಎದುರಿಸಿಯಾನು ಎಂಬ ನಂಬಿಕೆ ಅವರಿಗೆ ಇರುವಂತಿದೆ. ಇಲ್ಲವಾದಲ್ಲಿ ಅವರು ಈ ಹೊತ್ತನ್ನೇ ತಮ್ಮ ಮಿತ್ರದ್ರೋಹಕ್ಕೆ ಆರಿಸಿಕೊಳ್ಳುತ್ತಿರಲಿಲ್ಲ. ಎಂತಲೇ ಈ ಬಾರಿಯದು ನಮ್ಮ ಸತ್ವಪರೀಕ್ಷೆಯ ಸಮರ. ಜಾಡ್ಯದುರ್ಬಲವಾದರೂ, ನಮ್ಮ ತೋಳುಗಳಲ್ಲಿ ಇಂಥ ಹಿಸುಣ ಸೊಳ್ಳೆಗಳನ್ನು ಹೊಸಗಬಲ್ಲ ಶಕ್ತಿಯಿದೆ ಎಂದೇ ತೋರಿಸಿಕೊಡಬೇಕು. ಇಲ್ಲವಾದಲ್ಲಿ ಕಿರೀಟ ಹೊತ್ತವರಿಗೆ ಕತ್ತಿ ಹಿಡಿಯುವಷ್ಟು ಶಕ್ತಿಯೂ ಇರಲಿಲ್ಲ ಎಂದು ಲೋಕ ನಾಳೆ ನಮ್ಮನ್ನು ಆಡಿಕೊಂಡು ನಕ್ಕೀತು. ಆದ್ದರಿಂದ ಯಾರೂ ನಮ್ಮನ್ನು ತಡೆಯಬೇಡಿ.'

—ಎಂದು ನಿಷ್ಠುರವಾಗಿ ಹೇಳಿದ.

'ಜಿತೇನ ಲಭ್ಯತೇ ಲಕ್ಷ್ಮೀ

ಹತೇನಾಪಿಸುರಾಂಗನಾ

ಕ್ಷಣೇ ವಿಧ್ವಂಸಿನೀ ಕಾಯೇ

ಕಾಚಿಂತಾ ಮರಣೇ ರಣೇ’

—ಎಂದು ಸ್ಪಷ್ಟವಾಗಿ ಸಾರಿ ಹೇಳಿ, ಆ ಆರ್ಯೋಕ್ತಿಯನ್ನು ಉದ್ಧರಿಸಲೇ ಜನಿಸಿದವನಂತೆ, ಸಮರವಸ್ತ್ರ ಧರಿಸಿ, ತನ್ನ ಕಾಂಭೋಜವಾಜಿಯನ್ನೇರಿ, ಒರೆಗಳೆದ ಖಡ್ಗವನ್ನು ಸಿಡಿಲಿನಂತೆ ಬೀಸುತ್ತಾ, ಜಗದೇವನ ಪಾಳಯದಲ್ಲಿ ನುಗ್ಗಿದ.

ಅಂದಿನ ಸಮರದಲ್ಲಿ ಬಲ್ಲಾಳರಾಯ ಮೆರೆದ ಬಲ್ಲಾಳ್ತನ ’ನಭೂತೋ ನಭವಿಷ್ಯತಿ’ ಎನ್ನುವಂತಿತ್ತು.

ಇದಿರಾದ ಸೈನಿಕರನ್ನು ಕೊಚ್ಚಿ ಕೆಡಹುತ್ತಾ, ಕುರುಕ್ಷೇತ್ರದ ಸಮರಾಂಗಣದಲ್ಲಿ ಎಲ್ಲರನ್ನು ಬಿಟ್ಟು, ತನ್ನ ಪತ್ನಿಯ ಮಾನಭಂಗ ಮಾಡಿದ ದುಶ್ಶಾಸನನನ್ನೇ ಹುಡುಕಿಕೊಂಡು ಅಲೆದ ಭೀಮಸೇನನಂತೆ, ಬಲ್ಲಾಳರಾಯ ಗಜಾಶ್ವಪಡೆಗಳ ನಡುವೆ ಅವಿತ ಜಗದೇವರಾಯನನ್ನೇ ಹುಡುಕಿಕೊಂಡು ಹೊರಟ. ಆ ದಿನ ಆತನ ಖಡ್ಗವನ್ನು ಎದುರಿಸಬಲ್ಲ ಶಕ್ತಿ ಲೋಕದಲ್ಲಿ ಯಾರಿಗೂ ಇದ್ದಂತಿರಲಿಲ್ಲ. ಆತನ ಖಡ್ಗಜ್ವಾಲೆಯ ಪ್ರಚಂಡ ದೀಧಿತಿಯ ಇದಿರು, ಅರಿಬಲ ಮಂಜಿನ ಮೋಡದಂತೆ ಕರಗಿತು.

ಹೊಯ್ಸಳರನ್ನು ಕೆಣಕಲು ಬಂದ ಜಗದೇವರಾಯ ತನ್ನ ಜೀವಭೀತಿಯನ್ನು ಮರೆತು ಬಂದಿರಲಿಲ್ಲ. ತನ್ನ ಜೀವರಕ್ಷಣೆಗೆ ಸಾಕಷ್ಟು ಸಿದ್ಧತೆಗಳನ್ನು ಮಾಡಿಕೊಂಡಿದ್ದ. ಆನೆಯ ಮೇಲಿನ ಅಂಬಾರಿಯಲ್ಲಿ ಕುಳಿತ ಆತನನ್ನು ಗಜಾಶ್ವ ಪಥಿಕ ಬಲಗಳು ಕೋಟೆಯಂತೆ ಸುತ್ತುಗಟ್ಟಿದ್ದವು. ರಣಾಂಗಣದಲ್ಲಿ ಅವನನ್ನು ಅರಸಿಕೊಂಡು ಬಂದ ಬಲ್ಲಾಳರಾಯ, ಸುತ್ತುಗಟ್ಟಿದ ಸೇನಾವ್ಯೂಹವನ್ನು ಭೇದಿಸಿಕೊಂಡು, ಅವನ ಆನೆಯ ಮೇಲೇ ತನ್ನ ಕುದುರೆಯನ್ನು ಹಾಯಿಸಿ, ಮೊದಲ ಏಟಿಗೇ ಆನೆಯ ಸೊಂಡಲನ್ನು ಕತ್ತರಿಸಿ ಕೆಡವಿದ. ಬಲ್ಲಾಳರಾಯನ ಪರಾಕ್ರಮವನ್ನು ಮೂರು ಲೋಕಕ್ಕೂ ಸಾರುವಂತೆ, ಗಾಯಗೊಂಡ ದಂತಿ ಘೀಳಿಟ್ಟು, ಗಾಯದ ನೋವಿನಿಂದ ಹುಚ್ಚಾಗಿ, ಮಾವಟಿಗನ ಅಂಕುಶದ ಅಂಕೆಯನ್ನೂ ಲೆಕ್ಕಿಸದೆ ಹುಚ್ಚಾಗಿ, ಇದಿರಾದವರನ್ನು ತುಳಿದು

ಓಡತೊಡಗಿತು. ತನ್ನ ಗಜಕ್ಕಾದ ಗತಿಯೇ ತನಗೂ ಆಗಬಹುದೆಂದು ಊಹಿಸಿದ ಜಗದೇವರಾಯ, ಗೆಲುವಿನ ಆಸೆಯನ್ನು ಬಿಟ್ಟು, ಜೀವ ಉಳಿದರೆ ಸಾಕು ಎಂದು ಅನೆಯಿಂದ ಧುಮುಕಿ, ಪಲಾಯನ ಮಾಡಿದ. ಗೌರವಕ್ಕಿಂತಲೂ ಜೀವ ಭೀತಿ ಹಿರಿದೆಂದು ಭಾವಿಸಿದ ಜಗದೇವರಾಯನನ್ನು ನೋಡಿ, ಬಲ್ಲಾಳರಾಯನಿಗೆ ಹೇಸಿಗೆ ಹುಟ್ಟಿತು.

'ಛಿ! ಪೋರ್ಪ್ವಂದೆ! ಓಡಿಹೋಗುತ್ತೀಯಾ ಕುನ್ನಿ.'

—ಎಂದು ಮೂದಲಿಸುತ್ತಾ, ಓಡುವ ಜಗದೇವರಾಯನ ಬೆನ್ನಟ್ಟಿ ಬಳಿಸಾರಿ, ಅವನನ್ನು ಹಿಡಿಯಲು ಕತ್ತಿಗೇ ಕೈಹಾಕಿದ.

ಕೊಲ್ಲಬಂದ ಬೇಟೆಗಾರರನ್ನು ಕಂಡ ಹಂದಿಯಂತೆ, ಜೀವಭಯದಿಂದ ಚೀರುತ್ತಾ, ಜಗದೇವರಾಯ ಕುಣಿದು, ಕುಪ್ಪಳಿಸಿ ಹೊಯ್ದಾಡಿ, ಹೇಗೋ ಬಲ್ಲಾಳರಾಯನ ಕೈಯಿಂದ ತಪ್ಪಿಸಿಕೊಂಡು, ಆರೋಹಿಯಿಲ್ಲದೆ ಅಲೆಯುತ್ತಿದ್ದ ಅಶ್ವವೊಂದನ್ನು ಹತ್ತಿ ದೌಡಾಯಿಸಿದ. ಆ ಗದ್ದಲದಲ್ಲಿ ಅವನ ಕತ್ತಿನ ಪಚ್ಚೆಯ ಪದಕದ ಮೌಕ್ತಿಕ ಮಾಲೆ, ಬಲ್ಲಾಳರಾಯನ ಕೈಯಲ್ಲೇ ಉಳಿಯಿತು.

ಜಗದೇವರಾಯ ಓಡಿದುದನ್ನು ಕಂಡು, ಅವನ ಸೇನೆಯ ಅಳಿದುಳಿದ ಸೈನಿಕರೂ, ಅವನು ಓಡಿದ ದಾರಿಯೇ ತಮಗೂ ಮಾರ್ಗವೆಂದರಿತು, ದ್ವಾರಸಮುದ್ರದ ಹೊಯ್ಸಳಲಕ್ಷ್ಮಿಗೆ ತಮ್ಮ ಕೀರ್ತಿಯನ್ನು ಪಾರಗಾಣಿಕೆಯಾಗಿ ಒಪ್ಪಿಸಿ ಓಡಿದರು. ಜಗದೇವರಾಯನ ಆನೆ ಕುದುರೆಗಳು, ಭಂಡಾರ, ಶಸ್ತ್ರ ಸಂಪತ್ತು ವಿಜಯೀ ಹೊಯ್ಸಳ ಪಡೆಯ ಕೈ ವಶವಾಯಿತು. ಜಗದೇವರಾಯನ ಓಟ ನಾಣ್ನುಡಿಯಾಗಿ ನಿಂತಿತು ಜನದಲ್ಲಿ. ಬಲ್ಲಾಳರಾಯನ ಬೀರಕ್ಕೆ ಮೆಚ್ಚಿದ ಜಯಲಕ್ಷ್ಮಿ ಆತನ ಕೊರಳಿಗೆ ವಿಜಯ ಮಾಲೆಯನ್ನಿಕ್ಕಿದಳು.

ವಿಜಯಸ್ನಾನದಿಂದ ದುರ್ಬಲವಾದ ಬಲ್ಲಾಳರಾಯನ ಮೈಯನ್ನು ಆವರಿಸಿದ ಸಮರಾವೇಶ ಇಳಿಯಿತು. ಅದರೊಂದಿಗೆ ಮತ್ತೆ ವ್ಯಾಧಿಯೂ ಮರುಕಳಿಸಿತು.

ಮೊದಲೇ ರೋಗದಿಂದ ದುರ್ಬಲವಾದ ಬಲ್ಲಾಳರಾಯನ ಮೈ ಯುದ್ಧದಲ್ಲಾದ ಗಾಯಗಳ ರಕ್ತಸ್ರಾವದಿಂದ ಮತ್ತಷ್ಟು ದುರ್ಬಲವಾಗಿ, ಮಲಗಿದಲ್ಲಿಂದ ಅಲುಗಾಡಲಾಗದಂತಾಗಿ ಹಾಸಿಗೆ ಹಿಡಿದ.

ಅದರಿಂದಾಗಿ ಆತನ ನೆರವಿಗೆ ಬಂದ ವಿಷ್ಣುವರ್ಧನ, ಯುದ್ಧಾನಂತರ ತೊಂಡನೂರಿಗೆ ಹಿಂದಿರುಗದೆ, ತನ್ನ ಅಗ್ರಜನ ಬಳಿಯೇ ನಿಂತ.

ದಿನದಿನಕ್ಕೆ ಮೈಯ ಗಾಯಗಳು ಮಾಡದಂತೆ, ಬಲ್ಲಾಳರಾಯ ಮತ್ತೆ ಚೇತರಿಸಿಕೊಳ್ಳುತ್ತಾನೆ ಎಂಬ ವಿಷ್ಣುವರ್ಧನನ ನಿರೀಕ್ಷೆ ನಿಜವಾಗದೆ, ದಿನ ದಿನಕ್ಕೆ ಆತನ ಆರೋಗ್ಯ ಕೆಡುತ್ತಲೇ ಹೋಗಿ, ಬಲ್ಲಾಳರಾಯನಿಗೇ ತಾನಿನ್ನು ಬದುಕುವುದಿಲ್ಲ ಎಂಬುದು ಮನವರಿಕೆಯಾಯಿತು.

ಒಂದು ದಿನ ಸಂಜೆ, ಹಗಲಿನ ಬಿಸಿಲಿನೊಂದಿಗೆ ತಾನೂ ಉರಿದ ಜ್ವರದ ತಾಪ, ಕೊಂಚ ತಗ್ಗಿದಾಗ, ಬಲ್ಲಾಳರಾಯ ಜ್ವರತಾಪದಿಂದ ಬಳಲಿದ ಕಣ್ಣನ್ನು ತೆರೆದು, ಸನ್ನೆಯಿಂದ ಸುತ್ತಲಿದ್ದ ಮಡದಿಯರು, ಪರಿಚಾರಿಕೆಯರು ಎಲ್ಲರನ್ನೂ ಹೊರಗೆ ಕಳುಹಿ, ವಿಷ್ಣುವರ್ಧನನೊಬ್ಬನನ್ನೇ ತನ್ನ ಸಜ್ಜೆಯ ಬಳಿ ಉಳಿಸಿಕೊಂಡು, ಆತನನ್ನು ತನ್ನ ಹತ್ತಿರ ಬರುವಂತೆ ಕರೆದ.

’ಏನು ಅಣ್ಣಾಜಿ?’

—ಬಲ್ಲಾಳರಾಯನ ತಲೆದಿಂಬಿನ ಬಳಿ ನಿಂತು ಕೇಳಿದ ವಿಷ್ಣುವರ್ಧನ.

’ಬಿಟ್ಟೇ...’

—ಎಂದು ತನ್ನ ಜ್ವರತಪ್ತ ಹಣೆಯನ್ನು ನೇವರಿಸುತ್ತಿದ್ದ ವಿಷ್ಣುವರ್ಧನನ ಕೈಯನ್ನು ತನ್ನ ಕೈಗಳಿಂದ ಹಿಡಿದು, ಆತನ ಮುಖವನ್ನೇ ದಿಟ್ಟಿಸಿ ನೋಡುತ್ತಾ—

'ನಾನಿನ್ನು ಬದುಕುವುದಿಲ್ಲ ಬಿಟ್ಟಿ.'

—ಎಂದ ಬಲ್ಲಾಳರಾಯ ಕ್ಷೀಣಸ್ವರದಲ್ಲಿ.

ಆ ಮಾತನ್ನು ಕೇಳುತ್ತಿದ್ದಹಾಗೆ ಬಿಟ್ಟಿದೇವನ ಕಣ್ಣುಗಳನ್ನು ಸಬಳದಿಂದ ಇರಿದಂತಾಗಿ, ಕಣ್ಣಿನಲ್ಲಿ ನೀರು ತುಂಬಿತು. ಆದರೆ ಕಣ್ಣಿನಲ್ಲಿ ತುಂಬಿದ ನೀರು ಕೆಳಗೆ ಧುಮುಕದಂತೆ ತಡೆದು ದುಃಖದಿಂದ ಕಂಪಿಸುವ ಧ್ವನಿಯನ್ನು ಪ್ರಯತ್ನಪೂರ್ವಕವಾಗಿ ಬಿಗಿಮಾಡಿ, ಎಲ್ಲೋ ತಲೆಮರಸಿಕೊಂಡ ನಗೆಯನ್ನು ಬಲವಂತವಾಗಿ ತುಟಿಯಮೇಲೆ ತಂದು-

'ನೀವಿಷಷ್ಟು ಧೈರ್ಯ ಕೆಡಬಾರದು ಅಣ್ಣಾಜಿ. ದಿನ ದಿನಕ್ಕೆ ನಿಮ್ಮ ಆರೋಗ್ಯ ಉತ್ತಮವಾಗುತ್ತಿದೆಯೆಂದು ವೈದ್ಯರು ಹೇಳುತ್ತಿದ್ದಾರೆ.'

—ಎಂದು ಬಲ್ಲಾಳರಾಯನ ಹೃದಯದಲ್ಲಿ, ತನಗೇ ಇಲ್ಲದ ಆಸೆಯನ್ನು ತುಂಬಲು ಯತ್ನಿಸಿದ ವಿಷ್ಣುವರ್ಧನ.

ವಿಷ್ಣುವರ್ಧನನ ಮಾತು ಕೇಳಿ, ಬಲ್ಲಾಳರಾಯನ ಕಾಂತಿಗುಂದಿದ ತುಟಿಗಳ ಮೇಲೆ ಮಾಸಲು ನಗೆ ಸುಳಿಯಿತು.

'ಸಾವಿನ ಭಯದಿಂದ ನಾನು ಈ ಮಾತು ಹೇಳುತ್ತಿದ್ದೇನೆ ಎಂದು ಕೊಂಡೆಯಾ ಬಿಟ್ಟಿಯಣ್ಣ, ಊಹೂ-ನನಗಾಭೀತಿಯಿಲ್ಲ. ಎಂದಿದ್ದರೂ ಬಂದೇ ಬರುವ ಸಾವು ಇಂದೇ ಬಂದರೇನು. ಅದು ಹಾಸಿಗೆಯ ಮೇಲೆ ಬರದೆ, ಸಮರಾಂಗಣದಲ್ಲೇ ಬಂದಿದ್ದರೆ ಒಳಿತಾಗಿತ್ತು. ಹೀಗೆ ಬರಬೇಕು. ಎಂದು ಶಿವನಿಚ್ಛೆಯಿತ್ತು; ಹಾಗಾಗಲಿ. ನನಗೆ ಆ ಚಿಂತೆ ಇಲ್ಲ ಬಿಟ್ಟಿ, ನನಗಿರುವುದೇ ಬೇರೆ ಚಿಂತೆ'

'ಅದೇನು ಹೇಳಿ ಅಣ್ಣಾಜಿ. ನಿಮ್ಮ ಚಿಂತೆ ಏನಿದ್ದರೂ ನಾನು ತೀರಿಸುತ್ತೇನೆ.'

'ನಿಜವೇ?'

'ಗತಿಸಿದ ಅಪ್ಪಾಜಿಯವರ ಪಾದದಾಣೆ, ಅವ್ವೆ ಏಚಲೆಯ ತಲೆಯಾಣೆ— ನಿಮಗೆ ಕೊಟ್ಟ ಮಾತು ತಪ್ಪುವುದಿಲ್ಲ.'

'ಮಾತು ಏನೆಂದು ಕೇಳದೇ ಭಾಷೆ ಕೊಟ್ಟೆಯಲ್ಲ ಬಿಟ್ಟಿಯಣ್ಣ....'

'ಅದು ಏನಿದ್ದರೂ-ಅದು ನನಗೆ ದೈವಾಜ್ಞೆ. ಅದೇನು ಹೇಳಿ; ಆ ಚಿಂತೆಯನ್ನು ಮರೆತುಬಿಡಿ.'

'ನನಗಿರುವುದು ನನ್ನ ಚಿಂತೆಯಲ್ಲ, ಈ ರಾಜ್ಯದ ಚಿಂತೆ ಬಿಟ್ಟಿಯಣ್ಣ. ಚೋಳರೊಬ್ಬರೇ ನಮ್ಮ ವೈರಿಗಳು ಎಂದುಕೊಂಡಿದ್ದೆವು. ಚಾಲುಕ್ಯರು ನಮ್ಮ ಪ್ರಭುಗಳು, ಮಿತ್ರರು ಎಂದು ನಂಬಿಕೊಂಡಿದ್ದೆವು. ಈಗ ಆ ನಂಬಿಕೆ ಸುಳ್ಳೆಂದು ತಿಳಿಯಿತು. ಈಗ ಹೊಯ್ಸಳರಿಗೆ ಮಿತ್ರರೇ ಇಲ್ಲ ಬಿಟ್ಟಿಯಣ್ಣ. ಇತ್ತಂಡವೂ ಅಹಿತವಾದ ಈ ಹೊತ್ತಿನಲ್ಲಿ ಈ ಹೊಯ್ಸಳ ರಾಜ್ಯ ಹೇಗೆ ಉಳಿದೀತೋ ಎಂದು ನನಗೆ ಚಿಂತೆಯಾಗಿದೆ....'

'ನೀವೊಬ್ಬರು ಮೈಗಟ್ಟಿಯಾಗಿ ಇದ್ದರೆ, ಚೋಳ ಚಾಲುಕ್ಯರೇನು, ಅಖಂಡ ಪೃಥ್ವೀಮಂಡಲವೇ ಮುನಿದು ಮೇಲೆ ಬಿದ್ದರೂ, ದ್ವಾರಸಮುದ್ರದ ಕೋಟೆಯ ಒಂದು ಕಲ್ಲನ್ನೂ ಅಲ್ಲಾಡಿಸಲಾರದು ಅಣ್ಣಾಜಿ. ಆ ಚಿಂತೆ ಬಿಡಿ. ಅಂಥ ಹೊತ್ತು ಬಂದರೆ ನಮ್ಮ ತೋಳಿನಲ್ಲಿರುವುದು ಬೂರುಗದ ಅರಳೆಯಲ್ಲ, ಬಲಿಷ್ಟ ಮಾಂಸಖಂಡ ಎಂಬುದನ್ನು ತೋರಿಸಿಕೊಡೋಣ.'

'ನಿನ್ನ ಬಾಹುವಿನಲ್ಲಿ ಆ ಬಲವಿದೆ ಬಿಟ್ಟಿಯಣ್ಣ, ಅದಕ್ಕೇ ನಾನು ನಿನಗೇ ಹೇಳುತ್ತಿರುವುದು, ಈ ಚೋಳ, ಚಾಲುಕ್ಯರ ಕುತ್ತಿನಿಂದ ಹೊಯ್ಸಳ ರಾಜ್ಯವನ್ನು ಕಾಪಾಡುತ್ತೇನೆ ಎಂದು ನೀನು ಮಾತುಕೊಟ್ಟರೆ ಸಾಕು.'

'ಅಗಲೇ ಆ ಮಾತು ಕೊಟ್ಟಿನಲ್ಲ ಅಣ್ಣಾಜಿ. ಅಷ್ಟು ಬೇಕೆಂದರೆ ಹೇಳಿ-ಯಾರು ಬೇಕು? ಅವರ ಮೇಲೆ ದಂಡು ನಡೆಸಿ, ಅವರ ಮಂಡೆಯನ್ನು ತಂದು ನಿಮ್ಮ ಅಡಿಗಳ ಮೇಲೆ ದಿಂಡುರಳು ಕೆಡಹುತ್ತೇನೆ.'

'ಅವರನ್ನು ಬರೀ ಸೋಲಿಸಿದರೆ ಸಾಲದು ಬಿಟ್ಟಿಯಣ್ಣ. ಮತ್ತೆ ಆ ಕುನ್ನಿಗಳು ಎಂದೆಂದೂ ನಮ್ಮ ರಾಜ್ಯದತ್ತ ತಲೆಯಿಕ್ಕದಂತಾಗಬೇಕು. ಅವರ ಸಾಮನ್ತರ ನೆತ್ತಿ ನಮ್ಮ ಪಾದಮುದ್ರೆ ಹೊತ್ತು ಬಾಳುವಂತಾಗಬೇಕು. ನೀಲಪರ್ವತದಿಂದ ಕೃಷ್ಣೆಯವರೆಗಿನ ಕನ್ನಡನಾಡು, ನಮ್ಮ ವ್ಯಾಘ್ರಲಾಂಛನದ ಆಡುಂಬೊಲವಾಗಬೇಕು. ದಿನದಿನವೂ ನಮ್ಮನ್ನು ಕಾಡುತ್ತಿರುವ ತಿಗುಳರು ನಮ್ಮ ಹಡಪ ಹೊರುವ ಊಳಿಗದಾಳುಗಳಾಗಬೇಕು. ಕೃತಘ್ನ ಚಾಲುಕ್ಯರು ನಮ್ಮ ಕತ್ತಿ ಹೊರುವ ತೊತ್ತುಗಳಾಗಬೇಕು. ಹಾಗಾದಾಗ, ನನ್ನ ಆತ್ಮಕ್ಕೆ ತೃಪ್ತಿಯಾಗುತ್ತದೆ ಬಿಟ್ಟಿಯಣ್ಣ. ಅದುವರೆಗೂ, ನನ್ನ ಪ್ರತೀಕಾರ ತೃಷೆಗೆ ತೃಪ್ತಿಯಿಲ್ಲ. ಅಷ್ಟನ್ನು ನೀನು ಮಾಡಬೇಕು.'

—ಮಾತನಾಡುವ ಆಯಾಸದಿಂದ ಎದೆ ಒತ್ತಿದ ತಿದಿಯಂತೆ ಸುಯ್ಯುತ್ತಿದ್ದರೂ ತಡೆದುಕೊಂಡು ಹೇಳಿದ ಬಲ್ಲಾಳರಾಯ.

'ಆಗಲಿ ಅಣ್ಣಾಜಿ. ನಿಮ್ಮ ಬಯಕೆಗೆ ನನ್ನ ಬಾಳು ಮೀಸಲು. ನನ್ನನ್ನು ಹರಸುತ್ತಾ ನೀವು ಸಿಂಹಾಸನದ ಮೇಲಿರಿ. ನಿಮ್ಮ ಬಯಕೆಯನ್ನು ನಿಮ್ಮ ಕಣ್ಣೆದುರಿಗೇ ಸಾರ್ಥಕಪಡಿಸಿ ತೋರುತ್ತೇನೆ.'

—ಭರವಸೆ ತುಂಬಿದ ಧ್ವನಿಯಲ್ಲಿ ಹೇಳಿದ ವಿಷ್ಣುವರ್ಧನ.

'ಆ ಬಯಕೆ ನನಗೂ ಇಲ್ಲದೆ ಇಲ್ಲ ಬಿಟ್ಟಿಯಣ್ಣ. ಆದರೆ ನಾನು ಬಲ್ಲೆ-ನನ್ನ ಈ ಭೌತಿಕ ಚಕ್ಷುಗಳಿಗೆ ಆ ಭಾಗ್ಯವಿಲ್ಲ. ಇನ್ನು ನಾನು ಬಹಳ ದಿನ ಇರುವುದಿಲ್ಲ.'

—ನಿರಾಶೆಯ ಪಾತಾಳಕ್ಕಿಳಿದು ಹೇಳಿದ ಬಲ್ಲಾಳರಾಯ.

'ನೀವಷ್ಟು ಅಧೈರ್ಯವಾಗಬಾರದು ಅಣ್ಣಾಜಿ. ಹಿಂದಿನ ಬಾರಿ ಈ ಬಾರಿಗಿಂತಲೂ ಉಗ್ರವಾಗಿದ್ದ ವ್ಯಾಧಿ ಚಾರುಕೀರ್ತಿ ಗುರುಗಳ ಕೃಪೆಯಿಂದ ಗುಣವಾಗಲಿಲ್ಲವೇ? ಈ ಬಾರಿಯೂ ಅವರ ಕೈಗುಣದಿಂದ, ತಪೋಬಲದಿಂದ ನಿಮ್ಮ ಮೈ ವಜ್ರಕಾಯವಾಗಬಹುದು. ಅವರಿಗೂ ಕೂಡಲೆ ಬರಬೇಕೆಂದು ಓಲೆ ಹೋಗಿದೆ.'

'ಸರಿ, ನಿನ್ನ ಬಯಕೆಗೆ ನಾನೇಕೆ ಅಲ್ಲ ಎಂದು ಹೇಳಲಿ ಬಿಟ್ಟಿಯಣ್ಣ, ಆದರೆ ನನ್ನೊಳಗೇ ಯಾವುದೋ ಶಕ್ತಿ ನುಡಿಯುತ್ತಿದೆ- 'ಹೇಳುವುದೇನಿದ್ದರೂ ಹೇಳಿ ಮುಗಿಸಿ ಬಿಡು. ಮತ್ತೆ ಅವಕಾಶ ಸಿಗುವುದಿಲ್ಲ' ಎಂದು, ಹೇಳಿದ್ದಾಯಿತು-ನನ್ನ ಕರ್ತವ್ಯ ನಾನು ಮಾಡಿದೇನೆ. ನನಗೆ ಕೊಟ್ಟ ಮಾತು ಮರೆಯಬೇಡ. ಎಲ್ಲ ಭಾರವೂ ನಿನ್ನ ಮೇಲಿದೆ. ದುರ್ಗಾಮಾತೆ ನಿನ್ನ ತೋಳುಗಳಿಗೆ ರಕ್ಷೆಯಾಗಿರಲಿ. ಸದಾಶಿವ ನಿನಗೆ ಸದಾ ಗೆಲುವನ್ನೇ ಅನುಗ್ರಹಿಸಲಿ'

—ಎಂದಷ್ಟು ಹೇಳಿ, ಆ ಮಾತಾಡಿದ ಆಯಾಸದಿಂದ ಭಾರವಾಗಿ ಏದುತ್ತಾ ಬಲ್ಲಾಳರಾಯ ಕಣ್ಣು ಮುಚ್ಚಿದ.

ಅಷ್ಟು ಮಾತಾಡುವ ಶಕ್ತಿಯೂ ಆತನಿಗಿರಲಿಲ್ಲವೋ ಏನೋ-ಆ ಶ್ರಮದಿಂದ ಮತ್ತೆ ಮೈಯಲ್ಲಿ ಜ್ವರ ಏರಿತು.

ಚೇಳಿನ ವಿಷದಂತೆ ಗಳಿಗೆಗಳಿಗೆಗೂ ಏರುತ್ತಾ ಹೋದ ಜ್ವರದ ಕಾವು, ಆ ಮೈಯ ಪಂಜರದಲ್ಲಿದ್ದ ಜೀವದ ಹಕ್ಕಿ ಹಾರಿ ಹೋದ ಬಳಿಕವೇ ಇಳಿದದ್ದು. ಅರಿಗಳನ್ನು ಗೆದ್ದ ಬಲ್ಲಾಳರಾಯ ಸಾವಿಗೆ ಶರಣಾಗತನಾದ. ಆತ ಇನ್ನಿಲ್ಲವೆಂಬುದನ್ನರಿತು ಅರಮನೆ ಕಣ್ಣೀರಿನ ಕಾಸಾರವಾಯಿತು. ರಾಜಧಾನಿ ದುಃಖದ ಬೀಡಾಯಿತು. ಊರೂರು, ಕೇರಿಕೇರಿಗಳಲ್ಲೂ ಕಂಬನಿದುಂಬಿದ ಜನ ಅನಾಥರಂತೆ ಗೋಳಿಟ್ಟು 'ಮುಂದೇನು ಗತಿ' ಎಂದು ಹಂಬಲಿಸಿದರು.

ಪುತ್ರದುಃಖದಿಂದ ಬೇಯುತ್ತಿರುವ ತಾಯಿ ಏಚಲಾದೇವಿ, ಸೌಭಾಗ್ಯ ತಿಲಕ ಶೂನ್ಯವಾಗಿ, ಕಂಬನಿಗರೆಯಲೇ ಬದುಕಿದಂತೆ ಉಳಿದ ಅತ್ತಿಗೆಯರು ಪದ್ಮಲೆ, ಚಾಮಲೆ, ಬೊಪ್ಪಲಾದೇವಿಯರು, ದುಃಖಿತರಾದವರನ್ನು ಸಂತೈಸಲು ಹೋಗಿ, ತಾವೇ ದುಃಖದ ಸುಳಿಯಲ್ಲಿ ಸಿಲುಕಿ ಕಂಗೆಟ್ಟ ಆಪ್ತೇಷ್ಟರು, ಬಲ್ಲಾಳರಾಯ ಅಪುತ್ರಕನಾಗಿ ಮೃತನಾದದ್ದರಿಂದ, ರಾಜ್ಯಕ್ಕೆ ಮುಂದಾರು ದಿಕ್ಕು ಎಂಬ ಚಿಂತೆಗೆ ಗುರಿಯಾದ ಸಚಿವ-ಸಾಮನ್ತರು- ಒಬ್ಬೊಬ್ಬರೂ, ಒಂದೊಂದು ಬಗೆಯ ದುಃಖದ ಪ್ರತಿಮೆಯಂತಿದ್ದರು.

ಆದರೆ ವಿಷ್ಣುವರ್ಧನನಿಗೆ ಮಾತ್ರ, ಎದೆಯಲ್ಲಿ ಉರಿಗೆದರುತ್ತಿರುವ ದುಃಖವನ್ನು ನುಂಗಿದ ಕ್ರೋಧಾಗ್ನಿ ಜ್ವಲಿಸುತ್ತಿತ್ತು. ದೇಶವನ್ನು ವ್ಯಾಪಿಸಿದ ರೋಧನ ಧ್ವನಿಯನ್ನು ಮೆಟ್ಟಿ ಒಂದೇ ಮಾತು ಹಗಲಿರುಳೂ ಅವನ ಕಿವಿಯಲ್ಲಿ ಮೊಳಗುತ್ತಿತ್ತು—

'ಈ ಚಾಲುಕ್ಯರ ಶನಿ ದಾಳಿ ನಡೆಯದಿದ್ದರೆ ತನ್ನ ಅಣ್ಣ ಇನ್ನೂ ನಾಲ್ಕುದಿನ ಬದುಕುತ್ತಿದ್ದ. ಅವರೇ ಅವನನ್ನು ಅಷ್ಟು ಬೇಗ ಸಾವಿಗೆ ದೂಡಿದವರು. ಅವರನ್ನು ತುಳಿಯಬೇಕು; ಹೆಸರುಳಿಯದಂತೆ ಹೊಸಗಬೇಕು.'

ಅದರೊಂದಿಗೆ, ಬಲ್ಲಾಳರಾಯ ಸಾಯುವಂದು, ತನ್ನಲ್ಲಿ ಭರವಸೆಯಿಟ್ಟು ಹೇಳಿದ ಮಾತು—

'ಈ ಕುನ್ನಿಗಳೆಂದೂ ಮತ್ತೆ ನಮ್ಮ ರಾಜ್ಯದತ್ತ ತಲೆಯಿಕ್ಕದಂತಾಗಬೇಕು, ಬಿಟ್ಟಿಯಣ್ಣ; ನೀಲಗಿರಿಯಿಂದ ಕೃಷ್ಣೆಯವರೆಗಿನ ನಾಡು ನಮ್ಮ ವ್ಯಾಘ್ರಲಾಂಛನದ ಆಡುಂಬೊಲವಾಗಬೇಕು.'

'ಖಂಡಿತ, ಖಂಡಿತ, ನಿನ್ನ ಮಾತನ್ನು ಸತ್ಯವಾಗಿ ಮಾಡುತ್ತೇನೆ. ನಾನು ನಿನ್ನ ಕನಸಿನ ಭಾಷೆಯಾಳು. ನೀನು ಹೇಳಿದ ರಾಜ್ಯವನ್ನು ಕಟ್ಟಿ ನಿನಗೆ ಪರೋಕ್ಷ ವಿನಯ ಸಲ್ಲಿಸುತ್ತೇನೆ'

—ಎಂದು ಬಾರಿ ಬಾರಿಗೂ ತನಗೆ ತಾನೇ ಹೇಳಿಕೊಂಡು, ಉಕ್ಕಿ ಬರುವ ದುಃಖವನ್ನು ಸಂತೈಸಿಕೊಂಡ.

ತಾನೇ ಸಿಂಹಾಸನಾರೋಹಣ ಮಾಡಬೇಕಾಗಿ ಬಂದ ದಿನ, ರಾಜ ಮುಕುಟವನ್ನು ಧರಿಸುವಾಗಲೂ ಅದೇ ಮಾತನ್ನೇ ಸಾರಿ ಹೇಳಿದ—

'ದೇಶವನ್ನು ಕಂಬನಿಯ ಕಡಲಿನಲ್ಲಿ ಅದ್ದಿ ಶಿವಪದವಾಸಿಗಳಾದ ನಮ್ಮ ಪೂಜ್ಯ ಅಣ್ಣಾಜಿಯವರಾದ ಬಲ್ಲಾಳ ಪ್ರಭುಗಳು, ನಮ್ಮ ಹೆಗಲಿನ ಮೇಲೆ ಬಹು ದೊಡ್ಡ ಹೊರೆಯನ್ನು ಹೊರಿಸಿದ್ದಾರೆ. 'ನೀಲಗಿರಿಯಿಂದ ಕೃಷ್ಣಾನದಿಯವರೆಗಿನ ಕನ್ನಡನಾಡನ್ನು ಒಂದಾಗಿ ಕಟ್ಟಬೇಕು. ಅಷ್ಟು ಭೂಮಿಯೂ ಹೊಯ್ಸಳ ವ್ಯಾಘ್ರದ ಮೀಸಲು ಬನವಾಗಬೇಕು. ಹೊಯ್ಸಳರ ಹೆಸರನ್ನು ನಿರ್ಭಯವಾಗಿ ನುಡಿಯುವಷ್ಟು ಕೆಚ್ಚೂ, ನಮ್ಮ ಶತ್ರುಗಳಿಗೆ ಉಳಿಯಬಾರದು' ಎಂದು ನಮಗೆ ಮೃತ್ಯುಶಯ್ಯೆಯಿಂದ ಅಪ್ಪಣೆ ಮಾಡಿದ್ದಾರೆ. ಅಂದು ನಾವು ಅಣ್ಣಾಜಿಯವರಿಗೆ, 'ಅಂತೇ ಆಗಲಿ' ಎಂದು ಕೊಟ್ಟ ವಚನ, ನಿಮ್ಮೆಲ್ಲರ ನಿಷ್ಠೆ, ವಿಶ್ವಾಸಗಳಿಂದ ಸಾರ್ಥಕವಾಗಬೇಕಾಗಿದೆ. ನಮ್ಮ ಪಾಲಿಗೆ ಈ ಮುಕುಟಧಾರಣ, ಆ ಕರ್ತವ್ಯದ ನೀರ ಕಂಕಣಧಾರಣವಾಗಿದೆ. ಶ್ರೀ ವಾಸನ್ತಿಕಾದೇವಿಯ ಅನುಗ್ರಹದಿಂದ, ನಮ್ಮ ವಚನ, ಬದುಕು ಸಫಲವಾಗಲೆಂದು, ಹಿರಿಯರು ಹರಸಬೇಕು.'

ಮಹಾಪ್ರಚಂಡ ದಂಡನಾಯಕ ಗಂಗರಾಜರು, ಸಂಧಿ ವಿಗ್ರಹ ಸಚಿವ ದಂಡನಾಯಕ ಪುಣಿಸಮಯ್ಯ, ಪ್ರಧಾನಿ ಸುರಿಗೆಯ ನಾಗಯ್ಯ, ಪ್ರಧಾನಿಗಳೂ, ಮಾಣಿಕ್ಯ ಭಂಡಾರಿಗಳೂ ಆದ ಮರಿಯಾನೆದಂಡನಾಯಕ, ಭರತದಂಡನಾಯಕ, ಮೊದಲಾದ ಸಚಿವರು, ದಂಡನಾಯಕರು, ಉಳಿದ ಮಂಡಲೇಶ್ವರ, ಸಾಮಂತರು ಒಬ್ಬೊಬ್ಬರೂ, 'ತಮ್ಮ ಬಾಳು ದೊರೆಗಳಿತ್ತ ವಚನಕ್ಕೆ ಮೀಸಲು' ಎಂದು ತಮ್ಮ ಖಡ್ಗದಾಣೆಯಾಗಿ, ತಮ್ಮ ಕುಲದೇವತೆಗಳ ಸಾಕ್ಷಿಯಾಗಿ ಪ್ರಮಾಣ ಮಾಡಿದರು.

ವಿಷ್ಣುವರ್ಧನ ಸಿಂಹಾಸನ ಹತ್ತಿದ ಗಳಿಗೆಯಿಂದಲೂ, ಬಲ್ಲಾಳಾರಾಯನ ಬಯಕೆಯನ್ನು ಸಫಲಗೊಳಿಸುವ ಸಮರಕ್ಕೆ ಸಿದ್ಧತೆಗಳು ನಡೆಯ ತೊಡಗಿದವು.

೨

'ನಿನ್ನ ಕನಸನ್ನು ನಾನು ನನಸಾಗಿ ಮಾಡಿ ತೋರಿಸುತ್ತೇನೆ' ಎಂದು ತನ್ನ ಅಗ್ರಜನಿಗೆ ಮಾತುಕೊಟ್ಟ ವಿಷ್ಣುವರ್ಧನನಿಗೆ, ಆ ವಚನವನ್ನು ಕಾರ್ಯರೂಪದಲ್ಲಿ ಮಾಡಿ ತೋರಿಸುವುದು ಎಷ್ಟು ಕಷ್ಟಸಾಧ್ಯವಾದುದು ಎಂಬುದರ ಅರಿವಿತ್ತು. ಆತ ಎದುರಿಸಲು ಸಿದ್ಧವಾದ ದೊರೆಗಳು ಸಾಮಾನ್ಯರಲ್ಲ. ದಕ್ಷಿಣ ದೇಶದಲ್ಲಿ ಅತ್ಯಂತ ಪ್ರಬಲರಾಗಿದ್ದ ಕಂಚಿಯ ಪಲ್ಲವರು, ಮಧುರೆಯ ಪಾಂಡ್ಯರು, ತಲವನಪುರದ ಗಂಗದೊರೆಗಳನ್ನು ಮುರಿದು ಸಿಂಹಳದ ಅರಸರಿಂದಲೂ ಕಪ್ಪ ಪಡೆದು, ಕಡಲಾಚೆಯೂ ತಮ್ಮ ಪ್ರತಾಪದ ಪ್ರಭಾವವನ್ನು ಬೀರಿದ ಚೋಳ ಕುಲದ ಕುಲೋತ್ತುಂಗ ಚಕ್ರವರ್ತಿ, ಒಂದು ದಿಕ್ಕಿನಲ್ಲಿ ಅತನ ಪ್ರತಿಸ್ಪರ್ಧಿಯಾಗಿದ್ದ. ಮತ್ತೊಬ್ಬ ಪ್ರತಿಸ್ಪರ್ಧಿಯಾದ ಚಾಲುಕ್ಯ ವಿಕ್ರಮಾದಿತ್ಯನೂ ಅಷ್ಟೇ ಪ್ರಖ್ಯಾತ; ಆತನ ಸೇನಾಪಡೆಯೂ ಅಷ್ಟೇ ಪ್ರಬಲವಾದುದು.

ಈ ಇಬ್ಬರು ಚಕ್ರಾಧೀಶ್ವರರ ಬಲ ಎಷ್ಟು, ಏನು ಎಂಬುದು, ತನ್ನ ತಾತ ವಿನಯಾದಿತ್ಯನ ಕಾಲದಲ್ಲೇ ತೊಂಡನೂರಿನ ಮಂಡಲಾಧಿಕಾರಿಯಾಗಿದ್ದು, ತನ್ನ ತಂದೆ ಎರೆಯಂಗದೇವನೊಂದಿಗೆ ಹಲವಾರು ಸಮರಗಳಲ್ಲಿ ಭಾಗವಹಿಸಿ, ಕೊಂಗು ನಾಡನ್ನು ಜಯಿಸಿ, 'ಕೊಂಗು ಕೊಂಡ' ಎಂಬ ವಿಜಯ ಪ್ರಶಸ್ತಿಯನ್ನು ಧರಿಸಿದ ವಿಷ್ಣುವರ್ಧನನಿಗೆ ಚೆನ್ನಾಗಿ ತಿಳಿದಿತ್ತು.

ಈ ಪ್ರಬಲರಿಬ್ಬರಲ್ಲಿ ಯಾರೊಬ್ಬರನ್ನೇ ಆದರೂ, ದುಡುಕಿ ಎದುರಿಸಿದಲ್ಲಿ, ಸೋಲಷ್ಟೇ ಅಲ್ಲ ಸರ್ವನಾಶವೇ ಕೈಗಟ್ಟಿ, ಹೊಯ್ಸಳರ ಹೆಸರೂ

ಉಳಿಯದಂತಾಗಬಹುದೆಂಬ ಅರಿವು ಇದ್ದುದರಿಂದಲೇ, ಅವರ ಮೇಲೆ ದಾಳಿ ಮಾಡುವ ನಿಶ್ಚಯ ಮಾಡಿದ ವಿಷ್ಣುವರ್ಧನರಾಯ, ಆ ದಾಳಿಗೆ ಅಗತ್ಯವಾದಷ್ಟು ಬಲ ಸಂಗ್ರಹ ಮಾಡತೊಡಗಿದ. ಆ ಸಿದ್ಧತೆಯೂ, ದೊರೆಯ ಪ್ರಯತ್ನಕ್ಕೆ ತಕ್ಕ ಪ್ರಮಾಣದಲ್ಲೇ ನಡೆಯಿತು.

ಹೊಯ್ಸಳ ಸೀಮೆಯ ಬಡಗಿಗಳಿಗಾಗಲಿ, ಕಮ್ಮಾರರಿಗಾಗಲಿ ಒಂದು ಗಳಿಗೆಯೂ ಬಿಡುವಿರಲಿಲ್ಲ. ದೊಡ್ಡ ಯುದ್ಧಕ್ಕೆ ಅಗತ್ಯವಾದಷ್ಟು ಪ್ರಮಾಣದಲ್ಲಿ ಬಗೆ ಬಗೆಯ ಯುದ್ಧ ರಥಗಳು, ಧನುರ್ಬಾಣಗಳು, ಕತ್ತಿ, ಶಲ್ಯ, ಕುಂತ, ಪರಶು, ತೋಮರ, ಅಡಾಯುಧ ಮೊದಲಾದ ಶಸ್ತ್ರಗಳು, ಶಿರಸ್ತ್ರಾಣಗಳು, ಲೋಹ ಕವಚಗಳು, ಕೋಟೆಗೆ ಲಗ್ಗೆ ಹಾಕಲು ಬೇಕಾದ ನಿಚ್ಚಣಿಗೆಗಳು, ನಡೆ ಗೋಟಿಗಳು, ಬಗೆ ಬಗೆಯ ರಕ್ಷಣಾ ಸಾಮಗ್ರಿಗಳು ಕುಶಲ ಕರ್ಮಿಗಳಿಂದ ನಿರ್ಮಿತವಾಗಿ ಸಂಗ್ರಹಿತವಾದವು. ಅದರೊಂದಿಗೆ ದೇಶದ ವಡ್ಡವ್ಯವಹಾರಿಗಳು, ನಖರರ ಮೂಲಕ, ಕಾಂಭೋಜ, ಬಾಹ್ಲಿಕ, ಅರಬಿ ಮೊದಲಾದ ನಾನಾ ಜಾತೀಯ ಉತ್ತಮಾಶ್ವಗಳನ್ನು, ಕೊಂಗು, ಕೇರಳದ ಗಜಗಳನ್ನು ತರಿಸಿ, ಗಜಾಶ್ವಪಡೆಗಳನ್ನು ಬಲಪಡಿಸಿದರು. ಒಂದು ಕಡೆ ಯುದ್ಧೋಪಯೋಗೀ ವಸ್ತುಗಳ ಸಂಗ್ರಹ ನಡೆದಂತೆ, ಮತ್ತೊಂದು ಕಡೆ ಜಲದುರ್ಗ, ವನದುರ್ಗ, ಗಿರಿದುರ್ಗ, ನೆಲದುರ್ಗ ಮೊದಲಾದ ಬಗೆಬಗೆಯ ಕೋಟೆಗಳ ಮೇಲೆ ದಾಳಿ ಮಾಡುವ ವಿಧಾನ, ಬಗೆ ಬಗೆಯ ಆಯುಧಗಳ ಉಪಯೋಗ, ಅಶ್ವಾರೋಹಣ, ಗಜಾರೋಹಣ, ರಥಾರೋಹಣ ಮೊದಲಾದ ಸಮರ ವಿದ್ಯೆಗಳಲ್ಲಿ ಹೊಸದಾಗಿ ಸೇನೆಗೆ ಸೇರಿಸಿಕೊಂಡ ಸೈನಿಕರಿಗೆ ತರಬೇತು ಕೊಡುವ ಶಿಕ್ಷಣ ಕಾರ್ಯವೂ ನಡೆಯಿತು. ಇದರೊಂದಿಗೆ ಎಂಥ ವಿಷಮ ಪರಿಸ್ಥಿತಿಯಲ್ಲೂ ದೊರೆಯನ್ನು ರಕ್ಷಿಸಬಲ್ಲ, ಸಮಯ ಬಂದಾಗ ಪ್ರಾಣದ ಪಣವಿಟ್ಟು ಯುದ್ಧ ಮಾಡಬಲ್ಲ 'ಗರುಡ'ರೆಂಬ ಲೆಂಕರ ಪಡೆ ನಿರ್ಮಾಣವಾಯಿತು.

ಹೊಯ್ಸಳ ಸೇನೆಯ ಚತುರಂಗ ಬಲ ಹೀಗೆ ಸಮರ ಸಿದ್ಧವಾಗುತ್ತಿದ್ದಾಗ, ಗಂಗರಾಜ, ಪುಣಿಸಮಯ್ಯ ಮೊದಲಾದ ದಂಡನಾಯಕರು, ಹೊಯ್ಸಳ ಸೀಮೆಯ ಗಡಿಗಳಲ್ಲಿದ್ದ ಚೋಳ ಚಾಲುಕ್ಯ ಸಾಮನ್ತರ ನಿಷ್ಠೆ, ಅವರ ಸೇನೆಯ ಪ್ರಮಾಣ, ಅಲ್ಲಿಯ ಆರ್ಥಿಕ ಪರಿಸ್ಥಿತಿ, ಮಳೆ-ಬೆಳೆ, ಜನರಲ್ಲಿ ಪ್ರಭುಗಳ ವಿಷಯದಲ್ಲಿದ್ದ ವಿಶ್ವಾಸ- ಒಂದೊಂದು ವಿವರದ ಬಗ್ಗೆಯೂ ಬೇಹುಗಾರರಿಂದ ಸುದ್ದಿ ತರಿಸಿಕೊಂಡು, ಆ ಸುದ್ದಿಗಳ ಸತ್ಯಾಸತ್ಯತೆಯನ್ನು ಪರೀಕ್ಷಿಸಿ, ಆ ವಾರ್ತೆಗಳಿಂದ ತಮ್ಮ ಬಲದ ಶಕ್ತಿಯನ್ನು ತರ್ಕಿಸಿ ತಮ್ಮ ಬಲದಲ್ಲಿ ಎಲ್ಲೂ ಯಾವ ಬಗೆಯ ಬಿರುಕೂ ಕಾಣದಂತೆ ಎಚ್ಚರಿಕೆ ವಹಿಸಿ, ದೊರೆ ಯಾವ ಗಳಿಗೆಯಲ್ಲಿ ಅಪ್ಪಣೆ ಮಾಡಿದರೂ, ಸೇನೆಯನ್ನು ನಡೆಸಲು ಸಿದ್ಧವಾಗಿದ್ದರು.

ಈ ಸಿದ್ಧತೆಗಳು ಮುಂದುವರಿದು, ಬಲ ಸಂಗ್ರಹವಾದಂತೆ, ದಿನ ದಿನಕ್ಕೂ ಸೇನೆಯ ಸಮರಾತುರವೂ ಹೆಚ್ಚುತ್ತಿತ್ತು.

ಎಲ್ಲರಗಿಂತಲೂ ಹೆಚ್ಚು ಉತ್ಸಾಹ ಮಹಾ ಪ್ರಚಂಡ ದಂಡನಾಯಕರಾದ ಗಂಗರಾಜರಿಗೆ.

ಗಂಗರಾಜರು, ಹೊಯ್ಸಳರ ಸೇನಾ ಸೇವೆಯಲ್ಲೇ ಮೈ ಮುಪ್ಪಾದ ಹಿರಿಯ ದಂಡನಾಯಕರು. ಅವರ ತಂದೆ ಏಚದಂಡನಾಯಕರು, ನೃಪಕಾಮ ದೊರೆಯ ಬಲಗೈ ಎನಿಸಿಕೊಂಡು, ಆಪ್ತಮಿತ್ರರಾಗಿದ್ದವರು. ಆ ಕಾಲದಿಂದಲೂ, ಅರಮನೆ, ಸಚಿವ ಪರಿವಾರ ಎಲ್ಲರಿಗೂ ಚಿರಪರಿಚಿತರಾಗಿ, ತಮ್ಮ ಶೌರ್ಯ, ಸಾಹಸ, ನಿಷ್ಠೆಗಳಿಂದ 'ದ್ರೋಹ ಘರಟ್ಟ' ಎಂಬ ಬಿರದು ಪಡೆದು, ಎಲ್ಲರ ಪ್ರೀತಿ, ನಂಬಿಕೆಗೆ ಪಾತ್ರರಾಗಿದ್ದವರು. ವಿಷ್ಣುವರ್ಧನನಿಗಂತೂ ಗಂಗರಾಜರು ಎಂದರೆ ತನ್ನ ತಂದೆಯಂತೆ ಎಂಬಷ್ಟು ಗೌರವ; ಹಿರಿಯಣ್ಣನೆಂಬಷ್ಟು ವಿಶ್ವಾಸ; ತನ್ನ ವಜ್ರ ಕವಚ ಇವರು ಎಂಬ ನಂಬಿಕೆ. ಎಂತಲೇ ಅವನಿಗೆ ರಾಜ ಸನ್ನಿಧಿಯಲ್ಲಾಗಲಿ, ಸಚಿವ ಸಮಿತಿಯಲ್ಲಾಗಲಿ ನಿಸ್ಸಂಕೋಚವಾಗಿ ಮಾತನಾಡುವ ಅಧಿಕಾರವಿತ್ತು.

ಸಕಲ ಸೇನಾ ಸಂಗ್ರಹ ನಡೆದ ಬಳಿಕವೂ, ವಿಷ್ಣುವರ್ಧನ ಸಮರ ಯಾತ್ರೆಯ ದಿನ ನಿಶ್ಚಯಿಸದೆ ಇರುವುದನ್ನು ಕಂಡು ಗಂಗಾರಾಜರಿಗೆ ದೊರೆಯ ಮುನ್ನೆಚ್ಚರಿಕೆಯ ಸ್ವಭಾವ ಮೆಚ್ಚಿಗೆಯಾದರೂ, ಅಸಮಾಧಾನ ಮೂಡುತ್ತಿತ್ತು.

ಒಮ್ಮೆ ಪಂಚ ಪ್ರಧಾನರ ಮಂತ್ರಾಲೋಚನಸಭೆಯಲ್ಲಿ ಯುದ್ಧ ವಿಷಯ ಚರ್ಚೆಗೆ ಬಂದಾಗ—

"ಪ್ರಭುಗಳು ಯುದ್ಧ ವಿಷಯದಲ್ಲಿ ದಿನ ನಿಶ್ಚಯ ಮಾಡದೆ ಮುಂದೆ ದೂಡುತ್ತಿರುವುದು ನಮಗೆ ಆಶ್ಚರ್ಯವನ್ನುಂಟುಮಾಡಿದೆ. ಉಸಿರಿನ ಏಟಿಗೇ ಸಾಯುವ ಮಶಕವನ್ನು ಹೊಸಗಿ ಹಾಕಲು ಕತ್ತಿ ಹರಿತವಾಗಿದೆಯೋ ಇಲ್ಲವೋ, ಇನ್ನೊಮ್ಮೆ ಸಾಣೆಗೆ ಹೋಗಿ ಬಂದರೆ ಮೇಲೇನೊ ಎಂದು ಯೋಚಿಸುವುದೇಕೆ? ಯುದ್ಧಕ್ಕೆ ನಿಮ್ಮ ಮನಸ್ಸು ಸಿದ್ಧವಾಗಿದ್ದರೆ ಇಂದೇ ಅಪ್ಪಣೆ ಕೊಡಿ. 'ಶುಭಸ್ಯ ಶೀಘ್ರಂ.'

—ಎಂದಾಡಿ ತಮ್ಮ ಆತುರವನ್ನು ತೋರಿದರು.

'ನಾವು ಯುದ್ಧ ಕೂಡಲಿರುವುದು, ಮಶಕ ಮಕ್ಷಿಕಗಳೊಂದಿಗಾಗಿದ್ದರೆ, ನಾವೂ ಹಿಂದೆ ಮುಂದೆ ನೋಡುತ್ತಿರಲಿಲ್ಲ. ಆದರೆ ನಮ್ಮ ಇದಿರು ನಿಂತಿರುವವರು, ಕೊಬ್ಬಿದ ಸಾಮ್ರಾಟ ಸಿಂಹಗಳು. ಸಾಮನ್ತರಾರೂ ಅವರನ್ನು ಇಂದಿನವರೆಗೂ ಕೆಣಕಲು ಹೋಗಿಲ್ಲ. ಹಾಗಾಗಿ-ನಾವು ಈಗ ಹಿಂದಾರೂ ಮಾಡದ ಸಾಹಸಕ್ಕೆ ಕೈಹಾಕಿದ್ದೇವೆ- ಇದರಲ್ಲಿ ಏನೋ ಹೆಚ್ಚು ಕಡಮೆಯಾಗಿ, ಪಗೆವಾಡಿಯಲ್ಲಿ ಕೆಮ್ಮನೆ ನಗಿಸಿಕೊಳ್ಳುವಂಥ ಪರಸ್ಥಿತಿ ಪ್ರಾಪ್ತವಾಗಬಾರದೆಂದೇ, ನಾವು ಇಷ್ಟು ಹಿಂದೆ ಮುಂದೆ ನೋಡುತ್ತಿರುವುದು. ನಮ್ಮ ಸಮರ ಘೋಷಣೆ, ವಿಜಯ ಘೋಷಣೆಯೇ ಆಗಬೇಕು.'

'ಹಾಗೇ ಆಗುತ್ತದೆ ಪ್ರಭು, ನನಗೆ ಆ ನಂಬಿಕೆಯಿದೆ.'

—ಗೆಂಗರಾಜರು ಅಚಲ ವಿಶ್ವಾಸದಿಂದ ಹೇಳಿದರು.

'ಅರಿಗಳ ಬಲಾಬಲ ನಿಮಗೆ ಅರಿಯದ ವಿಷಯವಲ್ಲ. ಅದನ್ನು ತಿಳಿದೂ ಈ ಮಾತು ಹೇಳುತ್ತೀರಾ ದಂಡನಾಯಕರೇ?'

'ತಿಳಿಯದೆ ಮಾತು ಗಳುಹುವುದು ಈ ಜಾಯಮಾನಕ್ಕೇ ಬಂದದ್ದಲ್ಲ. ಶತ್ರುಬಲವೇನೆಂಬುದು ನಮಗೂ ಗೊತ್ತು. ಆದರೆ, ಸೇನಾ ಬಲವೊಂದೇ ಯಾವ ಸಾಮ್ರಾಜ್ಯವನ್ನು ರಕ್ಷಿಸಲಾರದು ಪ್ರಭು....'

'ಮತ್ತೆ...'

'ಅದಕ್ಕಿಂತ ಹೆಚ್ಚಾಗಿ ಪುಣ್ಯಬಲಬೇಕು. ವಿಶ್ವಾಸದ್ರೋಹಿಗಳಾದ ಚಾಲುಕ್ಯರಿಗಾಗಲೀ, ಧರ್ಮದ್ರೋಹಿಗಳಾದ ತಿಗುಳರಿಗಾಗಲಿ ಆ ಬಲವಿಲ್ಲ. ಆ ಬುನಾದಿಯಿಲ್ಲದ ಅವರ ಸಾಮ್ರಾಜ್ಯ ಉಸುಗಿನಲ್ಲಿ ಕಟ್ಟಿದ ಮನೆ; ಕುಸಿದು ಬೀಳುವುದೇ ನಿಶ್ಚಯ, ಪುಣ್ಯ ತೀರಿದ ಬಳಿಕ ಆಕಾಶದಲ್ಲಿ ಸುತ್ತುವ ನಕ್ಷತ್ರವೂ ನೆಲಕ್ಕೆ ಬೀಳುವಂತೆ, ಸಾಮ್ರಾಜ್ಯಗಳೂ ಉರುಳುತ್ತವೆ. ಆದುದರಿಂದ ನಾವು ಆ ಪುಣ್ಯಹೀನರ ಬಲಾಬಲದ ಯೋಚನೆ ಮಾಡದೆ, ದಾಳಿ ನಡೆಸಲು ಅನುಮತಿ ಕೊಡಿ. ಅರ್ಹತ್ಪರಮೇಶ್ವರನ ಕೃಪೆಯಿಂದ ನಮಗೆ ಜಯ ಲಾಭವಾಗುತ್ತದೆ.'

—ಎಂದು ಹೊಯ್ಸಳರ ಗೆಲುವಿನ ವಿಷಯದಲ್ಲಿ ತಮಗಿದ್ದ ನಂಬಿಕೆಯನ್ನು ಗಂಗರಾಜರು ಆಡಿ ತೋರಿಸಿದರು.

'ನಿಮಗೆಲ್ಲಾ ಅಷ್ಟು ನಂಬಿಕೆಯಿದ್ದರೆ, ಉಳಿದ ಪ್ರಧಾನರೂ ನಿಮ್ಮ ಮಾತಿಗೆ ಒಪ್ಪಿದರೆ, ದಂಡಯಾತ್ರೆ ನಾಳೆಯೇ ನಡೆಯಲಿ. ದಿನ ನಿಶ್ಚಯವಾದಂತೆಯೇ ದಾಳಿ ಯಾವ ದಿಕ್ಕಿನತ್ತ ನಡೆಯಬೇಕೆಂಬುದೂ ನಿಶ್ಚಯವಾಗಬೇಕು.'

'ಯಾವ ದಿಕ್ಕಿನತ್ತ ಎಂಬ ವಿಷಯದಲ್ಲಂತೂ ಏನೂ ಸಂಶಯವೇ ಇಲ್ಲ. ತಲಕಾಡಿನ ತಿಗುಳರೇ ನಮ್ಮ ಮೊದಲ ತುತ್ತು. ಅಲ್ಲವೇ ಗಂಗರಾಜರೇ?'

—ದಂಡನಾಯಕ ಪುಣಿಸಿಮಯ್ಯ ಹೇಳಿದರು

’ನಿಜ, ನಿಜ. ಮೊದಲು ಅವರನ್ನು ಮುಗಿಸಿ ದೇಶವನ್ನು ತಿಗುಳ ಪೀಡೆಯಿಂದ ಮುಕ್ತಗೊಳಿಸಬೇಕು. ಈ ಘಟ ಇನ್ನೂ ಇರುವಾಗಲೇ ಅದೊಂದು ಕೆಲಸ ನಡೆದುಹೋದರೆ, ನನ್ನ ಹುಟ್ಟು ಸಾರ್ಥಕವಾಗುತ್ತದೆ.’

—ಎಂದು ಗಂಗರಾಜರು ಖಚಿತವಾಗಿಯೇ ಹೇಳಿ, ಪುಣಿಸಮಯ್ಯನ ಮಾತಿಗೆ ತಮ್ಮ ಸಮ್ಮತಿಯನ್ನು ಸೂಚಿಸಿದರು.

ಮರಿಯಾನೆದಂಡನಾಯಕ, ಭರತದಂಡನಾಯಕರೂ ಆ ಸಲಹೆಗೇ ಬೆಂಬಲ ನೀಡಿದರು.

ಗಂಗರಾಜರಂತೂ ಚೋಳರ ಹೆಸರು ಕೇಳಿದರೇ ಸಾಕು ಆಜ್ಯಾಹುತಿಯನ್ನುಂಡ ಅಗ್ನಿಯಂತಾಗುತ್ತಿದ್ದರು. ಅವರು ಚೋಳರನ್ನು ’ತಿಗುಳ’ರೆಂದಲ್ಲದೆ ಬೇರೆ ಹೆಸರಿನಿಂದ ಕರೆಯುತ್ತಲೇ ಇರಲಿಲ್ಲ.

ಉಳಿದ ದಂಡನಾಯಕರೂ ಅಷ್ಟೆ-ಚೋಳರ ಹೆಸರು ಕೇಳಿದರೆ ಉರಿಯಾಗುತ್ತಿದ್ದರು.

ಚೋಳರ ವಿಷಯದಲ್ಲಿ ಅವರೆಲ್ಲರಿಗೂ ಅಷ್ಟೇಕೆ ಆಕ್ರೋಶವೆಂಬುದು ವಿಷ್ಣುವರ್ಧನನಿಗೂ ತಿಳಿದಿತ್ತು.

ಗಂಗರಾಜರು, ಹಿಂದೆ ಗಂಗವಾಡಿ ತೊಂಭತ್ತಾರು ಸಾವಿರದ ಸೀಮೆಯನ್ನು ಏಕಚಕ್ರಾಧಿಪತಿಗಳಾಗಿ ಯಾರೊಬ್ಬರ ಅಂಕೆಗೂ ಒಳಪಡದೆ ಮತ್ತಗಜಗಳಂತೆ ಬಾಳಿ, ಆಳಿದ ಗಂಗದೊರೆಗಳ ವಂಶಜರು. ತಮ್ಮ ಹಿರಿಯರ ರಾಜಧಾನಿಯಲ್ಲಿ ಪರಕೀಯರ ಬಾವುಟ ಹಾರುವುದನ್ನು ನೋಡಿ, ಗಂಗರಾಜರ ಅಭಿಮಾನೀ ಜೀವ ತಳಮಳಿಸುತ್ತಿತ್ತು.

ಆದರೆ ಅದಕ್ಕಿಂತ ಹೆಚ್ಚಿನ ವ್ಯಥೆ ಮತ್ತೊಂದಿತ್ತು ಅವರಿಗೆ.

ಗಂಗದೊರೆಗಳು, ತಮ್ಮ ಕಾಲದಲ್ಲಿ ಜೈನ ಧರ್ಮಾವಲಂಬಿಗಳಾಗಿದ್ದುದೇ ಅಲ್ಲದೆ, ಆ ಮತಕ್ಕೆ ಪ್ರೋತ್ಸಾಹಕರಾಗಿದ್ದರು. ಅವರ ಕಾಲದಲ್ಲಿ ಗಂಗವಾಡಿ ಜೈನಧರ್ಮದ ತವರುಮನೆಯಾಗಿತ್ತು. ಸಮಂತಭದ್ರಬಾಹು ಮುನಿಗಳ ಪಾದಧೂಳಿಯಿಂದ ಪವಿತ್ರವಾದ ಶ್ರವಣಬೆಳುಗೊಳದಲ್ಲಿ ಲೋಕಾಶ್ಚರ್ಯಕರವಾದ ಭವ್ಯೋತ್ತುಂಗ ಬಾಹುಬಲಿ ಮೂರ್ತಿ ನಿರ್ಮಿತವಾದುದು ಗಂಗದೊರೆ ರಾಚಮಲ್ಲನ ದಂಡನಾಯಕನಾದ ಚಾಮುಂಡರಾಯನಿಂದ. ಆ ಬಾಹುಬಲಿ ಮೂರ್ತಿಯ ಪ್ರತಿಷ್ಠೆಯಾದ ಬಳಿಕ, ಶ್ರವಣಬೆಳುಗೊಳ 'ಅಭಿನವ ಪೋದನಪುರ'ವೆಂದು ಖ್ಯಾತವಾಗಿ, ಜಿನಮುನಿಗಳ ನೆಲೆವೀಡಾಗಿ, ಜೈನ ಧರ್ಮೀಯರ ಪ್ರಧಾನ ಧರ್ಮಕ್ಷೇತ್ರವಾಗಿತ್ತು.

ಶ್ರವಣಬೆಳುಗೊಳ, ಹನಸೋಗೆ, ಕಳಸವಾಡಿ ಎಂದು ಒಂದೆರಡು ಊರುಗಳನ್ನು ಹೆಸರಿಸುವುದೇನು, ಗಂಗ ಅರಸರ ಕಾಲದಲ್ಲಿ ಗ್ರಾಮ ಗ್ರಾಮವೂ ಬಸದಿಗಳಿಂದ ಅಲಂಕೃತವಾಗಿ, ಗಂಗವಾಡಿ, ಜಿನವಾಡಿಯಾಗಿತ್ತು.

ಗಂಗ ಅರಸರ ಭಾಗ್ಯ ಬದಲಾಗಿ, ಚೋಳರಾಜ ರಾಜನ ತೊತ್ತಳದುಳಿತಕ್ಕೆ ಸಿಕ್ಕು ಗಂಗಸಿಂಹಾಸನ ಉರುಳಿದ ಬಳಿಕ, ಅವರೊಂದಿಗೆ ಪಟ್ಟವೇರಿ ರಾರಾಜಿಸಿದ ಜಿನಧರ್ಮವೂ ತನ್ನ ಪ್ರತಿಷ್ಠೆಯನ್ನು ಕಳೆದುಕೊಂಡಿತು. ಚೋಳ ದೊರೆಗಳು ಒಪ್ಪಿದ ಶೈವ, ವೈಷ್ಣವ ಧರ್ಮಗಳು ಪ್ರಬಲಿಸಿ, ದಿನ ದಿನಕ್ಕೆ ಬಸದಿಗಳು ಹಾಳಾಗುತ್ತಾ ಬಂದವು. ಜೈನ ಬಸದಿಗಳ ದೇವಾದಾಯದ ಭೂಮಿ, ಎಷ್ಟೋ ಚೋಳ ದಳಪತಿಗಳ ಭೋಗಕ್ಕೆ ಸಂದಿತು.

ತಮ್ಮ ವಂಶಕ್ಕಾದ ಹಾನಿಗಿಂತ ಹೆಚ್ಚಾಗಿ, ಧರ್ಮಕ್ಕಾದ ಹಾನಿ ಗಂಗರಾಜರ ಮನಸ್ಸಿಗೆ ಸಹಿಸಲಾಗದ ಕಿಚ್ಚಾಗಿತ್ತು.

'ಮನುಷ್ಯನ ಆಯಸ್ಸು ಪರಿಮಿತವಾಗಿರುವಂತೆಯೇ, ಸಾಮ್ರಾಜ್ಯಗಳ ಆಯಸ್ಸೂ ಪರಿಮಿತವಾದದ್ದು. ಗಾಳಿ ಬೀಸಿದಾಗ ಜಲದಲ್ಲಿ ಮೂಡಿ ಮುಳುಗುವ

ಬುದ್ಬುದಗಳಂತೆ, ಇವೂ ಹುಟ್ಟಿ, ಒಂದು ಗಳಿಗೆ ಇಂದ್ರಚಾಪದ ಕಾಂತಿಯನ್ನು ಮೆರೆದು ಮರೆಯಾಗುತ್ತವೆ. ಆದ್ದರಿಂದ ಸಾಮ್ರಾಜ್ಯಹಾನಿ, ನಿರೀಕ್ಷಿತವಾದದ್ದು. ಅದರ ಅಳಿವಿಗಾಗಿ ನಾನು ಪರಿತಪಿಸುವುದಿಲ್ಲ. ಆದರೆ ಸರ್ವರಿಂದಲೂ ಪರಿಪಾಲಿತವಾಗಿ, ಆಚಂದ್ರಾರ್ಕಸ್ಥಾಯಿಯಾಗಿ ಮೆರೆಯಬೇಕಾದ ದೇವಾಲಯ, ಜಿನಾಲಯಗಳಿಗಾದ ಹಾನಿಯನ್ನು ನಾನು ಸಹಿಸಲಾರೆ.'

—ಎಂದು ನುಡಿದು, ನೂರಾರು ಸಮರಗಳಲ್ಲಿ ಹರಿದ ರಕ್ತದ ಪ್ರವಾಹವನ್ನು ಕಣ್ಣಾರೆಕಂಡೂ ಕಂಗೆಡದ ಗಂಗರಾಜರು, ಮುರಿದ ಬಸದಿಯೊಂದರ ಭಗ್ನ ಶಿಲ್ಪಗಳನ್ನು ನೋಡಿ ಕಂಬನಿ ಮಿಡಿದಿದ್ದರು.

'ಯಾರಿಗೂ ಯಾವ ರೀತಿಯಲ್ಲೂ ತೊಂದರೆ ಕೊಡದೆ, ಸಕಲರಲ್ಲಿಯೂ, ಧರ್ಮಭಾವನೆಯನ್ನು, ಆನಂದವನ್ನು ಪ್ರೇರಿಸುವ ಈ ವಿಗ್ರಹಗಳನ್ನು ಒಡೆದು ತಮ್ಮ ಮತಪ್ರೇಮವನ್ನು ಮೆರೆಯಿಸಿದ ಮದಾಂಧರನ್ನು ಹುಟ್ಟಡಗಿಸುವವರೆಗೂ ನನ್ನ ಖಡ್ಗಕ್ಕೆ ವಿಶ್ರಾಂತಿಯಿಲ್ಲ'

—ಎಂದು ತಮ್ಮ ಗುರುಗಳಾದ ಶುಭಚಂದ್ರದೇವರ ಪಾದಸಾಕ್ಷಿಯಾಗಿ ಶಪಥ ಮಾಡಿದ್ದರು.

ಗಂಗವಾಡಿಯನ್ನು ಗೆಲ್ಲಬೇಕು. ಗಂಗವಾಡಿಯಲ್ಲಿ ಚೋಳರ ಧಾಳಿಯಿಂದ ಜೀರ್ಣವಾದ ಜಿನಮಂದಿರಗಳನ್ನೆಲ್ಲಾ ಪೊಸಯಿಸಿ, ಮತ್ತೆ ಗಂಗವಾಡಿಯ ಕೀರ್ತಿಯನ್ನು ಮೆರೆಸಬೇಕೆಂಬ ಬಯಕೆ ದಿನದಿನವೂ ಅವರಲ್ಲಿ ಮೂಡಿ, ಬೆಳೆದು ಅದಮ್ಯ ಆಕಾಂಕ್ಷೆಯಾಗಿತ್ತು.

ಈ ಆಕಾಂಕ್ಷೆಯೇ ಚೋಳರ ಮೇಲಿನ ದಾಳಿಗೆ ಗಂಗರಾಜರನ್ನು ಅಹರ್ನಿಶಿಯೂ ಪ್ರಚೋದದಿಸುತ್ತಿದ್ದ ಶಕ್ತಿ.

ಅವರ ಅಭಿಲಾಷೆಯೇ, ಸ್ವಯಂ ಜೈನಧರ್ಮಿಯರಾದ ಪುಣಿಸಿಮಯ್ಯ, ಮರಿಯಾನೆ, ಭರತ ಮೊದಲಾದ ದಂಡನಾಯಕರಿಗೂ ಇತ್ತು.

ವಿಷ್ಣುವರ್ಧನನಿಗೂ, ತನ್ನ ದಂಡನಾಯಕರ ಈ ಅಭಿಲಾಷೆ ಅಪ್ರಿಯವಾಗಿರಲಿಲ್ಲ. ಆತನ ಹೃದಯದಲ್ಲೂ ಚೋಳರ ಮೇಲೆ ದಾಳಿ ಮಾಡಬೇಕೆಂಬ ಬಯಕೆ ಕುದಿಯುತ್ತಿತ್ತು.

ಹೀಗೆ ದೊರೆ, ದಂಡನಾಯಕರು-ಎಲ್ಲರ ಬಯಕೆಗಳೂ ಮೇಳವಿಸಿ, ಹೊಯ್ಸಳ ಸೇನೆ ತಲಕಾಡಿನ ಮೇಲೆ ದಾಳಿ ಮಾಡುವುದೆಂದು ನಿಶ್ಚಯವಾಯಿತು.

೩

ಮಸೆದು ಮೊನೆಯಾದ ಹೊಯ್ಸಳ ಖಡ್ಗ ಕಾಳಿಗೆ, ಚೋಳ ಬಲವೇ ಪ್ರಥಮಾಹುತಿಯೆಂದು ತೀರ್ಮಾನವಾದ ಆಪ್ತ ಸಭೆಯಲ್ಲಿಯೇ, ಆ ದಂಡಯಾತ್ರೆಯ ಪ್ರಧಾನ ದಂಡನಾಯಕ ಪಟ್ಟಿ ಯಾರಿಗೆ ಕಟ್ಟುವುದೆಂಬ ಪ್ರಶ್ನೆಯೂ ಚರ್ಚಿತವಾಯಿತು. ವಿಷ್ಣುವರ್ಧನನ ದಂಡನಾಯಕರಲ್ಲಿ ಒಬ್ಬೊಬ್ಬರಿಗೂ ತಮ್ಮ ಶಕ್ತಿ, ಸಮರ ಚಾತುರ್ಯ ಪ್ರದರ್ಶನಕ್ಕೆ, ಆತನ ಕಾಲದಲ್ಲಿ ದೊರಕಿದ ಈ ಪ್ರಥಮಾವಕಾಶ ತಮಗೇ ದೊರಕಬೇಕೆಂಬ ಬಯಕೆಯಿತ್ತು.

ಆದರೆ ಸಂಧಿವಿಗ್ರಹ ಸಚಿವನಾದ ಪುಣಿಸಮಯ್ಯ ಆ ಬಗ್ಗೆ ಹೆಚ್ಚು ಚರ್ಚೆ ನಡೆಯಲು ಅವಕಾಶ ಕೊಡದೆ ಹೇಳಿದ—

’ಈ ಬಾರಿಯ ಸಮರದ ರಣವೀಳಯ ತಮಗೆ ದೊರೆಯಬೇಕೆಂಬ ಬಯಕೆ ನಮ್ಮಲ್ಲಿ ಪ್ರತಿಯೊಬ್ಬರಿಗೂ ಇದೆ. ಆ ಮನ್ನಣೆಗೆ ಅನರ್ಹರಾದವರು, ಈ ಓಲಗದಲ್ಲಿ ಯಾರೂ ಇಲ್ಲ. ಪ್ರಭು ಸೇವೆಯಲ್ಲಿ, ಹೊಯ್ಸಳ ಸಾಮ್ರಾಜ್ಯಲಕ್ಷ್ಮಿಯ ಆರಾಧನೆಯಲ್ಲಿ

ಅರ್ಪಿತವಾಗುವ ಪ್ರಥಮ ರಕ್ತ ಬಿಂದು ನನ್ನದಾಗಲಿ ಎಂಬ ಉತ್ಸಾಹದಲ್ಲಿ ನಾವೆಲ್ಲರೂ ಸಮಾನಸ್ಕಂಧರಾಗಿದ್ದೇವೆ. ಆದರೆ, ಈ ಗೌರವ ವಯಸ್ಸಿನಲ್ಲಿ, ಸೇವೆಯಲ್ಲಿ, ನಿಷ್ಠೆಯಲ್ಲಿ, ಚೋಳರ ಮೂಲೋತ್ಪಾಟನದ ಬಯಕೆಯಲ್ಲಿ ನಮ್ಮೆಲ್ಲರಿಗಿಂತ ಹಿರಿಯರಾಗಿರುವ ಮಹಾ ಪ್ರಚಂಡ ದಂಡನಾಯಕ ಗಂಗರಾಜರಿಗೇ ಸಲ್ಲಬೇಕು ಎಂಬುದು ನನ್ನ ಅಭಿಲಾಷೆ. ಪ್ರಭುಗಳಲ್ಲಿ ನನ್ನ ನಮ್ರ ವಿನಂತಿಯೂ ಅದೇ ಆಗಿದೆ. ಹಿರಿಯರಾದ ಗಂಗರಾಜರಿಗೂ ನನ್ನ ಆಭಿಪ್ರಾಯ ಮಾನ್ಯವಾಗುವುದೆಂದೇ ನಂಬಿದೇನೆ.'

ಪುಣಿಸಮಯ್ಯನ ಅಭಿಪ್ರಾಯವನ್ನು ಸಾಧುವಲ್ಲ ಎನ್ನುವವರು ಆ ಸಭೆಯಲ್ಲಿ ಯಾರೂ ಇರಲಿಲ್ಲ. ಆದರೆ ಗಂಗರಾಜರೇ ಪುಣಿಸಮಯ್ಯನ ಅಭಿಪ್ರಾಯಕ್ಕೆ ಇದಿರು ಮಾತನಾಡಿದರು. ಎಲ್ಲರೂ ಮೌನವಾಗಿ ತಮ್ಮ ಸಮ್ಮತಿಯನ್ನು ಸೂಚಿಸಿದ ಬಳಿಕ, ಪ್ರಭುಗಳು ಪುಣಿಸಮಯ್ಯನ ಸೂಚನೆಯನ್ನು ಅಂಗೀಕರಿಸುವರೆಂದೇ ನಂಬಿದ ಸಭಾಸದರಿಗೆ ಗಂಗರಾಜರು—

'ಪ್ರಭುಗಳು ಸಂಧಿ ವಿಗ್ರಹ ಸಚಿವರ ಸೂಚನೆಯ ಬಗ್ಗೆ ನಮ್ಮ ಅಭಿಪ್ರಾಯ ವ್ಯಕ್ತಪಡಿಸಲು ಅವಕಾಶ ಕೊಡಬೇಕು.'

—ಎಂದು ಬೇಡಿ ಎದ್ದು ನಿಂತದ್ದನ್ನು ಕಂಡು 'ಅವರು ಹೇಳಬೇಕಾದುದನ್ನು ಪುಣಿಸಮಯ್ಯನವರೇ ವ್ಯಕ್ತಪಡಿಸಿದ ಬಳಿಕ ಇವರು ಹೇಳುವುದು ಬೇರೇನು ಉಳಿದಿದೆ' ಎಂದು ಚಕಿತರಾದರು. ಎಂತಲೇ ಅವರೇನು ಹೇಳುವರೋ ಎಂದು ಅವರ ಮಾತನ್ನು ಕುತೂಹಲದಿಂದ ಆಲಿಸಿದರು.

ದೊರೆಗೆ, ಸಚಿವ ಮಂಡಲಿಗೆ, ಸಭಾಸದರಿಗೆ ವಿನಯದಿಂದ ನಮಸ್ಕರಿಸಿ, ಗಂಗರಾಜರು ನುಡಿದರು:

'ಸಂಧಿವಿಗ್ರಹ ಸಚಿವರಾದ ಪುಣಿಸಮಯ್ಯನವರು ತಮಗೆ ತೋಚಿದ ಮಾತನ್ನು ಸ್ಪಷ್ಟವಾಗಿ ಹೇಳಿದಾರೆ. ನನ್ನ ವಿಷಯದಲ್ಲಿ ಅವರು ವ್ಯಕ್ತಪಡಿಸಿದ ವಿಶ್ವಾಸ,

ನಂಬಿಕೆಗಳಿಗೆ ನಾನು ಕೃತಜ್ಞನಾಗಿದ್ದೇನೆ. ಮಹಾ ಪ್ರಧಾನ ಪದವೀ ರಕ್ಷಿತನಾದ ನನ್ನ ಹೆಸರನ್ನು, ಸ್ವಯಂ ಸಂದಿವಿಗ್ರಹ ಸಚಿವರೇ ಸೂಚಿಸಿದಾಗ ಅದಕ್ಕೆ ಇದಿರು ಹೇಳುವ ಇಚ್ಛೆ ತಮ್ಮಲ್ಲಿ ಯಾರಿಗೂ ಇರುವುದಿಲ್ಲ. ನಿಮ್ಮ ಆಯ್ಕೆಯನ್ನು ಪ್ರಭುಗಳೂ ತಳ್ಳಿ ಹಾಕಲಾರರು. ಎಷ್ಟೋ ವೇಳೆ, ಇಂಥ ಸಂದರ್ಭಗಳಲ್ಲಿ, ಉಳಿದೆಲ್ಲ ವಿಚಾರಕ್ಕಿಂತ ಮುಖ ದಾಕ್ಷಿಣ್ಯವೇ ಹೆಚ್ಚು ಪರಿಣಾಮಕಾರಿಯಾಗುತ್ತದೆ. ಆದುದರಿಂದ ಈ ಬಗೆಯ ಸನ್ನಿವೇಶದಲ್ಲಿ, ಮುಖದಾಕ್ಷಿಣ್ಯದ ಹೊನ್ನ ಸಂಕಲೆಯಿಂದ ಬಂಧಿತರಾಗದ ಯಾರಾದರೊಬ್ಬ ಹಿರಿಯರು, ಇಂಥ ಆಯ್ಕೆಯ ಸಾಧಕ-ಬಾಧಕಗಳನ್ನು ನಿಷ್ಪಕ್ಷಪಾತವಾಗಿ ವಿಮರ್ಶಿಸುವುದು ಅತ್ಯಗತ್ಯ. ಇಲ್ಲವಾದಲ್ಲಿ ಯಾರ ಮನದಲ್ಲಿಯಾದರೂ ಕಸಿದು ಉಳಿಯಬಹುದು.'

'ಈ ಸಭೆ ನನ್ನನ್ನು ಹಿರಿಯ ಎಂದು ಹೇಳಿ, ನನ್ನ ವಯಸ್ಸಿಗೆ ಮರ್ಯಾದೆ ಕೊಟ್ಟಿದೆ. ಅ ಗೌರವವನ್ನು ಉಳಿಸಿಕೊಳ್ಳಬೇಕಾದುದೂ ನನ್ನ ಕರ್ತವ್ಯ.'

'ಈ ಇಬ್ಬಗೆಯ ಕರ್ತವ್ಯಗಳಿಂದ ಪ್ರೇರಿತನಾಗಿ ನಾನಾಡುವ ಮಾತನ್ನು ಅನ್ಯಥಾ ಭಾವಿಸದೆ, ಪ್ರಭುಗಳು, ಸಭೆ ಲಾಲಿಸಬೇಕು'

—ಎಂದು ತಾವು ಆಡಲಿರುವ ಮಾತಿಗೆ ಕಾರಣವನ್ನು ವಿವರಿಸಿ ಹೇಳಿದರು ಗಂಗರಾಜರು.

'ಪ್ರಧಾನ ಸಚಿವರಿಗೆ, ಮನಸ್ಸಿನ ಮಾತನ್ನು ನಿಸ್ಸಂಕೋಚವಾಗಿ ಹೇಳುವ ಅಧಿಕಾರವಿದೆ. ಹಿರಿಯರ ಮಾತು ಸಭೆಗೆ ಅಪ್ಪಣೆಯಿದ್ದಂತೆ. ಹೇಳಿ'

—ಎಂದ ವಿಷ್ಣುವರ್ಧನ.

'ಪ್ರಭುಗಳ ಅಭಿಮಾನಕ್ಕೆ ನಾನು ಕೃತಜ್ಞ. ನನ್ನ ಬಾಳು ಆ ಅಭಿಮಾನಕ್ಕೆ ಮೀಸಲು, ಸಂಧಿ ವಿಗ್ರಹ ಸಚಿವರಾದ ಪುಣಿಸಮಯ್ಯನವರು, ಈ ಬಾರಿಯ ಸಮರದ

ವೀಳಯ ಪಡೆಯುವ ಅರ್ಹತೆಯಿಲ್ಲದವರು ಈ ಓಲಗದಲ್ಲಿ ಒಬ್ಬರೂ ಇಲ್ಲ ಎಂದರು. ಆ ಮಾತು ನಿಜ. ಉಕ್ಕಿನ ತೋಳ ಕಡುಗಲಿಗಳೇ ಪರಿವಾರದಲ್ಲಿರುವುದು, ಈ ಸಾಮ್ರಾಜ್ಯದ ಭಾಗ್ಯ. ಆಂಥ ವೀರರ ಪರಾಕ್ರಮ ಹುಣ್ಣಿಮೆಯ ಕಡಲಿನಂತೆ ಉಕ್ಕಬೇಕಾದರೆ, ಅದಕ್ಕೆ ಪ್ರಭು ಕೃಪೆಯ ಚಂದ್ರೋದಯವಾಗಬೇಕು; ಪುರಸ್ಕಾರದ ನೆರೆ ಬಂದು ಸೇರಬೇಕು. ಇಂದು ಒದಗಿರುವಂಥ ಸಮರ ಸಂದರ್ಭ, ಅಂಥ ಅನುಗ್ರಹ ಪುರಸ್ಕಾರಕ್ಕೆ ಯೋಗ್ಯವಾದ ಸಂದರ್ಭ. ತಲಕಾಡಿನ ಯುದ್ಧ ಎಂದಿನಂತಹುದಲ್ಲ; ಪ್ರಭುಗಳು ತಮ್ಮ ಅಗ್ರಜರಿಗಿತ್ತ ವಾಗ್ದಾನವನ್ನು ಸಾರ್ಥಕಪಡಿಸುವ ಸಂಗ್ರಾಮ. ಎಂತಲೇ ಇಂಥ ಯುದ್ಧದಲ್ಲಿ ಗೆದ್ದು, ತಮ್ಮ 'ಚೋಳವಾಳಿ'ಯನ್ನು ಮೆರೆಸಬೇಕೆಂಬ ಉತ್ಸಾಹ ಯಾರಿಗೆ ಇರುವುದಿಲ್ಲ. ವಯಸ್ಕನಾದ ನನಗೇ ಎಷ್ಟು ಹೊತ್ತಿಗೆ ಯುದ್ಧಾರಂಭವಾದೀತೋ ಎಂದು ತೋಳು ತುರಿಸುತ್ತಿರುವಾಗ, ಇನ್ನು ವಯಸ್ಸಿನಲ್ಲಿ ಕಿರಿಯರೂ, ಸಹಜ ಉತ್ಸಾಹ ಶಾಲಿಗಳಾದ ಉಳಿದವರಿಗೆ ಎಷ್ಟು ಉತ್ಸಾಹವಿರಬೇಡ. ಅವರ ಪರಾಕ್ರಮ, ಉತ್ಸಾಹ, ತೃಪ್ತಿಗಳೇ ಈ ರಾಜ್ಯವನ್ನು ರಕ್ಷಿಸುವ ವಜ್ರಕೋಟೆ.'

'ಎಂತಲೇ ಇಂಥ ಸಮಯದಲ್ಲಿ, ಇವರು ವಯಸ್ಸಿನಲ್ಲಿ ಹಿರಿಯರು ಎಂಬ ಕಾರಣಕ್ಕಾಗಿ ಹಿರಿಯರಿಗೆ ಅಗ್ರಮಾನ್ಯತೆ ಕೊಟ್ಟು, ಕಿರಿಯರ ಉತ್ಸಾಹಕ್ಕೆ ಭಂಗ ತರುವುದು ಉಚಿತವಾಗಲಾರದು.'

'ಚೋಳರನ್ನು ಮುರಿದು, ಅವರ ಸಾಮ್ರಾಜ್ಯದ ಸಮಾಧಿಯ ಮೇಲೆ ಹೊಯ್ಸಳರ ಕೀರ್ತಿ ಧ್ವಜವನ್ನು ಮೆರೆಸಬೇಕೆಂಬ ಉತ್ಕಟೇಚ್ಛೆ ನನಗಿರುವುದು ಸುಳ್ಳಲ್ಲ. ಆ ಕನಸನ್ನು ನನಸಾಗಿ ಕಾಣಲೆಂದೇ ಈ ವೃದ್ಧ ದೇಹ ಪಂಜರದಲ್ಲಿ ಜೀವ ಉಳಿದಿದೆ ಎಂಬುದನ್ನು ನನ್ನನ್ನು ಅರಿತವರೆಲ್ಲರೂ ಬಲ್ಲರು. ಸಂಧಿ ವಿಗ್ರಹ ಸಚಿವರು ಎಲ್ಲರಿಗಿಂತ ಮುಂದಾಗಿ ನನ್ನ ಹೆಸರನ್ನು ಸೂಚಿಸಲು ಅದೂ ಒಂದು ಕಾರಣವಿರಬೇಕು.'

'ಆದರೆ ನನ್ನ ಆಸೆ ನಾನು ಸೇನಾಧಿಪತಿಯಾಗಿಯೇ ತೀರಬೇಕೆಂದಿಲ್ಲ. ಸಾಮಾನ್ಯ ಸೈನಿಕನಾಗಿದ್ದೂ ದಳಪತಿಯಾಗಿದ್ದೂ ತೀರಬಹುದು. ಆದುದರಿಂದ

ಪ್ರಭುಗಳು ಈ ಸಂದರ್ಭದಲ್ಲಿ ಕಿರಿಯ ದಂಡನಾಯಕರನ್ನು ಮರೆಯಬಾರದು. ಹಣ್ಣು ಎಲೆಗಳು ಉದುರಿದ ಬಳಿಕ, ಮತ್ತೆ ಮರಕ್ಕೆ ಕಾಂತಿಯನ್ನು ನೀಡುವುವು ಈ ಚಿಗುರು ಎಲೆಗಳೇ. ಆದುದರಿಂದ ಪ್ರಭುಗಳು ಕಿರಿಯ ದಂಡನಾಯಕರಲ್ಲಿ ಯಾರನ್ನಾದರೂ ಈ ರಣಾಧಿಪತ್ಯಕ್ಕೆ ಆರಿಸಲಿ. ಅವರ ಸೈನಿಕನಾಗಿದ್ದೂ ಆ ಚೋಳ ಮಂಡಲಾಧೀಶ್ವರ ಆದಿಯಮನ ತಲೆಯನ್ನು ಬೇಟೆಯಾಡಿ, ನಾನು ನನ್ನ ತೋಳ ತೀಟೆಯನ್ನು, ಹೃದಯದ ಬಯಕೆಯನ್ನು ತೀರಿಸಿಕೊಳ್ಳುತ್ತೇನೆ.'

—ಎಂದರು ಪ್ರಚಂಡ ದಂಡನಾಯಕ ಗಂಗರಾಜರು.

ಗಂಗರಾಜರ ಸಲಹೆಗೆ, 'ಬೇರೆಯವಣು ಏನಾದರೂ ಹೇಳುವುದಿದೆಯೇ' ಎಂಬ ಭಾವದಿಂದ, ವಿಷ್ಣುವರ್ಧನ ಸಭೆಯಲ್ಲಿ ಕುಳಿತ ಉಳಿದ ದಂಡನಾಯಕರ ಮುಖವನ್ನು ನೋಡಿದ.

ರಾಜ್ಯದ ಹಿರಿಯರೆಲ್ಲರೂ ಕಲೆತ ಈ ಸಭೆಯಲ್ಲಿ, ಕಿರಿಯರಿಗೆ ಮಾತನಾಡುವ ಅವಕಾಶ ಉಂಟೋ ಇಲ್ಲವೋ ಎಂಬ ಸಂದೇಹದಿಂದ ಕಿರಿಯ ದಂಡನಾಯಕರಾರೂ ಮಾತನಾಡದೆ, 'ಏನು ತೀರ್ಮಾನವಿದ್ದರೂ ಹಿರಿಯರು ಮಾಡಲಿ' ಎಂದು ತುಟಿ ಬಿಗಿದು ಕುಳಿತಿದ್ದರು.

'ಈಗ ಕಿರಿಯ ದಂಡನಾಯಕರ ಸರದಿ. ಅವರು ತಮ್ಮ ಅಭಿಪ್ರಾಯ, ಆಯ್ದೆಯನ್ನು ತಿಳಿಸಬಹುದು.'

—ಎಂದು ವಿಷ್ಣುವರ್ಧನ ಬಾಯಿ ಬಿಟ್ಟು ಹೇಳಿದ ಮೇಲೆ, ವಿಷ್ಣುವರ್ಧನರಾಯನ ಪಾಲಿತಪುತ್ರನಾದ ಕುಮಾರ ವಿಷ್ಣು ದಂಡನಾಯಕ ಎದ್ದು ನಿಂತು, ಪ್ರಭು ಪೀಠಕ್ಕೆ, ಸಭೆಗೆ ವಂದಿಸಿ ಹೇಳಿದ:

'ನಾವು ಕಿರಿಯರು, ಎಲ್ಲರಿಗೂ ಮಕ್ಕಳಿದ್ದಂತೆ. ಎಂತಲೇ ನಮ್ಮ ತೊದಲ್ನುಡಿಯಲ್ಲೇನಾದರೂ ತಪ್ಪಿದ್ದರೆ, ಉದಾರತೆಯಿಂದ, ವಿಶ್ವಾಸದಿಂದ ಮನ್ನಿಸಬೇಕು. ಮಹಾಪ್ರಧಾನ ಪ್ರಚಂಡ ದಂಡನಾಯಕ ಗಂಗರಾಜರು ಅಪ್ಪಣೆ ಕೊಡಿಸಿದ ಅಮೃತ ವಾಕ್ಯಗಳನ್ನು ತಾವೆಲ್ಲರೂ ಲಾಲಿಸಿದೀರ. ಅವರ ಮಾತು ಕೇಳಿದ ಕಿವಿ ಪುನೀತವಾಯಿತು.'

'ತಂದೆ ತಾಯಿ ಇಲ್ಲದೆ ತಬ್ಬಲಿಯಾಗಿ, ಪ್ರಭುಗಳ ತೊಡೆಯ ತೊಟ್ಟಿಲಲ್ಲಿ ಬೆಳೆದ ದಿನದಿಂದಲೂ ನಾನು ಗಂಗರಾಜರನ್ನು ಬಲ್ಲೆ. ಅವರ ಪರಾಕ್ರಮದ ಸಾವಿರ ಕಥೆಯನ್ನು ಕೇಳಿ ಬಲ್ಲೆ. ನಮ್ಮನ್ನು ತಾಯಿಯಂತೆ ಸಾಕಿ ಸಲಹಿದ ಪಿರಿಯರಸಿ, ಪಟ್ಟಮಹಾದೇವಿ ಶಾನ್ತಲಾದೇವಿಯರು, ನನಗೆ ಬುದ್ಧಿಯ ಹಾಲೆರೆದು ಬೆಳೆಸುವಾಗ ಗಂಗರಾಜರ ಬಗ್ಗೆ ಕವಿಯೊಬ್ಬನು ಕಟ್ಟಿದ ಪದ್ಯವೊಂದನ್ನು ಹೇಳಿ ಕಲಿಸಿದ್ದರು. ಸಭೆಯಲ್ಲಿರುವವರೆಲ್ಲರೂ ಆ ಪದ್ಯವನ್ನು ಕೇಳಿರಬೇಕು.'

'ನುಡಿ ತೊಡಳಾದಡೊಂದು ಪೂಣರ್ದಂಜಿದೊಡಂತೆರಡನ್ಯನಾರಿಯೊ

ಳ್ನುಡಿಗೆಡೆಯಾಗೆ ಮೂರು ಮರೆವೊಕ್ಕರನೊಪ್ಪಿಸೆ ನಾಲ್ಕು ಬೇಡಿದಂ |

ನಡೆಯದೊಡೈದು ಕೂಡಿದೆಡೆಗೊಗದೊಡಾರಧಿಪಂಗೆ ತಪ್ಪಿ ಬ

ರ್ದಡಿವೇಳಿವೇಳು ನರಕಂಗಳೆಂದಪನಲ್ತೆ ಗಂಗಣಂ ||

ಎಂದು ಹೊಗಳಿಸಿಕೊಂಡು, ಸಪ್ತ ನರಕಗಳಿಗೂ ಸಿಲುಕದೆ ಬದುಕಿದವರು ಗಂಗರಾಜರು. 'ಭೂಮಿಯಲ್ಲಿ ಮನುಷ್ಯನಾಗಿ, ದೊರೆಯಲ್ಲಿ ದಂಡನಾಯಕನಾಗಿ ಜನಿಸಿದವನು ಹಾಗೆ ಬದುಕಬೇಕು. ನೀನು ಹಾಗೆ ಬದುಕಿದರೆ ನಮಗೆ ಸಂತೋಷ' ಎಂದಿದ್ದರು ನಮ್ಮ ತಾಯಿದೇವಿ.

'ಈದಿನ ಮಹಾಪ್ರಧಾನರ ಮಾತು ಕೇಳಿ ಆ ಮಾತು ನಿಜ ಎಂಬುದು ಮನವರಿಕಯಾಯಿತು. ಆವರು ಕತ್ತಿಯಾಡಿಸುವುದನ್ನು ನೋಡಿ ಕೋಲು ತಿರುಗಿಸುವುದನ್ನು ಕಲಿತ ನನ್ನಂಥ ಕಿರಿಯರ ಬಗ್ಗೆ ಅವರು ವ್ಯಕ್ತಪಡಿಸಿದ ಅಭಿಮಾನ, ನಮ್ಮ ಪಾಲಿಗೆ ದೇವ ಹರಕೆ. ಅಂಥ ಅಭಿಮಾನ ತೋರಿ ಅವರು ತಮ್ಮ ಕೀರ್ತಿಯನ್ನು ಮತ್ತಷ್ಟು ಹೆಚ್ಚಿಸಿಕೊಂಡರು. ಆ ಕೀರ್ತಿ ಅವರಿಗಿರಲಿ. ಅದರೊಂದಿಗೆ ಅವರು ನಮ್ಮತ್ತ ಚಾಚಿದ ಸೇನಾಧಿಪತ್ಯವೂ ಅವರಿಗಿರಲಿ. ನಾವಿನ್ನೂ ಅವರ ಗರಡಿಯಲ್ಲಿ ಕಲಿಯಬೇಕಾದ ವರಸೆಗಳು ಸಾವಿರ ಇವೆ. ಅವೆಲ್ಲವನ್ನು ಅವರಿಂದ ಕಲಿತ ಬಳಿಕ ಎಂದಾದರೊಂದು ದಿನ, ನಾವೂ ಅವರ ಕಣ್ಣೆದುರಿಗೇ ಸೇನಾಧಿಪತ್ಯ ವಹಿಸಿ, ಅವರು ಕಲಿಸದ ರಣವಿದ್ಯೆ, ಪ್ರಭುಗಳು ನಮಗಿಟ್ಟ ಅನ್ನ-ಎರಡೂ ಸಾರ್ಥಕವಾಯಿತು ಎನಿಸುತ್ತವೆ. ಹೊಯ್ಸಳ ವೀರಲಕ್ಷ್ಮಿಯ ವಿಜಯ ಪರಂಪರೆಗೆಂದೇ ಆರಂಭವಾದ ಪ್ರಭುಗಳ ಆಳ್ವಿಕೆಯಲ್ಲಿ ನಮಗೂ ಸರದಿ ಬರುತ್ತದೆ. ಆ ನಂಬಿಕೆ ನಮಗಿದೆ. ಅಲ್ಲದೆ, ಪ್ರಚಂಡ ದಂಡನಾಯಕರು, ತಾವೇ ಮುಖತಃ ಅಪ್ಪಣೆ ಕೊಡಿಸಿದಾರೆ-ಆದಿಯಮನ ತಲೆ ನನಗಿರಲಿ ಎಂದು. ಚೋಳರು ಅವರ ಮೀಸಲು ಎಡೆ. ದಂಡನಾಯಕರ ಮಕ್ಕಳು ಬೊಪ್ಪಣ್ಣನಿಂದ ಚೋಳರನ್ನು ತುಳಿಯಬೇಕೆಂಬ ಆಸೆ ದಂಡನಾಯಕರಿಗೆ ಎಷ್ಟು ಪ್ರಬಲವಾಗಿದೆ ಎಂಬುದನ್ನು ಕೇಳಿದೇನೆ. ಹಾಗಿರುವಾಗ ಅವರು ಬಯಸಿದುದನ್ನು ಬಯಸುವ ಅಪರಾಧವಾಗಲಿ, ಅವರ ಮೀಸಲು ಎಡೆಗೆ ಕೈ ಚಾಚುವ ಅವಿನಯವಾಗಲಿ ಕಿರಿಯರಾದ ನಮ್ಮಿಂದ ಎಂದೂ ಆಗದು. ನಮ್ಮ ಹುಡುಗರಿಗೆ ಈ ಸೌಜನ್ಯ ಪಾಠ ಆಗಿದೆಯೊ ಇಲ್ಲವೋ ಪರೀಕ್ಷಿಸಬೇಕೆಂದೇ ದಂಡನಾಯಕರು 'ಸೇನಾಧಿಪತ್ಯ ಕಿರಿಯರಿಗಾಗಲಿ' ಎಂದು ಹೇಳಿದಂತೆ ಕಾಣುತ್ತದೆ. ಅಂಥ ಪರೀಕ್ಷೆಯಲ್ಲಿ ನಾವು ಸೋಲುವವರಲ್ಲ, ಪ್ರಭುಗಳು ಹಿರಿಯ ಗಂಗರಾಜರಿಗೇ ವೀರಾಭಿಷೇಕ ಮಾಡಿ, ಅರ್ಧಚಂದ್ರ ಲಲಾಟಪಟ್ಟದಿಂದ ಶೋಭಿಸುವ ಅವರ ಶಿರಸನ್ನೇ ಏರಿ, ಸೇನಾಧಿಪತ್ಯದ ಸಿಂಹಮುಖ ಪಟ್ಟಿಕೆಯೂ ರಾರಾಜಿಸಲಿ.'

ಕುಮಾರ ವಿಷ್ಣುದಂಡನಾಯಕ ಆಡಿದ ಮಾತಿನ ನಯ, ವಿನಯಕ್ಕೆ ಸಭೆ ಮೆಚ್ಚಿ ತಲೆದೂಗಿತು. ಆತನ ಮಾತನ್ನು ಕೇಳಿ, ಅವನನ್ನು ತನ್ನ ಧರ್ಮಪುತ್ರನಾಗಿ ಮಾಡಿಕೊಂಡುದು ಸಾರ್ಥಕವಾಯಿತು ಎನಿಸಿತು ವಿಷ್ಣುವರ್ಧನನಿಗೆ. ಆ ಸಂತೋಷದಿಂದ ಮೂಡಿದ ಮಂದಹಾಸದ ಕಾಂತಿ ತುಂಬಿದ ಧ್ವನಿಯಲ್ಲಿ ಗಂಗರಾಜನತ್ತ ತಿರುಗಿ ಹೇಳಿದ—

'ಪ್ರಧಾನಿಗಳೇ ಚೋಳಮರ್ಧನ ಕಾರ್ಯದ ಮುಂದಾಳುಗಳಾಗಬೇಕು ಎಂಬ ನಮ್ಮ ಅಭಿಪ್ರಾಯವನ್ನೇ ಸಭೆಯೂ ಸೂಚಿಸಿ, 'ಹೊಯ್ಸಳರ ಓಲಗದಲ್ಲಿ ಜನ ಹತ್ತಾದರೂ ಮನಸ್ಸು ಒಂದು' ಎಂಬ ಆಡಿಕೆಯ ಮಾತನ್ನು ಇಂದು ಸಾರ್ಥಕಪಡಿಸಿದೆ. ಹಿರಿಯರು ನಮ್ಮ ಆಯ್ಕೆಯನ್ನು ಒಪ್ಪಿಕೊಂಡು, ಈ ಕೆಲಸವನ್ನು ನಡೆಸಿಕೊಡಬೇಕು.'

ಎಲ್ಲರೂ ಒಂದಾಗಿ 'ತಾವೇ ದಂಡನಾಯಕರಾಗಬೇಕು' ಎಂದು ಹೇಳಿದುದನ್ನು ಕೇಳಿ ಗಂಗರಾಜರ ಹೃದಯದಲ್ಲಿ ಕೃತಜ್ಞತೆ, ಪ್ರೇಮಗಳು ತುಂಬಿಬಂದು ಕಣ್ಣಿನಲ್ಲಿ ಹನಿಯಾಗಿ ಹೊರಹೊಮ್ಮಿತು. ಉತ್ತರೀಯದ ಕುಡಿಯಿಂದ, ಕಣ್ಣನ್ನು ಒರಸಿಕೊಂಡು, ಗದ್ಗದಕಂಠರಾಗಿ ಹೇಳಿದರು—

'ಸಭೆಯ ಅಪ್ಪಣೆಯನ್ನು. ರಾಜಾಜ್ಞೆಯನ್ನು ಅಲ್ಲ ಎಂದು ಹೇಳಲಾರೆ. ತಮ್ಮೆಲ್ಲರ ಅಪ್ಪಣೆ ಹರಕೆಯಾಗಿ ನನ್ನ ನೆತ್ತಿಯ ಮೇಲಿರಲಿ, ಆ ಹರಕೆಯಿಂದ ನನ್ನ ವಯೋ ಜೀರ್ಣ ವೃದ್ಧ ಬಾಹುಗಳಿಗೆ, ತಮ್ಮೆಲ್ಲರ ನಂಬಿಕೆಯನ್ನು ಸಾರ್ಥಕಗೊಳಿಸುವ ಬಲ ಬರಲಿ. ಇಂದು ತಮ್ಮ ಸ್ನೇಹ, ಸೌಜನ್ಯ, ವಿಶ್ವಾಸ, ಪ್ರೇಮಗಳಿಂದ ನನಗೆ ಹಿರಿಯರಾದ ಜನ, ಲೋಕಕ್ಕೆ ಹಿರಿಯರಾಗುವಂತೆ ಜಿನ ಭಗವಂತ ಅನುಗ್ರಹಿಸಲಿ.'

—ಎಂದಷ್ಟು ಹೇಳಿ, ಗಂಟಲು ಕಟ್ಟಿಬಂದು, ಮುಂದೆ ಮಾತನಾಡಲು ಆಗದೆ, ನುಡಿ ತೊದಲಾಗಿ ಗಂಗರಾಜರು ಕುಳಿತುಕೊಂಡರು.

ಸಭೆಯ ಆಯ್ಕೆಯನ್ನು ಗಂಗರಾಜರು ಒಪ್ಪಿದ ಬಳಿಕ, ರಾಜಾಜ್ಞೆಯಂತೆ ಓಲಗದ ಪುರೋಹಿತರು, ಗಂಗರಾಜರ ತಲೆಯ ಮೇಲೆ, ಆಶೀರ್ವಾದ ಮಂತ್ರ ಪೂರ್ವಕವಾಗಿ, ಪುಣ್ಯನದೀಜಲವನ್ನು ಸಿಂಪಡಿಸಿ, ಅವರ ಹಣೆಗೆ ಸಿಂಹ ಮುಖವನ್ನುಳ್ಳ ಮಣಿಮಯ ಹೇಮಲಲಾಬಟ ಪಟ್ಟಿಕೆಯನ್ನಿರಿಸಿದರು.

ದ್ವಿಜರ ಮಂತ್ರಘೋಷದೊಂದಿಗೆ, ಪಂಚ ಮಹಾವಾದ್ಯರವವೂ ಬೆರೆದಿರಲು, ವಿಷ್ಣುವರ್ಧನ ಸ್ವಹಸ್ತದಿಂದ ಸೇನಾಧಿಪತ್ಯ ಸೂಚಕವಾದ ರತ್ನಖಚಿತ ಖಡ್ಗವನ್ನು ರಣವೀಳಯದೊಂದಿಗೆ ಗಂಗರಾಜರಿಗೆ ನೀಡಿದ. ಆ ಸಂದರ್ಭದ ಸಂತೋಷದಿಂದ ಸಭೆಯಲ್ಲಿ ಹಬ್ಬಿದ ಕರತಾಡನ, ಹರ್ಷ ಧ್ವನಿಗಳು ಅಡಗಿದ ಬಳಿಕ ನುಡಿದ—

“ವಯೋವೃದ್ಧರೂ, ಜ್ಞಾನವೃದ್ಧರೂ, ಸಮರ ವಿದ್ಯಾಪಾರಂಗತ ಗಾಂಗೇಯರೂ ಆದ ಮಹಾಪ್ರಚಂಡ ದಂಡನಾಯಕರು ಚೋಳರ ಮೇಲೆ ದಾಳಿ ಮಾಡಲೆಂದು ಹೊರಟ, ನಮ್ಮ ಸೇನೆಯ ಆಧಿಪತ್ಯವನ್ನು ವಹಿಸಿ, ಈ ಸಮರದಲ್ಲಿ ಗೆಲುವು ನಮ್ಮದೇ ಎಂಬ ಭರವಸೆಯನ್ನು ನಮಗೆ ನೀಡಿದಾರೆ.’

’ಈ ಗಳಿಗೆಯಿಂದಲೂ, ಹೊಯ್ಸಳ ಸೇನೆಗೆ ಅವರ ಆಜ್ಞೆಯೇ ಮಹದಾಜ್ಞೆ. ಅವರ ಮಾತಿಗೆ ಇದಿರಾಡುವುದಾಗಲಿ, ಅಳುಕುವುದಾಗಲಿ ಸಂಶಯ ವ್ಯಕ್ತಪಡಿಸುವುದಾಗಲಿ ರಾಜದ್ರೋಹವಾಗುತ್ತದೆ. ಈ ಮಾತನ್ನು ಯಾರೊಬ್ಬರೂ ಮರೆಯದಿರಲಿ.’

’ಮಹಾ ದಂಡನಾಯಕರು ಯಾವ ಬಗೆಯ ದಾಕ್ಷಿಣ್ಯ, ಮುಖ ಮರ್ಯಾದೆ, ಸಂಕೋಚಗಳಿಗೂ ವಶರಾಗದೆ, ಸರ್ವತಂತ್ರ ಸ್ವತಂತ್ರರಾಗಿ ತಮಗೆ ಸೂಕ್ತವೆಂದು ತೋರಿದ ರೀತಿಯಲ್ಲಿ ಯುದ್ಧಯಾತ್ರೆಯನ್ನು ನಡೆಸಬಹುದು. ತಮಗೆ ಬೇಕಾದ ಕೆಲಸಕ್ಕೆ ಯಾರನ್ನು ಬೇಕಾದರೂ ನೇಮಿಸಿಕೊಳ್ಳುವ, ಒಲ್ಲದವರನ್ನು ತೆಗೆದು ಹಾಕುವ, ಸಂಶಯ ಬಂದವರನ್ನು ಶೂಲಕ್ಕೇರಿಸುವ ಅಧಿಕಾರವು ಇಂದಿನಿಂದ ಅವರದು. ಸಾಮಾನ್ಯ

ಸೈನಿಕನಿರಲಿ, ಸೇನೆಯೊಂದಿಗೆ ಬರುವ ನಮಗೂ ಅವರ ಅಧಿಕಾರ, ಆಜ್ಞೆ ಅನ್ವಯಿಸುತ್ತದೆ. ಈ ಮಾತು ಎಲ್ಲರಿಗೂ ತಿಳಿದಿರಲಿ.'

'ಮಹಾಪ್ರಧಾನರು ನಮ್ಮ ವಿಜಯ ಸೇನಾಧಿಪತ್ಯವನ್ನು ಒಪ್ಪಿಕೊಂಡು ನಮಗೆ ಗೆಲುವಿನ ಭರವಸೆ ನೀಡಿದ ಉಪಕಾರಕ್ಕಾಗಿ, ಇಂದು ನಾವು ಅವರಿಗೆ ಬಿಂಡಿಗನವಿಲೆ ಗ್ರಾಮವನ್ನು ಸರ್ವಮಾನ್ಯ ಗ್ರಾಮವಾಗಿ, ಈ ದತ್ತಿ ಆಚಂದ್ರಾರ್ಕಸ್ಥಾಯಿಯಾಗಿ ನಡೆದು ಬರುವಂತೆ ನೇಮಿಸಿ, ಅವರಿಗೆ ನೀಡಿದೇನೆ. ಸೇನಾಧಿಪತ್ಯವನ್ನು ಸ್ವೀಕರಿಸಿದಂತೆಯೇ, ದಂಡನಾಯಕರು, ಈ ಅಲ್ಪ ಉಡುಗೊರೆಯನ್ನೂ ಸ್ವೀಕರಿಸಬೇಕು.'

ವಿಷ್ಣುವರ್ಧನನ ಮಾತನ್ನು ಕೇಳಿದ ಸಭೆ ಮತ್ತೊಮ್ಮೆ ಕರತಾಡನ ಮಾಡಿ, 'ಉಘೇ....ಉಘೇ....ಗಂಗರಾಜ ದಂಡನಾಯಕ ಉಘೇ' ಎಂದು ಕೂಗಿ ತನ್ನ ಮೆಚ್ಚುಗೆಯನ್ನು ವ್ಯಕ್ತಪಡಿಸಿತು.

ಆ ಹರ್ಷೋದ್ಗಾರದ ಸದ್ದು ಅಡಗಿದ ಬಳಿಕ, ಗಂಗರಾಜರು ಎದ್ದು ನಿಂತು—

'ಪ್ರಭುಗಳು ತಮ್ಮ ಔದಾರ್ಯದಿಂದ ನನ್ನ ಬಾಯಿ ಕಟ್ಟಿದಾರೆ. ನಾನೇನೂ ನುಡಿಯಲಾರೆ. ಆದರೆ ಇಷ್ಟು ಮಾತ್ರ ಹೇಳಲೇಬೇಕು. ಯುದ್ಧದಲ್ಲಿ ಗೆದ್ದವರಿಗೆ, ಅವರು ತೋರಿದ ಸಾಹಸಕ್ಕಾಗಿ, ಮೆಚ್ಚುಗೆಯ ಉಡುಗೊರೆಯನ್ನು ಕೊಡುವುದು, ಯುದ್ಧದಲ್ಲಿ ಮೃತರಾದವರಿಗೆ ಪರೋಕ್ಷ ವಿನಯವಾಗಿ ದಾನ ನೀಡುವುದು ಎರಡನ್ನೂ ನಾಡು ಕೇಳಿಬಲ್ಲೆ. ಆದರೆ ನನಗೆ ಆ ಇಬ್ಬಗೆಯಲ್ಲಿ ಯಾವುದೇ ರೀತಿಯಲ್ಲೂ ಉಡುಗೊರೆ ಪಡೆಯುವ ಅರ್ಹತೆ ಬಂದಿಲ್ಲ. ಆದರೂ ಪ್ರಭುಗಳು ತಮ್ಮ ಅಸೀಮ ಔದಾರ್ಯದಿಂದ ನನಗೆ ಬಿಂಡಿಗನನಿಲೆಯನ್ನು ದಾನ ನೀಡಿದಾರೆ. ಈ ವಿಷಯದಲ್ಲಿ ಪ್ರಭುಗಳು ನನ್ನಲ್ಲಿ ತೋರಿದ ನಂಬುಗೆ, ಇಂಥ ಕೋಟಿ ಉಡುಗೊರೆಗಳಿಗಿಂತಲೂ ಮಿಗಿಲಾದದ್ದು. ಆ ನಂಬಿಕೆ, ವಿಶ್ವಾಸವೊಂದು ನನ್ನಲ್ಲಿ, ನನ್ನ ಮನೆತನದವರಲ್ಲಿ ಆಚಂದ್ರಾರ್ಕಸ್ಥಾಯಿಯಾಗಿ ಉಳಿಯಲಿ. ಪ್ರಭುಗಳು ನನಗೆ ಕೊಟ್ಟ ಬಿಂಡಿಗನವಿಲೆ ಗ್ರಾಮವನ್ನು ಅವರು ನನ್ನಲ್ಲಿಟ್ಟ

ನಂಬಿಕೆ ಸಾರ್ಥಕವಾಗುವಂತೆ ಅನುಗ್ರಹಿಸಲೆಂದು ಆದಿ ತೀರ್ಥಂಕರರ ದಿವ್ಯ ಅಡಿಗಳ ನಿತ್ಯಾರ್ಚನೆಗಾಗಿ ನನ್ನ ಗುರುಗಳಾದ ಶ್ರೀ ಶ್ರೀ ಶ್ರೀ ಶುಭಚಂದ್ರ ಸಿದ್ಧಾಂತದೇವರ ಪಾದಪಂಕಜಗಳಿಗೆ ಅರ್ಪಿಸಿದ್ದೇನೆ. ಅದರಂತೆ ಪ್ರಭುಗಳು ಶಾಸನವನ್ನು ದಯಪಾಲಿಸಬೇಕಾಗಿ ಬೇಡುತ್ತೇನೆ. ಪ್ರಭುಗಳ ರತ್ನ ಮುಕುಟಕ್ಕೆ ಅವರ ಸಿಂಹಾಸನಕ್ಕೆ ದೈವಾನುಗ್ರಹ, ಗುರು ಹರಕೆಯ ವಜ್ರ ರಕ್ಷೆಯಿರಲಿ. ಪ್ರಭುಗಳಿಗೆ ನಿತ್ಯ ವಿಜಯವಾಗಲಿ.'

—ಎಂದು ಹೇಳಿದರು.

ಅಂದಿನ ದೊರೆಯ ಓಲಗದಲ್ಲಾದ ದೊರೆಯ ಮತ್ತು ಗಂಗರಾಜರ ಔದಾರ್ಯದ ಘಟನೆ ಕಥೆಯಾಗಿ ಹೊಯ್ಸಳ ಸೀಮೆಯಲ್ಲೆಲ್ಲಾ ಹಬ್ಬಿತು.

೪

ಸೇನಾಧಿಪತ್ಯವನ್ನು ಪಡೆದ ಗಳಿಗೆಯಿಂದಲೂ, ಗಂಗರಾಜರು ದಂಡಯಾತ್ರೆಗೆ ಸೇನೆಯನ್ನು ಸಿದ್ಧಗೊಳಿಸುವ ಕೆಲಸವನ್ನು ಆರಂಭಿಸಿದರು. ಚೋಳರನ್ನು ಗೆಲ್ಲಬೇಕೆಂಬ ಗಂಗರಾಜರ ಬಯಕೆ, ಸೇನಾಧಿಪತ್ಯ ತಮಗೇ ಆದ ಬಳಿಕ, 'ಬರೀ ಗೆಲುವುದೇನು, ಮತ್ತೆ ಕಾವೇರಿಯ ಆಚೆ ಎಲ್ಲೂ ಚೋಳರ ಸೊಲ್ಲು ಕೇಳದಂತೆ ಮಾಡಬೇಕು' ಎಂಬ ಶಪಥವಾಗಿ ಮಾರ್ಪಟ್ಟಿತ್ತು.

ಆ ಶಪಥ ಸಾಧನೆಗಾಗಿ, ಚೋಳರ ಒಳಗುಟ್ಟನ್ನರಿತ ಬೇಹುಗಾರರು ತಂದಿತ್ತ ವಾರ್ತೆಗಳನ್ನು ಸಂಗ್ರಹಿಸಿ, ಅದರ ಆಧಾರದ ಮೇಲೆ, ಸಮರ ತ್ರಂತಜ್ಞರೊಂದಿಗೆ ವಿಚಾರ ವಿನಿಮಯ ನಡೆಸಿ, ಚೋಳ ಸೀಮೆಗೆ ಹೇಗೆ ಮುತ್ತಿಗೆ ಹಾಕುವುದೆಂದು ನಿಶ್ಚಯಿಸಿದರು. ಮಾಂಸದ ಒಳಗೆ ಹುದುಗಿದ ಮುಳ್ಳನ್ನು ಇಕ್ಕಳದಿಂದ ಕೀಳುವಂತೆ, ತಲಕಾಡಿನ ಕೋಟೆಯೊಳಗೆ ಅವಿತ ಚೋಳ ದಳಪತಿಯನ್ನು ಇಬ್ಬದಿಯಿಂದ ಬಳಸಿ, ಸುತ್ತುಗಟ್ಟಿ ನಾಶಮಾಡುವುದೆಂದು ತೀರ್ಮಾನಿಸಿದರು.

ಆ ತಂತ್ರಕ್ಕೆ ಅನುಸಾರವಾಗಿ, ತಲಕಾಡಿನ ದಂಡಯಾತ್ರೆಗೆಂದು ಗೊತ್ತಾದ ಹೊಯ್ಸಳ ದಳವನ್ನು ಇಬ್ಭಾಗವಾಗಿ ವಿಭಾಗಿಸಿ, ಒಂದು ಸೀಳು ತೊಂಡನೂರು, ಶ್ರೀರಂಗಪಟ್ಟಣ, ಬನ್ನೂರು, ಜನನಾಥಪುರಗಳ ಮಾರ್ಗವಾಗಿ ತಲಕಾಡಿನತ್ತ ನಡೆಯಬೇಕೆಂದೂ, ಮತ್ತೊಂದು ಸೀಳು, ಶ್ರೀಮದ ನಾದಿ ನಾರಸಿಂಹ ಚತುರ್ವೇದಿ ಮಂಗಲ (ಮದ್ದೂರು) ಮಳವಳ್ಳಿಯ ಮಾರ್ಗವಾಗಿ ದಾಳಿ ಮಾಡಬೇಕೆಂದೂ ಗೊತ್ತುಮಾಡಿದರು.

ಹಾಗೇ ತಲಕಾಡಿನ ಮೇಲೆ ಹೊಯ್ಸಳರ ದಾಳಿ ನಡೆದ ಸಂದರ್ಭದಲ್ಲಿ ನಿಗರಿಲಿ ತೋಳ ಮಂಡಲದ ಚೋಳ ಸಾಮನ್ತರಾಗಲಿ, ನೀಲಗಿರಿ, ಕೊಂಗು ಸೀಮೆಯ ಚೋಳ ಮಾಂಡಲಿಕರಾಗಲಿ, ತಲಕಾಡಿನವರ ನೆರವಿಗೆ ಬರಲಾಗದನಂತೆ, ಅವರ ಮೇಲೂ ಅದೇ ಕಾಲಕ್ಕೆ ದಾಳಿ ನಡೆಸಬೇಕೆಂದು ನಿಶ್ಚಯವಾಯಿತು.

ದಂಡಯಾತ್ರೆಯನ್ನು ಹೇಗೆ ನಡೆಸಬೇಕೆಂದು ನಿಶ್ಚಯವಾದಂತೆಯೇ, ದಂಡಯಾತ್ರೆ ತೆರಳುವ ಸೇನೆಗೆ ಆ ಕಾಲದಲ್ಲಿ ಯಾವ ಕೊರತೆಯೂ ಉಂಟಾಗದಂತೆ, ಯಾವುದರ ಅಭಾವದಿಂದಲೂ ಸೇನೆ ಕೂರಗದಂತೆ, ಪ್ರತಿಯೊಂದು ಪರಿಕರವೂ ಸಾಕಷ್ಟು ಪ್ರಮಾಣದಲ್ಲಿ ಸಂಗ್ರಹವಾಗಿದೆಯೇ ಇಲ್ಲವೇ ಎಂಬುದನ್ನು ಸವಿವರವಾಗಿ ವಿಚಾರಿಸಿ ಎಲ್ಲವೂ ತೃಪ್ತಿಕರವಾಗಿದೆ ಎಂದು ಮನಸ್ಸಿಗೆ ನೆಮ್ಮದಿಮಾಡಿಕೊಂಡರು-ಗಂಗರಾಜರು.

ಎಲ್ಲವೂ ಗಂಗರಾಜರ ಮನಸ್ಸಿ ಒಪ್ಪುವಂತೆ ಸಿದ್ಧವಾದರೂ, ಆಳುಕೊಂದು ಗಂಗರಾಜರ ಮನಸ್ಸಿನಲ್ಲಿ ಇರಿಯುತ್ತಲೇ ಇತ್ತು. ಅದಕ್ಕೆ ಕಾರಣ-ವಿಷ್ಣುವರ್ಧನ ತಾನೇ ನೇರವಾಗಿ ತಲಕಾಡಿನ ಯುದ್ಧದಲ್ಲಿ ಭಾಗವಹಿಸುತ್ತೇನೆ ಎಂದು ನಿಶ್ಚಯಿಸಿದ್ದು.

ಗಂಗರಾಜನಿಗೆ ಸೇನಾಧಿಸತ್ಯವಾದ ಓಲಗದಲ್ಲೇ ವಿಷ್ಣುವರ್ಧನ—

'ಇವರ ಆಜ್ಞೆ, ಸೇನೆಯ ಮೇಲೇ ಅಲ್ಲದೆ ಸೇನೆಯೊಂದಿಗೆ ಬರುವ ನಮ್ಮ ಮೇಲೂ ನಡೆಯುತ್ತದೆ'

—ಎಂದು ಹೇಳಿ, ತನ್ನ ಅಭಿಲಾಷೆಯನ್ನು ಸೂಕ್ಷ್ಮವಾಗಿ ತಿಳುಹಿದ್ದ.

ಸುತ್ತಲವರು ಆಡುವ ಒಂದೊಂದು ಮಾತನ್ನೂ, -ಅದು ಮುಖ್ಯವೋ ಅಮುಖ್ಯವೋ- ಗಮನವಿಟ್ಟು ಕೇಳಿ, ಬಳಿಕ ಆ ಮಾತಿನ ಹಿಂದೆ ಬೇರೇನಾದರೂ ಅಡಗಿದೆಯೋ ಎಂದು ಚಿಂತಿಸುವುದು ಮಹಾಪ್ರಧಾನರಾದ ಗಂಗರಾಜರಿಗೆ ಅಭ್ಯಾಸದಿಂದ ಬಂದ ಗುಣವಾಗಿತ್ತು. ಎಂತಲೇ ವಿಷ್ಣುವರ್ಧನ ಪ್ರಾಸಂಗಿಕವಾಗಿ ಆಡಿದ ಆ ಮಾತು, ಅವರ ಕಿವಿಯನ್ನು ಪ್ರವೇಶಿಸಿ ಹೃದಯವನ್ನು ಮುಟ್ಟಿತ್ತು. ಆ ಮಾತು ಕೇಳಿದ ಗಳಿಗೆಯಿಂದಲೂ ದೊರೆಯೊಂದಿಗೆ ಆ ವಿಷಯದಲ್ಲಿ ಪ್ರಸ್ತಾಪಮಾಡಿ, ಆತನ ಮನೋಗತವೇನೆಂಬುದನ್ನು ತಿಳಿದುಕೊಳ್ಳಬೇಕೆಂದು ಚಡಪಡಿಸುತ್ತಿದ್ದರು.

ದಿನ ದಿನವೂ ಅವರು ದೊರೆಯನ್ನು ಕಂಡು, ಯುದ್ಧಸಿದ್ಧತೆಯ ವಿಚಾರ ಚರ್ಚಿಸುತ್ತಿದ್ದರೂ, ದಿನವೂ ಅವರು ವಿಷ್ಣುವರ್ಧನನನ್ನು 'ಕೇಳ ಬೇಕು. ಕೇಳಿ ಮನಸ್ಸಿನ ಸಂದೇಹ ನಿವಾರಣೆ ಮಾಡಿಕೊಳ್ಳಬೇಕು' ಎಂದು ಕೊಳ್ಳುತ್ತಿದ್ದ ಪ್ರಶ್ನೆಯನ್ನು ಮಾತ್ರ ಕೇಳಲಾಗುತ್ತಿರಲಿಲ್ಲ. ವಿಷ್ಣುವರ್ಧನನೇ ಹೇಗೊ ಆ ಮಾತು ಚರ್ಚೆಗೆ ಬರದಂತೆ, ಸಂಭಾಷಣೆಯನ್ನು ಕುಶಲವಾಗಿ ನಡೆಸುತ್ತಿರುವಂತೆ ಅವರಿಗೆ ಬೋಧೆಯಾಗುತ್ತಿತ್ತು.

ಒಮ್ಮೊಮ್ಮೆ ದೊರೆ ಆ ಮಾತು ತಪ್ಪಿಸುವುದನ್ನು ಕಂಡು ತಾವೇ ನೇರವಾಗಿ ಕೇಳಿ ಮನಸಿನ ತವಕವನ್ನು ನಿವಾರಣೆ ಮಾಡಿಕೊಳ್ಳಬೇಕು ಎನಿಸುತ್ತಿತ್ತು. ಆದರೆ 'ಒಂದು ವೇಳೆ ದೊರೆಗಳು ಏನೋ ಆ ಹೊತ್ತಿನಲ್ಲಿ ತೋಚಿತೆಂದು ಆಡಿ, ಬಳಿಕ ಮರೆತಿದ್ದರೆ, ನಾನಾಗಿಯೇ ಆ ಮಾತನ್ನು ನೆನಪಿಸುವುದೇಕೆ?' ಎಂದು ಹಿಂಜರಿದು ತಾವೂ ಕೇಳದೆ ಸುಮ್ಮನಾಗುತ್ತಿದ್ದರು.

ಅಂತೂ ತಮ್ಮ ಮುಂದಿಲ್ಲವಾದರೆ ಹೋಗಲಿ, ಬೇರೆ ಯಾರ ಮುಂದಾದರೂ ವಿಷ್ಣುವರ್ಧನ ಆ ವಿಷಯದಲ್ಲಿ ಪ್ರಸ್ತಾಪಮಾಡಿದ್ದರೆ, ಅವರಿಂದಲಾದರೂ ಆ ವಿಷಯವನ್ನು ಖಚಿತವಾಗಿ ಹೀಗೇ ಎಂದು ತಿಳಿಯಬೇಕೆಂದು ಯೋಚಿಸುತ್ತಿದ್ದರು.

ಹೀಗಿರುವಾಗಲೇ ಒಂದು ದಿನ ಹಗಲು ಬೋಕಿಮಯ್ಯ ಅರಸನ ಆಣತಿಯಂತೆ, ಏನೋ ಸುದ್ದಿ ತಿಳಿಸಲು ಗಂಗರಾಜರ ಮನೆಗೆ ಬಂದ.

ಬೋಕಿಮಯ್ಯ ವಿಷ್ಣುವರ್ದನ ದೇವನ ಹಡವಳ, ಅದಕ್ಕಿಂತ ಹೆಚ್ಚಾಗಿ ಆತನ 'ಗರುಡ'. ದೊರೆ ಎಲ್ಲಿದ್ದರೆ ಆತನು ಅಲ್ಲಿರಬೇಕು; ದೊರೆ ಎಲ್ಲಿ ನಡೆದರೆ ಆತನಿಗಿಂತ ಒಂದು ಹೆಜ್ಜೆ ಮುಂದೆ ಈತ ಇರಬೇಕು. ಅಂತಃಪುರದಲ್ಲಿ ಒಂದೆಡೆಯಲ್ಲಿ ಉಳಿದು, ಬೇರೆಲ್ಲ ದೊರೆಯ ಕಣ್ಣು ಏನು ನೋಡಿದರೂ, ಕಿವಿ ಏನು ಕೇಳಿದರೂ ನಾಲಿಗೆ ಏನು ನುಡಿದರೂ ಅದು ಬೋಕಿಮಯ್ಯನಿಗೆ ತಿಳಿದಿರಲೇಬೇಕು. ಎಂತಲೇ ಬೋಕಿಮಯ್ಯ ಯಾವುದಾದರೂ ವಿಷಯದಲ್ಲಿ 'ಅದು ಹಾಗೆ ಇದು ಹೀಗೆ' ಎಂದು ಹೇಳಿದರೆ, ಅದು ಆತನದಲ್ಲ ದೊರೆಯದೇ ಅಭಿಪ್ರಾಯ ಎಂದೇ ಹೇಳಬಹುದಾಗಿತ್ತು. ಬೊಕಿಮಯ್ಯನ ವಿಷಯದಲ್ಲಿ ಆ ನಂಬಿಕೆ ಇದ್ದುದರಿಂದಲೇ, 'ಯುದ್ಧಕ್ಕೆ ತೆರಳುವ ವಿಷಯಲ್ಲಿ ದೊರೆಯ ಅಭಿಪ್ರಾಯ ಹೇಗೊ' ಎಂಬುದನ್ನು ಅರಿಯುವ ಕಾತರದಿಂದ ಕುದಿಯುವ ಗಂಗರಾಜರಿಗೆ, ಬೋಕಿಮಯ್ಯ ತಾನಾಗಿಯೇ ಮನೆ ಬಾಗಿಲಗೆ ಬಂದದ್ದನ್ನು ಕಂಡು ಸಂತೋಷವಾಯಿತು.

'ಬನ್ನಿ ಬೋಕಿಮಯ್ಯ . ಕುಳಿತುಕೊಳ್ಳಿ. ಬಹಳದೂರ ಮನೆ ಬಾಗಿಲಿಗೇ ದಯಮಾಡಿಸಿದಿರಿ'

—ಎಂದು ಅವನನ್ನು ವಿಶ್ವಾಸದಿಂದ ಕರೆದು, ಕೂಡಲು ಆಸನವನ್ನು ತೋರಿಸಿ, ಬಳಿಯಲ್ಲಿದ್ದ ಪರಿಚಾರಕನಿಗೆ, ಬೋಕಿಮಯ್ಯನಿಗೆ ಹಾಲು ಹಣ್ಣುಗಳನ್ನು ತಂದು ಕೊಡಲು ಹೇಳಿ—

'ಏನು ವಿಶೇಷ?'

—ಎಂದು ಕೇಳಿದರು.

'ಪ್ರಭುಗಳೇ ನಿಮ್ಮ ಬಳಿಗೆ ಕಳಿಸಿದರು.'

'ಅಪ್ಪಣೆಯಾಗಿದ್ದರೆ, ನಾನೇ ಅರಮನೆಗೆ ಬರುತ್ತಿದ್ದೆ. ಆಯಿತು. ಪ್ರಭುಗಳು ಏನು ಅಪ್ಪಣೆ ಮಾಡಿದರು?'

'ಬಳ್ಳಿಗಾಮೆಯಿಂದ, ದೊರೆಗಳ ಮಾವಂದಿರಾದ ಪೆರ್ಗ್ಗಡೆ ಮಾರಸಿಂಗಮಯ್ಯನವರು, ಒಬ್ಬ ಕುಶಲ ಲೋಹ ಕರ್ಮಿಯನ್ನು ಕಳಿಸಿಕೊಟ್ಟಿದಾರೆ. 'ಬಹಳ ನಿಪೂಣನಾದ ಆತ ಏನೋ ಕೆಲವು ಹೊಸ ಸಂಶೋಧನೆಗಳನ್ನು ಮಾಡಿದಾನೆ. ಆತನ ಸಂಶೋಧನೆಗಳಿಂದ ಸೇನೆಗೆ, ಯುದ್ಧದಲ್ಲಿ ತುಂಬಾ ಸಹಾಯವಾಗಬಹುದು. ಆತ ತಮ್ಮ ಆಸ್ಥಾನದಲ್ಲಿರಲು ಅರ್ಹನಾದ ವ್ಯಕ್ತಿ' ಎಂದು ಹೇಳಿ ಕಳಿಸಿದಾರೆ ಮಾರಸಿಂಗಮಯ್ಯನವರು.'

'ತಮ್ಮ ಅಳಿಯಂದಿರ ವಿಷಯದಲ್ಲಿ ಮಾರಸಿಂಗಮಯ್ಯನವರಿಗೆ ಇರುವ ಅಭಿಮಾನ ಅಭಿನಂದನಾರ್ಹವಾದದ್ದು. ನಾರೀಜನ ರತ್ನವಾದ ತಮ್ಮ ಅಣುಗಿಯನ್ನು ಪ್ರಭುಗಳಿಗೆ ಮರವಳಿಗೆಯಾಗಿ ನೀಡಿ, ಅವರ ಅಭ್ಯುದಯಕ್ಕೆ ದೋಹದ ಮಾಡಿದುದೇ ಅಲ್ಲದೆ, ತಮ್ಮ ಕಣ್ಣಿಗೆ ಏನು ಅತಿಶಯವಾದದ್ದು ಕಂಡರೂ, ಅದು ತಮ್ಮ ಅಳಿಯನ ಆಸ್ಥಾನಕ್ಕೆ ಅಲಂಕಾರವಾಗಲಿ ಎಂದು ಬಯಸುವ ಅವರ ಅಭಿಮಾನ ಅತಿಶಯವಾದದ್ದು. ಅಂಥ ಮಾವಂದಿರು ಸಿಗುವುದು ಪೂರ್ವಪುಣ್ಯ. ಇರಲಿ- ಅವರು ಕಳಿಸಿರುವ ಲೋಹ ಕರ್ಮಿ ಈಗ ಎಲ್ಲಿದಾನೆ?'

'ತಮಗೆ ಒಪ್ಪಿಸಬೇಕು ಎಂದು ಹೇಳಿ ನನ್ನೊಂದಿಗೆ ದೊರೆಗಳು ಕಳಿಸಿದರು. ನಿಮ್ಮ ಸಮಯ ಹೇಗೋ ಏನೋ ತಿಳಿಯಬೇಕೆಂದು ಹೊರಗೆ ಇರುವಂತೆ ತಿಳಿಸಿ ಬಂದೆ.'

'ಆತನ ಪ್ರತಿಭಾ ವಿಶೇಷವೇನಂತೆ?'

'ನನಗೂ ಕುತೂಹಲ ತಡೆಯದೆ, ದಾರಿಯಲ್ಲೇ ಅದು ಏನು, ಎಂಥದು, ಮಾದರಿ ಏನಾದರೂ ತಂದಿದ್ದೀರಾ ಎಂದು ವಿಚಾರಿಸಿದೆ. ಆತ ಏನೇನೋ ವಿವರಿಸಿದ. ಆದರೆ, ನನ್ನತಲೆಗೆ ಅದಾವುದೂ ಹಿಡಿಯಲಿಲ್ಲ. ದೊರೆಗಳು ಅತನನ್ನು ವಿಶಾರಿಸಿ ತಿಳಿದುಕೊಂಡು 'ಈತ ಹೇಳುವುದು ನಿಜವಾದರೆ, ಅದರಿಂದ ನಮಗೆ ಅತ್ಯಂತ ಹೆಚ್ಚಿನ ಉಪಕಾರವಾಗುತ್ತದೆ' ಎಂದರು. ಪ್ರಭುಗಳು, ನೀವು-ನಿಮ್ಮಿಬ್ಬರಿಗೆ ನೀಡಿದ ಕುಶಾಗ್ರ ಮತಿಯನ್ನು ವಿಧಾತ ನಮಗೆ ಕರುಣಿಸಲಿಲ್ಲ. ಆದರೆ ಒರಟು ಒರಟಾಗಿ ಇಷ್ಟು ತಿಳಿಯಿತು.......'

'ಆದೇನು ಹೇಳಿ?'

'ನಮ್ಮ ರಥಗಳು ಏರು ಇಳಿವಿನ ಮೇಲೆ, ಕಲ್ಲು ಜಾಡಿನಲ್ಲಿ ಚಲಿಸುವಾಗ, ಆಗುವ ಕುಲಕಾಟದಿಂದ ತುಂಬ ತೊಂದರೆಯಾಗುತ್ತದೆಯಲ್ಲವೇ? ಆ ತೊಂದರೆಯನ್ನು ನಿವಾರಿಸುವ ಏನೋ ಒಂದು ಲೋಹ ರಜ್ಜು ವಿಶೇಷವನ್ನು ಆತ ಕಂಡುಹಿಡಿದಿದಾನಂತೆ. ಅದೇನು ಎಂದು ಕೇಳಿದುದಕ್ಕೆ ಎಂಥದೋ ಒಂದು ಕಬ್ಬಿಣದ ಸರಪಳಿ ತೋರಿಸಿದ. ಅದನ್ನು ಬೇಕಾದರೆ ಇದ್ದರೂ ಇರಬಹುದು ಎಂದು ನಂಬಬಹುದು. ಆದರೆ ಆತ ಹೇಳಿದ ಇನ್ನೊಂದು ವಿಷಯ ಮಾತ್ರ ಸುತರಾಂ ನಂಬುವುದಕ್ಕೆ ಆಗದು. ಆತ ಆ ವಿಷಯ ಹೇಳಿದಾಗ, ಏನೋ ಯೋಚಿಸಿ, ಯೋಚಿಸಿ, ಆತನ ಮಿದುಳು ಕೆಟ್ಟಿರಬೇಕು ಎಂದೇ ನನಗೆ ತೋರಿತು. 'ಅತಿ ಸರ್ವತ್ರ ವರ್ಜಯೇತ್' ಎಂದು ಹಿರಿಯರು ಹೇಳಿದುದು ಸುಳ್ಳಲ್ಲ.'

—ಎಂದ ಬೋಕಿಮಯ್ಯ ನಗುತ್ತಾ.

ಆತ ಹೇಳಿದುದನ್ನು ಕೇಳಿ ಗಂಗರಾಜರಿಗೆ ಮಾತ್ರ ನಗು ಬರಲಿಲ್ಲ. ಅದಕ್ಕೆ ಪ್ರತಿಯಾಗಿ ಅವರ ಆಸಕ್ತಿ ಕೆರಳಿತು.

'ನೀವು ಹೇಳುವುದೂ ಸುಳ್ಳಲ್ಲ ಬೋಕಿಮಯ್ಯ . 'ಓದಿ ಓದಿ ಮರುಳಾದ ಕೂಚಿಭಟ್ಟ' ಎನ್ನುವ ಗಾದೆಯೂ ಸುಳ್ಳಲ್ಲ. ಹಾಗೇ ನಮ್ಮ ಕಣ್ಣು ಕಂಡದ್ದೇ ನಿಜ, ನಮ್ಮ ಕಿವಿ ಕೇಳಿದ್ದೇ ಸತ್ಯ, ನಮ್ಮ ಬುದ್ಧಿ ಊಹಿಸಿದ್ದೇ ಸಿದ್ಧಾಂತ ಎನ್ನುವ ಚಪಲವೂ ಅಹಂಕಾರ ಬಂಧಿತರಾದ ಮಾನವರಲ್ಲಿರುವುದು ಸುಳ್ಳಲ್ಲ. ನೆಲದಲ್ಲಿ ನಿಂತು ನೋಡಿದವನು, ಬೆಟ್ಟದ ಮೇಲೆ ನಿಂತು ನೋಡಿದವನು ಹೇಳಿದುದನ್ನು ನಂಬದೆ ಹೋದಮಾತ್ರಕ್ಕೆ, ಅದು, ಕಳಗೆ ನಿಂತವನ ದೃಷ್ಟಿ ಪರಿಮಿತಿಗೆ ಪ್ರಮಾಣವಾಗುವುದೇ ಹೊರತು, ಮೇಲೆ ನಿಂತು ಹೇಳಿದವನ ಮಾತು ಸುಳ್ಳು ಎನ್ನುವುದಕ್ಕೆ ಸಾಕ್ಷಿಯಾಗುವುದಿಲ್ಲ.'

— ಎಂದರು ಬೋಕಿಮಯ್ಯನ ವಾದವನ್ನು ಗಂಭೀರವಾಗಿ ಖಂಡಿಸಿ.

ಅವರ ಮಾತನ್ನು ಕೇಳಿ, ಬೋಕಿಮಯ್ಯನ ಮುಖದ ಮೇಲಿದ್ದ ನಗು ಹಾಗೇ ಕಮರಿ ಹೋಗಿ, ಪೆಚ್ಚಾದ.

'ಏನೋ ಅಷ್ಟೆಲ್ಲಾ ಸೂಕ್ಷ್ಮ ನನಗೆ ತಿಳಿಯುವುದಿಲ್ಲವೆಂದು ಮೊದಲೇ ನಾನು ಹೇಳಲಿಲ್ಲವೇ? ತಲೆ ತೆಗೆದುಕೊಳ್ಳುವುದು, ತಲೆ ಕೊಡುವುದು -ಇವೆರಡೇ ನಮಗೆ ಗೊತ್ತಿರುವ ವಿದ್ಯೆ. ಈ ಇಂದ್ರಜಾಲ ಮಹೇಂದ್ರಜಾಲವೆಲ್ಲಾ ನನಗೆ ಅರ್ಥವಾಗುವುದಿಲ್ಲ.'

—ಎಂದ ಒಣಗಿದ ಧ್ವನಿಯಲ್ಲಿ.

'ಕ್ಷಮಿಸಿ ಬೋಕಿಮಯ್ಯ, ನಿಮ್ಮ ಮನಸ್ಸು ನೋಯಿಸಬೇಕು ಎಂದು ನಾನು ಆ ಮಾತು ಆಡಲಿಲ್ಲ.'

'ಶಿವ ಶಿವಾ! ನಿಮ್ಮ ವಿಷಯದಲ್ಲಿ ನನಗೆ ಎಂದೂ ಅಂಥ ಭಾವನೆಯಿಲ್ಲ.'

’ನನ್ನ ವಿಷಯದಲ್ಲಿ ತಮಗೆ ಆ ನಂಬಿಕೆ ಇರುವುದು ನನ್ನ ಭಾಗ್ಯ. ನಾನು ಆ ಮಾತು ಹೇಳಿದುದಕ್ಕೆ ಕಾರಣವಿಷ್ಟೆ-ನಮ್ಮ ಜನರ, ಯಾವುದನ್ನೂ ಪ್ರಮಾಣಿಸಿ ನೋಡದೆ ನಗುವ ಬುದ್ಧಿಯಿಂದಾಗಿ, ಎಷ್ಟೋ ಸಂಶೋಧನೆಗಳು ಮಾನ್ಯತೆ ಸಿಗದೆ ಸುತ್ತು ಹೋಗಿವೆ. ಆರ್ಷಯವಾಗಿ ಬಂದ ಎಷ್ಟೋ ವಿದ್ಯೆಗಳೂ ಕೈ ತಪ್ಪಿ ಹೋಗಿವೆ. ಆದುದರಿಂದ ಯಾರಾದರೂ ತಮ್ಮ ಪ್ರತಿಭೆಗೆ ಗೋಚರವಾದ ವಿಷಯವನ್ನು ಹೇಳಿದಾಗ ಅದನ್ನು ಕೇಳಿ ನಗದೆ, ಪ್ರಮಾಣಿಸಿ ನೋಡಿ ಬಳಿಕ ಅದು ಸುಳ್ಳೋ ನಿಜವೋ ಎಂದು ಹೇಳು ಎಂಬುದಾಗಿ ನನ್ನ ಗುರುಗಳು ಶುಭಚಂದ್ರ ಸಿದ್ಧಾಂತ ದೇವರು ಅಪ್ಪಣೆ ಕೊಡಿಸಿದ್ದರು- ಅವರು ನನಗೆ ಹೇಳಿದುದನ್ನು ನಾನು ನಿಮಗೆ ಹೇಳಿದೆ; ಅಷ್ಟೆ’

—ಎಂದರು ಗಂಗರಾಜರು.

’ಅದು ನ್ಯಾಯವೇ. ಅದಕ್ಕೇ ಅವರನ್ನು ನಿಮ್ಮ ಬಳಿಗೆ ಕರೆ ತಂದದ್ದು.’

’ಸರಿಯೆ. ಅವರು ಮತ್ತೇನೋ ನಂಬಲಾಗದಂಥ ವಿಶೇಷವನ್ನು ಕಂಡುಹಿಡಿದಿದ್ದಾರೆಂದಿರಲ್ಲಾ- ಅದೇನು?’

’ಅದೇನೋ-ದೂರದಲ್ಲಿರುವುದೂ ಹತ್ತಿರ ಇರುವಂತೆ ಕಾಣುವ ವಸ್ತು. ನನಗೂ ಅದನ್ನು ಆತ ತೋರಿಸಿದ. ಆ ಕೊಳವೆಯ ಮೂಲಕ ನೋಡಿದಾಗ, ಭೈರವ ದೇವರ ಬೆಟ್ಟ ಅಂಗೈಯ ಮೇಲೆ ಇರುವಂತೆ, ಅಷ್ಟು ಹತ್ತಿರ ಕಾಣಿಸಿತು. ಅದೆಲ್ಲಿಯಾದರೂ ಸಾಧ್ಯವೇ? ಅದಕ್ಕೇ ಅದೇನೋ ಕಣ್ಣು ಕಟ್ಟು, ಮಾಟ ಇರಬೇಕು ಎಂದೇ ಅಂದುಕೊಂಡೆ.’

—ತಾತ್ಸಾರವಾಗಿ ಹೇಳಿದ ಬೋಕಿಮಯ್ಯ.

ಆತ ನಿರ್ಲಕ್ಷ್ಯವಾಗಿ ಹೇಳಿದ ಆ ಮಾತನ್ನು ಕೇಳಿ ಗಂಗರಾಜರು ತಟಕ್ಕನೆ ಆಸಕ್ತಿ ಕೆರಳಿ, ಸೆಟೆದು ಕುಳಿತು ಕೇಳಿದರು—

'ಏನಂದಿರಿ? ಆತ ಕೊಟ್ಟ ಕೊಳವಿಯ ಮೂಲಕ ನೋಡಿದಾಗ, ದೂರದ ಭೈರವ ದೇವರ ಗುಡ್ಡ ಅಂಗೈಯ ಮೇಲಿರುವಂತೆ ಕಾಣಿಸಿತೆ? ಅದು ನಿಜವಾದರೆ ಅದು ಬಹು ಅಮೂಲ್ಯವಾದ ಸಂಶೋಧನೆ. ಮೊದಲು ಆತನನ್ನು ಒಳಗೆ ಕರೆದು ತನ್ನಿ, ಅದೇನೋ ನೋಡಬೇಕು. ಅದು ಕಣ್ಣು ಕಟ್ಟೋ, ಇಂದ್ರಜಾಲವೋ-ಏನಾದರಾಗಲಿ. ದೂರದಲ್ಲಿದ್ದುದನ್ನು ಹತ್ತಿರ ಇರುವಂತೆ ಕಾಣುವುದು ಸಾಧ್ಯವಾದರೆ, ನಮ್ಮ ತೋಳಿಗೆ ಬ್ರಹ್ಮಾಸ್ತ್ರದ ಬಲ ಬರುತ್ತದೆ. ಆತನನ್ನು ಕರೆದುತನ್ನಿ-ಬೋಕಿಮಯ್ಯ'

—ಎಂದು ಬೋಕಿಮಯ್ಯನನ್ನು ತಮ್ಮ ಉತ್ಸಾಹದ ಚಾವಟಿಯಿಂದ ಜಡಿದು, ಬಳ್ಳಿಗಾಮೆಯ ಕುಶಲ ಕರ್ಮಿಯನ್ನು ಕರೆತರಲು ಅಟ್ಟಿದರು. ಹೊರಗೆ ಹೋದ ಬೋಕಿಮಯ್ಯ ಆತನನ್ನು ಒಳಗೆ ಕರೆತರುವವರೆಗೂ, ಕುಳಿತುಕೊಳ್ಳುವಷ್ಟು ತಾಳ್ಮೆಯೂ ಇರಲಿಲ್ಲ-ಸ್ವಾಭಾವಿಕವಾಗಿ ಸಂಯಮಿಗಳಾದ ಗಂಗರಾಜರಿಗೆ. ಕುಳಿತಲ್ಲಿಂದ ಎದ್ದು ಹೋಗಿ, ಅವರು ಬರುವುದನ್ನೇ ಕಾಯುತ್ತಾ ಬಾಗಿಲ ಬಳಿ ನಿಂತರು.

ಬಳ್ಳಿಗಾಮೆಯ ನಿಪುಣ, ಬೀದಿಯನ್ನು ದಾಟಿ, ಮನೆಯ ಮುಂದಿನ ಅಂಗಳದ ಬಾಗಿಲನ್ನು ಪ್ರವೇಶಿಸುತ್ತಿದ್ದ ಹಾಗೇ ಹದ್ದಿನ ಕಣ್ಣಿನಿಂದ ಆತನನ್ನು ನೋಡಿದರು-ಗಂಗರಾಜರು.

ಆತನನ್ನು ನೋಡಿ, ಮುಗಿಲಿಗೆ ಏರಿದ್ದ ಅವರ ಉತ್ಸಾಹದ ಕಾವು ಆರಿ, ನೆಲಕ್ಕಿಳಿಯಿತು.

ಬೋಕಿಮಯ್ಯ ಹೇಳಿದುದನ್ನು ಕೇಳಿ, ಗಂಗರಾಜರು, ಆ ನಿಪುಣ ಹಾಗಿರಬೇಕು, ಹೀಗಿರಬೇಕು ಎಂದೇನೇನೋ ನೂರು ಊಹಿಸಿಕೊಂಡಿದ್ದರು. ಆದರೆ ಕಣ್ಣೆದುರಿಗೆ ಬಂದ ನಿಪುಣ ಆ ಊಹೆಗಳಿಗೆ ತದ್ವಿರುದ್ಧವಾಗಿದ್ದ.

ಆಳು ನೋಡುವುದಕ್ಕೂ ಎದ್ದು ಕಾಣುವಂತಿರಲಿಲ್ಲ—ಮನುಷ್ಯ ಕುಳ್ಳ, ತಲೆಯ ಮೇಲೆ ಹೊರವಾಗಿ ಬೆಳೆದ ಕೂದಲು, ಎಣ್ಣೆನೀರು ಕಾಣದೆ ಜಟೆಗಟ್ಟಿ, ಮುಖದ

ಮೇಲೆ ಬೆಳೆದು, ಎದೆಯಮೇಲೆ ಹಬ್ಬಿದ ನೆರೆತ ಗಡ್ಡದೊಂದಿಗೆ ಹರಡಿಕೊಂಡು, ಗಂಗರಾಜರು ಚಿಕ್ಕಂದಿನಲ್ಲಿ ಕಥೆಯಾಗಿ ಕೇಳಿದ ಜಡೆಮುನಿಯ ಹಾಗಿದ್ದ. ದಪ್ಪನಾಗಿ ಧೂಳು ತುಂಬಿದ ಆ ಕೂದಲಿನಲ್ಲಿ ಆತನ ಮುಖ ಕಾಣದ ಹಾಗೆ ಎಲ್ಲೋ ಅವಿತುಕೊಂಡಿತ್ತು. ಆತನ ಮೈಯೂ ಅಷ್ಟೆ—ಕೃಶವಾಗಿ, ದೊಡ್ಡಗಾಳಿಗೆ ಹಾರಿ ಹೋಗುವಷ್ಟು ಬಡಕಲಾಗಿತ್ತು. ಅದರ ಮೇಲೆ, ಮೊಣಕಾಲುವರೆಗೆ ಮುಚ್ಚುವ ಒಂದು ತುಂಡು ಪಂಚೆ, ಮೈ ಮುಚ್ಚುವ ಒಂದು ಹಚ್ಚಡ, ಅವು—ಅವುಗಳ ಬಣ್ಣ ಮೂಲತಃ ಎಂಥಾದಿತ್ತು ಎಂದು ಹೇಳುವುದಕ್ಕೆ ಆಗದಷ್ಟು ಹೊಲಸಾಗಿದ್ದವು.

'ಹೊಟ್ಟೆಗೆ ಬಡತನವಾದರೆ, ದೇವರು ಕೊಟ್ಟ ನೀರು, ಕಾಡಿನಲ್ಲಿ ಯಥೇಚ್ಛವಾಗಿ ದೊರಕುವ ಅಂಟುವಾಳದ ಕಾಯಿಗೂ ಬಡತನವೇ? ಶುದ್ಧ ಶ್ವಪಚ'—ಎಂದುಕೊಂಡರು ಗಂಗರಾಜರು ಆತನನ್ನು ನೋಡಿ.

ಮೊದಲ ನೋಟದಿಂದ ಆದ ಪರಿಣಾಮದಿಂದ, ಅವರಲ್ಲಿ ಬೋಕಿಮಯ್ಯನ ಮಾತುಕೇಳಿ ಮೂಡಿದ ಉತ್ಸಾಹ ಉಡುಗಿಹೋಗಿ, ಬೋಕಿಮಯ್ಯನ ಸಂದೇಹವೇ ನಿಜವೇನೋ ಎನಿಸಿತು.

ಹೊಟ್ಟೆಯ ಆತುರ ಕಳೆದುಕೂಳ್ಳಲು, ಕಷ್ಟುಪಟ್ಟು ಕಲಸ ಮಾಡಲು ಇಚ್ಛೆಯಿಲ್ಲದೆ 'ನಾನು ಆ ವಿದ್ಯೆ ಬಲ್ಲೆ ಈ ವಿದ್ಯೆ ಬಲ್ಲೆ. ಬಂಡೆ ಬಂಗಾರ ಮಾಡುತ್ತೇನೆ. ನೀರಿನ ಮೇಲೆ ಕಲ್ಲು ತೇಲಿಸುತ್ತೇನೆ' ಎಂದುಕೊಂಡು, ಜನರ ಲೋಭ ಬುದ್ಧಿಯನ್ನು ಕೆರಳಿಸಿ, ಅವರ ನಂಬಿಕೆಯನ್ನು ದುರುಪಯೋಗ ಪಡಿಸಿಕೊಂಡು, ತಮ್ಮ ಹೊಟ್ಟೆ ಹೊರೆದುಕೊಳ್ಳುವ ಅಲ್ಪರನ್ನು ಎಷ್ಟೋ ಜನರನ್ನು ಗಂಗರಾಜರೂ ಕಂಡಿದ್ದರು. 'ಇವನೂ ಆಂಥವನೇಯೇ?' ಎನಿಸಿತು ಅವರಿಗೆ.

'ಮಾರಸಿಂಗಮಯ್ಯ ಅಂಥವರನ್ನು ನಂಬಿ ದೊರೆಯ ಬಳಿ ಕಳಿಸುವಷ್ಟು ಮೂರ್ಖರಲ್ಲ' ಎಂಬ ವಿಶ್ವಾಸದಿಂದ, ಬೋಕಿಮಯ್ಯ ಒಳಗೆ ಕರೆದು ತಂದಾತನಿಗೆ

ನಮಸ್ಕರಿಸಿ 'ಕುಳಿತುಕೊಳ್ಳಿ' ಎಂದು ಗೌರವವಾಗಿ ಹೇಳಿ, ಆತ ಕೂಡಲು ಆಸನ ತೋರಿಸಿದರು.

ಆದರೆ ಆತ ಅವರು ತೋರಿಸಿದ ಆಸನದಮೇಲೆ ಕುಳತುಕೊಳ್ಳಲಿಲ್ಲ.

'ನನ್ನ ಯೋಗ್ಯತೆ ನಂಬಿಕೆಯಾದಮೇಲೆ, ಆ ಮರ್ಯಾದೆಯನ್ನೆಲ್ಲಾ ಮಾಡಿ.'

—ಎಂದು ಗಡುಸಾಗಿ ಹೇಳಿ, ನೆಲದಮೇಲೆಯೇ, ಕಂಭಕ್ಕೆ ಒರಗಿಕೊಂಡು, ತನ್ನನ್ನು ನೋಡುವ ಗಂಗರಾಜರ ಮುಖವನ್ನೇ ದಿಟ್ಟಿಸಿ ನೋಡುತ್ತಾ ಕುಳಿತುಕೊಂಡ.

ದೂರದಲ್ಲಿ ಕಾಣದಿದ್ದ ಆತನ ಮುಖ, ಹತ್ತಿರ ಬಂದು ಕುಳಿತಾಗ ಗಂಗರಾಜನಿಗೆ ಕಂಡಿತು. ನರೆತು ಧೂಳು ಕಟ್ಟಿ ಹೊಲಸಾದ ಕೂದಲು ತುಂಬಿದ ಆತನ ಮುಖದಲ್ಲಿ ಕಾಣುತ್ತಿದ್ದುದು ಆತನ ಕಣ್ಣು ಮೂಗು ಎರಡೇ. ತೆಳುವಾದ, ದೀರ್ಘವಾದ ಆತನ ನಾಸಿಕ, ತುದಿಯಲ್ಲಿ ವ್ಯಾಘ್ರನಖದಂತೆ ಬಾಗಿತ್ತು. ಆತನ ಕಣ್ಣುಗಳಲ್ಲಿ, ನೀರಿನಲ್ಲಿ ಬಿಂಬಿಸಿದ ಪ್ರಖರಣದ ಬೆಳಿಕಿನಂತೆ ಏನೋ ಬೆಳಕು ಹೊಳೆಯುತ್ತಾ, ನೋಡುವವರಿಗೆ ಭಯವನ್ನೂ, ಹಾಗೇ 'ಆತ ಯಾರೋ ವಿಲಕ್ಷಣ ವ್ಯಕ್ತಿ' ಎಂಬ ಭಾವನೆಯನ್ನು ಮೂಡಿಸುವ ಕಾಂತಿ ತುಂಬಿತ್ತು. ಆತನನ್ನು ನೋಡಿದ ಗಂಗರಾಜರಲ್ಲೂ ಅದೇ ಭಯ-ಗೌರವ ಸಮಿಶ್ರವಾದ ಭಾವನೆ ಮೂಡಿತು.

ತಾನು ಬಂದ ಬಳಿಕ 'ನಮಸ್ಕಾರ, ಕುಳಿತುಕೊಳ್ಳಿ' ಎಂದಷ್ಟೇ ಹೇಳಿ, ತನ್ನನ್ನೇ ನೋಡುತ್ತಾ ಕುಳಿತ ಗಂಗರಾಜರನ್ನು ನೋಡಿ, ಆತ—

'ಬಂದ ದಾರಿಗೆ ಸುಂಕ ಉಂಟೋ ಇಲ್ಲವೋ ಹೇಳಿಬಿಡಿ. ನಿಮ್ಮ ವೇಳೆ ವ್ಯರ್ಥಮಾಡದೆ ಹೊರಟು ಹೋಗುತ್ತೇನೆ.'

—ಎಂದ ಬಹು ಒರಟಾಗಿ.

ಹೊಯ್ಸಳ ಸಾಮ್ರಾಜ್ಯದ ಮಹಾ ಪ್ರಧಾನರನ್ನು ಆತ ಅಷ್ಟು ಒರಟಾಗಿ ಮಾತನಾಡಿಸುವುದನ್ನು ಕಂಡು ಬೋಕಿಮಯ್ಯನಿಗೆ ಸಿಟ್ಟು ಬಂದಿತು. ಆತನ ಮುಖಲಕ್ಷಣದಿಂದಲೇ ಅದನ್ನರಿತ ಗಂಗರಾಜರು ಬೋಕಿಮಯ್ಯ ಮಾತಾಡದಂತೆ, ಕಣ್ಣ ಸನ್ನೆ ಮಾಡಿ—

'ಕ್ಷಮಿಸಬೇಕು. ನಮ್ಮ ವೇಳೆಯಷ್ಟೇ ತಮ್ಮದೂ ಅಮೂಲ್ಯ. ಮನೆಗೆ ಅತಿಥಿಗಳಾಗಿ ಬಂದ ತಮ್ಮ ಯೋಗಕ್ಷೇಮವನ್ನೂ ವಿಚಾರಸದೆ ಮುಖವನ್ನೇ ನೋಡುತ್ತಾ ಕುಳಿತುದು ನಮ್ಮ ಅವಿನಯವಾಯಿತು. ಬೋಕಿಮಯ್ಯನವರು ತಮ್ಮ ಪ್ರತಿಭೆಯ ವಿಷಯ ಏನೇನೋ ಹೇಳಿದರು. ಆ ಮಾತು ಕೇಳಿಯಾದ ಆಶ್ಚರ್ಯದಲ್ಲಿ ಈ ಅನುಚಿತ ಕಾರ್ಯ ನಮ್ಮಿಂದ ಘಟಿಸಿತು. ಮತ್ತೊಮ್ಮೆ ಕೇಳಿಕೊಳ್ಳುತ್ತೇನೆ—ಕ್ಷಮಿಸಬೇಕು. ತಮ್ಮನ್ನು ನಾನು ಕೆಲವು ಪ್ರಶ್ನೆ ಕೇಳಬಹುದೇ?'

—ಎಂದು ವಿನಯ ತುಂಬಿದ ಧ್ವನಿಯಲ್ಲಿ ಕೇಳಿದರು.

'ಅಗತ್ಯವಾಗಿ. ಕೇಳಿದ ಪ್ರಶ್ನೆಗಳಿಗೆಲ್ಲಾ ಉತ್ತರ ಹೇಳುವುದಕ್ಕೇ ಹುಟ್ಟಿದವನು ನಾನು.'

—ಕಹಿಯಾದ ಧ್ವನಿಯಲ್ಲಿ ಹೇಳಿದ ಆತ.

'ತಮ್ಮ ಹೆಸರೇನು?'

—ಆತನ ಮಾತಿನ ಕಹಿ ಮನವರಿಕೆಯಾಗಿಯೂ, ಆಗದಂತೆ ಕೇಳಿದರು ಗಂಗರಾಜರು.

'ಗೌರಾಚಾರಿ. ಹುಟ್ಟಿ ಬೆಳೆದದ್ದು ಬನವಾಸಿ ಸೀಮೆಯ ಬಳ್ಳಿಗಾಮೆಯಲ್ಲಿ. ಮಣ್ಣಾಗುವುದಕ್ಕೆ ಸ್ಥಳವನ್ನು ಬ್ರಹ್ಮ ಎಲ್ಲಿ ಸೃಷ್ಟಿಸಿದಾನೆಯೋ ತಿಳಿಯದು. ವಯಸ್ಸು ನಲವತ್ತಾಯಿತು—ಹೂ— ನಾಲ್ಕು ಕತ್ತೆಗಳಿಗಾಗುವಷ್ಟು. ಆದರೆ ಬುದ್ಧಿ ಮಾತ್ರ ಬಂದಿಲ್ಲ.

ಮನೆಮಠ ಹೆಂಡಿರು ಮಕ್ಕಳು—ಯಾರು ಇಲ್ಲ. ಇನ್ನೇನಾದರೂ ಪ್ರಶ್ನೆ ಕೇಳುವುದು ಇದೆಯೇ?'

—ಎಂದು ಆತ ಒಂದೇ ಉಸಿರಿನಲ್ಲಿ ಗಂಗರಾಜರು ಕೇಳಿದ ಪ್ರಶ್ನೆ ಕೇಳಬಹುದಾದ ಪ್ರಶ್ನೆಗಳೆಲ್ಲಕ್ಕೂ ಉತ್ತರಕೊಟ್ಟು ಹೇಳಿದ.

ಆತನ ಉತ್ತರದ ರೀತಿಯಲ್ಲಿದ್ದ ಅವಿನಯದ ಧೋರಣೆಯನ್ನು ಕಂಡು ಬೋಕಿಮಯ್ಯನಿಗೆ ಸೈರಿಸುವುದಾಗದೆ—

'ನೀವು ಮಾತಾಡುತ್ತಿರುವುದು ಮಹಾಪ್ರಧಾನರ ಇದಿರುನಲ್ಲಿ. ನೆನಪಿರಲಿ !'

—ಎಂದು ಎಚ್ಚರಿಸಿದ.

'ತಪ್ಪಾಯಿತು. ಅವರೂ ಮನುಷ್ಯರೇ ಎಂದು ತಿಳಿದಿದ್ದೆ.'

—ಎಂದ ಗೌರಾಚಾರಿ, ಬೋಕಿಮಯ್ಯನ ಬೆದರಿಕೆಯ ನುಡಿಗೆ ತಲೆಬಾಗದೆ.

'ನೀವು ಸ್ವಲ್ಪ ಶಾಂತವಾಗಿರಿ ಬೋಕಿಮಯ್ಯ . ನನ್ನಂಥ ಮೂರ್ಖರ ಸಾವಿರ ಪ್ರಶ್ನೆಗಳಿಗೆ ಉತ್ತರ ಕೊಟ್ಟು, ಕೊಟ್ಟು ಆಚಾರ್ಯರಿಗೆ ಬೇಸರವಾಗಿರಬೇಕು. ಅವರು ಹೇಳಿದುದೂ ಸರಿಯೆ. ಅವರ ಊರು, ಕುಲ, ಗೋತ್ರಗಳೂ ಇಂದಿನ ಸಂದರ್ಭದಲ್ಲಿ ಅಮುಖ್ಯ....'

'ಅಷ್ಟೇ ಅಲ್ಲ....'

—ಗಂಗರಾಜರು ತಮ್ಮ ಮಾತು ಮುಗಿಸುವುದಕ್ಕೂ ಅವಕಾಶಕೊಡದೆ, ಗೌರಾಚಾರಿ ಹೇಳಿದ—

'ಅಷ್ಟೇ ಅಲ್ಲ... ಈ 'ಗಿಲಿ ಗಿಲಿ ಕಂಬದಾಟ' ಎಲ್ಲಿ ಮುಗಿಯುತ್ತದೆ ಎಂದೂ ಅಪ್ಪಣೆ ಕೊಡಿಸಿ.'

'ಅಂದರೆ....'

—ಗೌರಾಚಾರಿಯ ಮಾತು ಅರ್ಥವಾಗದೆ ಕೇಳಿದರು ಗಂಗರಾಜರು.

'ಮಾರಸಿಂಗಮಯ್ಯನವರು ನನ್ನನ್ನು ದೊರೆಗಳ ಬಳಿಗಟ್ಟಿದರು. ಅವರು ನನ್ನನ್ನು ನಿಮ್ಮ ಬಳಿ ಕಳುಹಿಸಿದರು. ನೀವೂ ನನ್ನ ಮುಖ ನೋಡಿದ್ದಾಯಿತು; ಹೆಸರು ದೆಸೆ ವಿಚಾರಿಸಿದ್ದೂ ಆಯಿತು. ಮುಂದೆ ತಾವೆಲ್ಲಿಗೆ, ಯಾರ ಹತ್ತಿರ ಕಳುಸುತ್ತೀರೊ—ಅದೂ ಹೇಳಿಬಿಡಿ. ಈ ಕಂಭದ ಸಾಲಿಗೆ ಕೊನೆಯಾವುದು ಎಂದು ಹೇಳಿದರೆ, ಅಲ್ಲಿಗೆ ಹೋಗಿ ಸುತ್ತು ಹಾಕಿ ನಿಲುತ್ತೇನೆ.'

ಆತನ ಆ ಮಾತಿನಿಂದಲೇ ಆತನಿಗೆ ಪ್ರಭುಗಳ ಭೇಟಿಯಾಗಿಲ್ಲವೆಂಬುದನ್ನು ಅರ್ಥ ಮಾಡಿಕೊಂಡ ಗಂಗರಾಜರು, ಆತನ ಒರಟು ಮಾತಿನ ಹಿಂದಿನ ಅಸಮಾಧಾನಕ್ಕೂ ಕಾರಣವನ್ನು ಅರಿತುಕೊಂಡು—

'ಪ್ರಭುಗಳು ಈಗ ಯಾವುದೋ ವಿಶೇಷ ಕಾರ್ಯದ ಗಡಿಬಿಡಿಯಲ್ಲಿದ್ದಾರೆ. ಅವರೇ ನಿಮ್ಮನ್ನು ಕಾಣಲಿಲ್ಲ ಎಂದು ಅಸಮಾಧಾನ ಪಟ್ಟುಕೊಳ್ಳಬಾರದು....'

'ಆ ವಿಶೇಷ ಕಾರ್ಯವೇನೆಂಬುದನ್ನು ನಾನು ಬಲ್ಲೆ. ಅದನ್ನು ಹೇಳಿ, ಅದಕಾಗಿಯೇ ಮಾರಸಿಂಗಮಯ್ಯನವರು ನನ್ನನ್ನು ಕಳುಹಿಸಿದರು. ಹೋಗಲಿ—ನಿಮಗಾದರೂ ವ್ಯವಧಾನವಿದೆಯೊ! ಇಲ್ಲವೋ?'

'ವ್ಯವಧಾನವಿಲ್ಲದೆ ಏನು—ನನ್ನ ಹೊತ್ತು ತಮ್ಮದು. ತಾವು ಕಂಡುಹಿಡಿದಿರುವ ಅದ್ಭುತ ವಿಶೇಷವನ್ನು, ನನ್ನ ಮಂದಬುದ್ಧಿಗೆ ಅರಿವಾಗುವಂತೆ ವಿವರಿಸಬೇಕು.'

—ಎಂದು ಬೇಡಿದರು ಗಂಗರಾಜರು.

ಗಂಗರಾಜರ ಆ ಮಾತನ್ನು ಕೇಳಿ, ಆ ಮಾತಿನಲ್ಲಿ ಕುಹಕದ ಕಸಿವಿಲ್ಲವೆಂಬುದು ಮನವರಿಕೆಯಾಗಿ, ಗೌರಾಚಾರಿಯ ಕಣ್ಣುಗಳಲ್ಲಿ ಅದುವರೆಗೂ ಹೊಳೆಯುತ್ತಿದ್ದ ಕಠೋರತೆ ಕರಗಿ, ಮೃದುವಾಯಿತು.

'ನಾನೇ ಸರ್ವಜ್ಞ ಎಂದುಕೊಳ್ಳದವರು ಒಬ್ಬರನ್ನಾದರೂ ಕಂಡದ್ದು ನನ್ನ ಪುಣ್ಯ.'

—ಎಂದು ಹೇಳಿ, ಗೌರಾಚಾರಿ, ಅದುವರೆಗೂ ಹೊರಗೆ ತೆಗೆಯದೆ, ಎದೆಯಮೇಲಿನ ಹಚ್ಚಡದ ಮರೆಯಲ್ಲಿ ಇಟ್ಟು ಕೊಂಡಿದ್ದ ಒಂದು ಬಟ್ಟೆಯ ಗಂಟನ್ನು ಹೊರತೆಗೆದ.

ಗಂಗರಾಜರು, ಬೋಕಿಮಯ್ಯ ಇಬ್ಬರೂ ಆ ಬಟ್ಟೆಯ ಗಂಟನ್ನು, ಅದರೊಳಗೆ ಏನು ಪವಾಡ ಅಡಗಿದೆಯೋ ಎಂಬಂತೆ ಕುತೂಹಲದಿಂದ ನೋಡಿದರು.

ಗೌರಾಚಾರಿ, ಆ ಬಟ್ಟೆಯ ಗಂಟನ್ನು, ನಿಧಾನವಾಗಿ ಹೂವನ್ನು ಬಿಡಿಸುವವನನಂತೆ ಮೃದುವಾಗಿ ಬಿಚ್ಚಿ, ಅದರೊಳಗೆ ಇದ್ದುದನ್ನು ಹೊರತೆಗೆದು ಗಂಗರಾಜರ ಮುಂದೆ ಇರಿಸಿದ.

ಆತ ಹೊರತೆಗೆದು ಇರಿಸಿದುದು ಒಂದು ಲೋಹ ನಿರ್ಮಿತವಾದ ರಥದ ಮಾದರಿ. ಅಂಗೈಯ ಮೇಲೆ ನಿಲ್ಲಿಸಿಕೊಳ್ಳುವಷ್ಟು ಪುಟ್ಟದಾದ ಆ ರಥದ ನಾನಾ ಭಾಗಗಳೂ, ಕುದುರೆಗಳೂ, ಆ ಪ್ರಮಾಣಕ್ಕೆ ಅನುಗುಣವಾಗಿಯೇ ನಿರ್ಮಿತವಾಗಿದ್ದವು. ಆದರೆ ಆ ರಥಕ್ಕೆ ಸಾಮಾನ್ಯ ರಥಗಳಿಗಿರುವಂತೆ ಎರಡು ಗಾಲಿ ಇರದೆ, ನಾಲ್ಕು ಗಾಲಿಗಳು ಇದ್ದು, ಹಿಂಭಾಗದ ಎರಡು ಮುಂಭಾಗದ್ದಕ್ಕಿಂತ ಕಿರಿಯದಾಗಿದ್ದವು. ಆ ರಥದಲ್ಲಿದ್ದ ವಿಶೇಷವೆಲ್ಲಾ ಆ ಚಕ್ರಗಳಲ್ಲಿ ಮತ್ತು ಆ ಚಕ್ರಗಳನ್ನು ಸೇರಿಸಿದ ಸರಪಳಿಗಳಲ್ಲಿತ್ತು.

ಆ ಚಕ್ರಗಳು, ವಾಡಿಕೆಯ ಚಕ್ರದಂತೆ ವೃತ್ತಾಕಾರವಾಗಿರದೆ, ಆ ವೃತ್ತವನ್ನು ಮಧ್ಯೆ ಮಧ್ಯೆ ಸಮಪ್ರಮಾಣವಾಗಿ, ಹಲ್ಲುಗಳಾಗಿ ಕೊರೆದು, ಆ ಹಲ್ಲುಗಳಮೇಲೆ, ಅದನ್ನು

ಹಿಡಿದುಕೊಂಡು, ಚಕ್ರಸುತ್ತಿದಂತೆಯೇ ಸುತ್ತಾದ, ತಳಭಾಗಕ್ಕೆ ನಯವಾದ ಲೋಹದ ಸರಪಳಿಯನ್ನು ಹಾಕಿತ್ತು.

ಆ ಭಾಗಗಳನ್ನು ಬಿಡಿಸಿ, ಗಂಗರಾಜರಿಗೆ ತೋರಿಸಿ ಗೌರಾಚಾರಿ ಹೇಳಿದ:

'ನೋಡಿ—ಸ್ವಾಮಿ ನಾನು ಕಂಡು ಹಿಡಿದಿರುವ ಪವಾಡವೆಲ್ಲಾ ಇಷ್ಟೆ. ಜನ ಆಡಿಕೊಳ್ಳುವಂತೆ ನಾನು ಮನವಿಕಳನೂ ಅಲ್ಲ, ಮಾಂತ್ರಿಕನೂ ಅಲ್ಲ. ಇದನ್ನು ಹೀಗೆ ನಿರ್ಮಿಸುವ ಯೋಚನೆ ನನಗೆ ಬಂದ ಸಂದರ್ಭ ಹೀಗೆ—

'ಬಳ್ಳಿಗಾಮೆ ನನ್ನ ಹುಟ್ಟೂರು ಎಂದು ನಾನು ಹೇಳಲಿಲ್ಲವೇ? ಅದು ನನ್ನ ಹುಟ್ಟೂರು ಅಷ್ಟೇ ಅಲ್ಲ—ನನ್ನನ್ನು ಹಾಳುಮಾಡಿದ ಊರೂ ಅದೇ. ಆ ಊರಿನಲ್ಲಿ ನನಗಿರುವ ಆಪ್ತರು ಎಂದರೆ-ಹೆಗ್ಗಡೆ ಮಾರಸಿಂಗಮಯ್ಯನವರು ಒಬ್ಬರೇ. ಅವರು ನನ್ನಲ್ಲಿ ವಿಶ್ವಾಸವಾಗಿರುವುದರಿಂದ, ಎರಡು ಹೊತ್ತಿನ ಅನ್ನ ಕಂಡು, ಈ ಘಟ ಜೀವಂತವಾಗಿ ಉಳಿದಿದೆ. ಇಲ್ಲವಾದಲ್ಲಿ ಎಂದೋ ಉಪವಾಸ ಸಾಯಬೇಕಾಗಿತ್ತು.'

'ನನಗೆ ಚಿಕ್ಕವನಾಗಿದ್ದಾಗಲಿಂದಲೂ ಒಂದು ಕೆಟ್ಟಬುದ್ಧಿ- ಯಾವುದನ್ನು ನೋಡಿದರೂ ಅದು ಹೀಗೇಕೆ? ಅದನ್ನು ಹೀಗೆ ಬದಲಾಯಿಸಿದರೆ ಏನಾಗುತ್ತದೆ ಎಂದು ಹುಡುಕಿ ನೋಡುವುದು, ಆ ಬುದ್ಧಿಗೆ ಬಿದ್ದೇ ತಲೆತಲಾಂತರದಿಂದ ನಮ್ಮ ಮನೆತನಕ್ಕೆ ಬಂದ ಚಿನ್ನದ ಕೆಲಸ ಮಾಡುವುದನ್ನು ಬಿಟ್ಟು ಈ ಕಬ್ಬಿಣದ ಕೆಲಸಕ್ಕೆ ಬಿದ್ದು, ಹೊಟ್ಟೆಗೆ ಹಿಟ್ಟಿಲ್ಲದ ಹಾಗೆ ಮಾಡಿಕೊಂಡೆ.'

'ನಮ್ಮ ಅಯ್ಯ ಇದ್ದಷ್ಟು ದಿನವೂ ಗಿಳಿಗೆ ಹೇಳಿದ ಹಾಗೆ ಹೇಳಿದ 'ಚಿನ್ನ ಮುಟ್ಟಿದ ಕೈ ಕಬ್ಬಿಣ ಮುಟ್ಟಬಾರದೋ. ಆದು ನಮಗೆ ಬಂದದ್ದಲ್ಲ-ಕಮ್ಮಾರನ ಕೆಲಸ. ಈ ಅಡ್ಡದಾರಿ ಹಿಡಿಯುವ ಬುದ್ಧಿ ಬೇಡ' ಅಂತ. ನಾನು ಆತನ ಮಾತುಕೇಳಲಿಲ್ಲ. ಏನೋ ಮಾಡುವುದಕ್ಕೆ ಹೋಗಿ, ಹಿಡಿ ಕಬ್ಬಿಣ ಕೆಟ್ಟರೆ, ಹೋಗಲಿ ಅಂತ ಬೆಂಕಿಯಲ್ಲಿ ಎಸೆಯ ಬಹುದು. ನಮ್ಮಂಥ ಬಡವರು ಚಿನ್ನ ಹಾಗೆ ಕೆಡಿಸೋಕೆ ಆದೀತಾ. 'ನನಗೆ ಇದೇ ಇರಲಿ'

ಅಂತ ಅಂದೆ. ಅದೇನೊ ಹೆಗ್ಗಡೆಯವರಿಗೆ ನನ್ನನ್ನು ಕಂಡರೆ ತುಂಬಾ ವಿಶ್ವಾಸ. 'ದೇವರು ನಿನಗೆ ಏನು ಕೆಲಸ ಮಾಡುವ ಬುದ್ಧಿಕೊಟ್ಟರೆ ಅದು ಮಾಡು. ನಿನ್ನ ಹೊಟ್ಟೆಗೆ ಅರಕೆಯಾದಕೆ ನನಗೆ ಹೇಳು' ಅಂತ ಹೇಳಿ , ನನ್ನ ಕೈ ಹಿಡಿದು ಕಾಪಾಡಿದರು. ಅಷ್ಟೇ ಅಲ್ಲ-ನಾನು ಬೇಗ ಹದವಾಗದ ಕಬ್ಬಿಣ ಕುಟ್ಟಿ ಮೈ ನೋವುಮಾಡಿಕೊಳ್ಳುವುದನ್ನು ನೋಡಲಾಗದೆ- 'ಗೌರಾಚಾರಿ, ನೀನು ಹೀಗೇ ಕಬ್ಬಿಣ ಕುಟ್ಟಿ ಕುಟ್ಟಿ ಸತ್ತು ಹೋಗ್ತೀಯಾ? ಅದರ ಬದಲು ಅಷ್ಟು ಹೊನ್ನು ಕೊಡ್ತೀನಿ. ಅದರಲ್ಲಿ ಸಣ್ಣದಾಗಿ ನಿನಗೇನುಬೇಕೋ ಮಾಡಿಕೊ. ಅದು ಸರಿಹೋದರೆ ಆಮೇಲೆ ಕಬ್ಬಿಣದಲ್ಲೆ ಮಾಡಿಕೊಳ್ಳಬಹುದು. ಶ್ರಮ ಕಡಿಮೆಯಾಗುತ್ತೆ' ಅಂತ ಹೇಳಿ, ಇಪ್ಪತ್ತುಗರ್ಯಾಣ ತೂಕದ ಹೊನ್ನು ಕೊಟ್ಟಿದ್ದರು. ಆಂಥ ಧಣಿ ಅವರು.'

'ಒಂದು ದಿನ, ಹೆಗ್ಗಡೆಯವರನ್ನು ನೋಡಬೇಕು ಎಂದು ಅವರ ಬಿಡಾರಕ್ಕೆ ಹೋದಾಗ, ಅಯ್ಯನವರು ಮೇಲಕ್ಕೆ ಏಳಲಾಗದ ಹಾಗೆ ಮಲಗಿಬಿಟ್ಟದ್ದರು. 'ಮೈಯಲ್ಲಿ ಏನು ಜಡ್ಡು? ಜ್ವರಾನಾ? ಮದ್ದು ತರಲೇ?' ಅಂತ ಕೇಳಿದೆ. ಅದಕ್ಕೆ ಅಯ್ಯನವರು ಉತ್ತರ ಕೊಡುವುದಕ್ಕೂ ಆಗದೆ ನರಳಿದರು. ಅವರು ನರಳಿದ್ದನ್ನು ನೋಡಿ, ನನಗೆ ಕರುಳಿಗೆ ಸೂಜಿ ಚುಚ್ಚಿದ ಹಾಗಾಗಿ ಕಣ್ಣಿನಲ್ಲಿ ನೀರು ಬಂತು. ಅಯ್ಯನವರ ಪಕ್ಕದಲ್ಲೇ ಕೂತು, ಅವರಿಗೆ ಉಪ್ಪು ಬಿಸಿನೀರಿನ ಕಾವು ಕೊಡುತ್ತಿದ್ದ ಮಾಚಿಕಬ್ಬೆಯವರನ್ನು- 'ಅವ್ವಾ, ಅಯ್ಯನೋರು ಯಾಕೆ ಹಿಂಗೆ ನರಳ್ತಾರೆ?' ಅಂತ ಕೇಳಿದೆ. ಅದಕ್ಕೆ ಆ ಅವ್ವ, ಕಣ್ಣುತುಂಬ ನೀರಿಟ್ಟುಕೊಂಡು-'ನಾನೇನು ಹೇಳ್ಲಿ ಆಚಾರಿ. ಈ ಲೋಕದಲ್ಲಿ ಎಂಥೆಂಥ ಪುಣ್ಯಾತ್ಮರೋ ಆಗಿಹೋದರು. ಆದರೆ ಈ ಹಾಳು ರಥದ ಕುಲುಕಾಟ ತಪ್ಪಿಸೋ ಅಂಥ ಪುಣ್ಯಾತ್ಮ ಹುಟ್ಟಲಿಲ್ಲ. ಕಲ್ಲುದಾರೀಲಿ, ಒಂದು ಹರಿದಾರಿ ದೂರ ರಥದಲ್ಲಿ ಹೋಗಿ ಬಂದರೆ ಸಾಕು-ತಂದೆ ತಾಯಿ ಇಟ್ಟ ಬಜೆ ಬೆಣ್ಣೆ ಎಲ್ಲಾ ಕರಗಿ ಹೋಗಿ, ಮೈ ಎಲುಬು ಪುಡಿಪುಡಿಯಾಗುತ್ತೆ. ಎಷ್ಟು ಮಜ್ಜನ ಮಾಡಿದರೂ ಇಲ್ಲ ನಾರಾಯಣ ತೈಲದಲ್ಲಿ ಮೈ ಮುಳುಗಿಸಿದರೂ ಇಲ್ಲ- ಒಂದು ಸಲ ಪ್ರಯಾಣ ಮಾಡಿದ ಮೈ ಕೈ ನೋವು

ಹೋಗಬೇಕೆಂದರೆ. ಮೂರು ಮಾಸ ಬೇಕು. ಒಂದು ಸಲ ಹೋದವರಿಗೆ ಇನ್ನು ಸಾಕಪ್ಪಾ ಈ ರಥ ಪ್ರಯಾಣ ಅನ್ನಿಸುತ್ತೆ. ಹಾಗಿರೋವಾಗ ಇನ್ನು 'ಅಲ್ಲಿ ಆ ಯುದ್ಧ, ಇಲ್ಲಿ ಈ ತುರುಗಾಳಗ' ಅಂತ ಹಗಲಿರುಳೂ ರಥದಲ್ಲಿ ಕೂತು ಊರೂರು ಸುತ್ತೋರ ಪಾಡೇನು ಹೇಳ್ತೀಯ? ನೀನು ಅದೂ ಇದೂ ಅಂತ ನೂರೆಂಟು ಏನೇನೊ ಕೆಲಸಕ್ಕೆ ಬಾರದ್ದು ಮಾಡ್ತೀಯ, ಅಂಥ ಸಾವಿರದ ಬದಲು ಇಂಥದು ಒಂದೇನಾದರೂ ಕಂಡುಹಿಡೀಬಾರದೆ. ಕೋಟಿ ಜನ ತಾಯಂದಿರು, ನನ್ನಂಥ ಹೆಂಗಸರು ಹರಸ್ತಾರೆ'- ಅಂದರು.

'ಅವ್ವೆಯವರು ಹೇಳಿದ ಮಾತನ್ನು ಕೇಳಿ, ಅಯ್ಯನವರು ನರಳುತ್ತಲೇ ನಕ್ಕು- 'ಒಳ್ಳೇ ಮಾತು ಹೇಳಿದೆ ಮಾಚಿ. ರಥದ ಗಾಲಿ ಮರದ್ದಾಗಿರೊವರೆಗೂ, ಮಾರ್ಗದಲ್ಲಿ ಕಲು, ತಗ್ಗು, ದಿಣ್ಣೆ ಇರೋವರೆಗೂ, ಯುದ್ಧ ಕರ್ಮವನ್ನು ಗಂಟುಹಾಕಿಕೊಂಡ ನಮ್ಮಂಥವರಿಗೆ ಮೈ ನೋವು ತಪ್ಪಿದ್ದಲ್ಲ. ಅದಕ್ಕೆ ಗೌರಾಚಾರಿ ಏನು ಮಾಡಬೇಕು? ಯುದ್ಧಕ್ಕೆ ರಥದಲ್ಲಿ ಕುಳಿತುಕೊಂಡು ಹೋಗಲಾರದ ಈ ಗೋಳಿಗಾಗಿಯೇ ವಿಷ್ಣು ಗರುಡನನ್ನು, ಶಿವ ನಂದಿಯನ್ನು ವಾಹನಮಾಡಿಕೊಂಡನೆಂದು ಕಾಣುತ್ತೆ! ದೇವತೆಗಳ ಪಾಡೇ ಹಾಗಾದ ಮೇಲೆ ಇನ್ನು ನಮ್ಮಂಥ ನರಮನುಷ್ಯರ ಪಾಡೇನು. ಮಯ, ವಿಶ್ವಕರ್ಮರೇ ಮಾಡಲಾಗದ್ದನ್ನು ನಮ್ಮ ಗೌರಾಚಾರಿ ಮಾಡುವುದು ಸಾಧ್ಯವೆ?' ಎಂದರು. ಮಾತನಾಡಿದರೂ ಅಯ್ಯನವರಿಗೆ ಮೈ ಎತ್ತಿ ಕುಸಿದ ಹಾಗಾಗುತ್ತಿತ್ತೇನೋ. ಮಾತನಾಡುತ್ತಾ ನರಳಿದರು.'

'ಅಯ್ಯನೋರು ಹೇಳಿದ್ದು ಕೇಳಿ ನನಗೇಕೊ ಕರುಳು ಕಿವಿಚಿದ ಹಾಗಾಯಿತು. 'ಉಂಟೇ ಬುದ್ಧಿ. ರಥ ಬರೋದಾರೀಲಿ ಇರಬಾರದು ಅನ್ನೋ ಬುದ್ಧಿ ತಗ್ಗು ದಿಣ್ಣೆಗಿಲ್ಲ. ಅದರ ಮೇಲೆ ಓಡಬಾರದು ಅನ್ನೋ ಬುದ್ಧಿ ಮರದ ಗಾಲಿಗೆ, ಅದನ್ನು ಎಳೆಯೋ ಪಶುವಿಗಿಲ್ಲ ಅಂತ ನಾವೂ ಬಾಯಿ ಮುಚ್ಚಿಕೊಂಡು ಅನುಭವಿಸೋದಕ್ಕೇನಾ ದೇವರು ನಮಗೆ ಬುದ್ಧಿ ಕೊಟ್ಟಿರೋದು? ಹಂಗಂದ್ರೆ ಆಗದು. ಎಲ್ಲಾ ವ್ಯಾಧೀಗೂ ಮದ್ದು ಮಾಡಿದ

ಹಾಗೆ, ಇದಕ್ಕೂ ಏನಾರ ಒಂದು ಮದ್ದು ಹುಡುಕಲೇ ಬೇಕು' ಎಂದೆ ನಾನು. ಅದಕ್ಕೆ ಅಯ್ಯನೋರು 'ನರವೈದ್ಯ, ಅಶ್ವವೈದ್ಯ, ಗಜವೈದ್ಯವೆಲ್ಲಾ ಆಯಿತು. ಇನ್ನು ಉಳಿದದ್ದು-ಈ ರಥವೈದ್ಯವೊಂದು. ಅದೇನು ಮಾಡುತ್ತೀಯೊ ಮಾಡು. ನೀನು ಕೇಳಿದ್ದು ಕೊಟ್ಟೇನು' ಎಂದರು. 'ಆಗ್ಲಿ ಬುದ್ಧಿ. ಅಂಥಾದ್ದೇನಾದರೂ ಕಂಡುಹಿಡಿಯದೆ ಹೋದರೆ ಮತ್ತೆ ನಿಮಗೆ ಸೋಲುಮೊಕ ತೋರಲಿಕ್ಕಿಲ್ಲ' ಎಂದು ಶಪಥ ಮಾಡಿಕೊಂಡು ಬಂದೆ.

'ಆ ಹೊತ್ತಿನಿಂದ ನನ್ನ ಬುದ್ಧಿಗೆ ಇದೇ ಹುಚ್ಚಾಗಿ ಹೋಯಿತು. ಈ ಜೀವಕ್ಕೆ ಊಟ, ತಿಂಡಿ, ನಿದ್ದೆ, ನೀರಡಿಕೆ ಯಾವುದೂ ಬೇಕಾಗಲಿಲ್ಲ. ಅವತ್ತಿನವರಿಗೆ ನಾನು ರಥವನ್ನೇ ಸರಿಯಾಗಿ ನೋಡಿರಲಿಲ್ಲ. ಎಲ್ಲೋ ಒಂದೆರಡು ಸಲ ರಥದಲ್ಲಿ ಕುಳಿತದ್ದೇ ವಿನಾ, ಅದರ ವಿಚಾರ ಏನೂ ನನಗೆ ತಿಳಿದಿರಲಿಲ್ಲ. ಹಂಗಾಗಿ, ನನ್ನ ವಿಷಯ ನೀರೇ ನೋಡದೋನು ಈಜು ಕಲಿಯುವುದಕ್ಕೆ ಹೋದ ಹಾಗಿತ್ತು. ಹಟ ಅಂತೂ ತೊಟ್ಟದ್ದಾಗಿತ್ತು. ಇನ್ನೇನು ಮಾಡೋದು-ಓನಾಮದಿಂದ ಆ ವಿದ್ಯೆ ಕಲಿಯೋಕೆ ಆರಂಭಿಸಿದೆ. ರಥ ಕೆಲಸಮಾಡೊ ಬಡಗಿಗಳು, ಕಮ್ಮಾರರ ಹತ್ತಿರ ಹೋಗಿ, ಅವರು ರಥಕ್ಕೆ ಗಾಲಿ ಹೇಗೆ ಜೋಡಿಸುತ್ತಾರೆ, ಅದು ತಿರುಗುವಂತೆ ಕೀಲು ಹೇಗೆ ಕೂಡಿಸುತ್ತಾರೆ ಎನ್ನುವುದನ್ನೆಲ್ಲಾ ನೋಡಿಕೊಂಡೆ. ಅವರು ರಥ ಮಾಡುವಾಗ ಅಲ್ಲೇ ಕುಳಿತು ನೋಡುತ್ತಾ ಇದ್ದೆ. ನಾನು ಹಾಗೆ ಮಾಡುವುದು ಅವರಿಗೆಲ್ಲಾ ಹಾಸ್ಯಕ್ಕೆ ಕಾರಣವಾಯಿತು. 'ಏನು ಆಚಾರಿ, ಚಿನ್ನದ ಕೆಲಸ ಬಿಟ್ಟು, ರಥದ ಕೆಲಸ ಕಲಿಯೋಕೆ ಬಂದೆಯಾ?' ಎಂದು ಕೇಳಿ ನಗುತ್ತಿದ್ದರು. ನಾನು ಅವರಿಗೆ ರಥದ ಕೆಲಸ ತಿಳಿದುಕೊಳ್ಳುತ್ತಿರುವುದಕ್ಕೆ ಕಾರಣ ಹೇಳಿದಾಗ, ನನ್ನ ಮಾತು ಕೇಳಿ ಬಿದ್ದು ಬಿದ್ದು ನಕ್ಕರು. ಒಬ್ಬೊಬ್ಬರು ಒಂದೊಂದು ರೀತಿ ಮಾತನಾಡಿನವರು. ಒಬ್ಬರು 'ಆಚಾರಿ, ನಿಮ್ಮ ಹೆಗ್ಗಡೆಯವರಿಗೆ ಹೇಳಿ, 'ಅದು ಬಹಳ ವೆಚ್ಚದ ಕೆಲಸ. ಆಗೋದಿಲ್ಲ, ಹೋಗೋದಿಲ್ಲ. ಅದು ಬೇಡ. ತಗ್ಗು ದಿಣ್ಣೆ ಇರದ ಹಾಗೆ ಮೆತ್ತಗಿರುವ ಬೂರುಗದ ಹತ್ತಿ ಹರಡಿಸಿಬಿಟ್ಟರೂ ಸಾಕು-ನಿಮ್ಮ ಹೆಗ್ಗಡೆಯವರಿಗೆ ಏನೂ ಆಯಾಸವಿಲ್ಲ. ಬೂರುಗದ ಹತ್ತಿಗೇನು ಬರ-ಕಾಡು ಶೋಧಿಸಿದರೆ ಬೇಕಾದಷ್ಟು

ಸಿಗುತ್ತದೆ' ಎಂದರು. ಹೀಗೇ ಒಬ್ಬೊಬ್ಬರೂ, ನನ್ನ ಪ್ರಯತ್ನವನ್ನು ಆಡಿಕೊಂಡು ನಕ್ಕರೇ ವಿನಾ ಹೀಗಲ್ಲ ಹೀಗೆ ಮಾಡಬಹುದು ಎಂದು ಹೇಳುವ ಪುಣ್ಯಾತ್ಮರೊಬ್ಬರೂ ಕಾಣಲಿಲ್ಲ.'

'ಒಬ್ಬೊಬ್ಬರೇನೋ 'ರಥದ ಭಾರ ಹೆಚ್ಚಾಗಿದ್ದರೆ ಕುಲುಕಾಟ ಅಷ್ಟು ಕಾಣುವುದಿಲ್ಲ' ಎಂದು ಹೇಳಿದರೂ ಆ ಅನುಭವದ ಮಾತಿನಿಂದ ನನಗೇನೂ ಉಪಯೋಗ ಕಾಣಲಿಲ್ಲ ಸಾಮಾನು ಹೊರುವ ಬಂಡಿಯಾದರೆ ಭಾರವಾಗಿರುತ್ತೆ. ಜನ, ಒಬ್ಬೊಬ್ಬರೇ ಕುಳಿತು ಹೋಗುವ ರಥ ಭಾರವಾಗುವುದು ಹೇಗೆ ಸಾಧ್ಯ? ಭಾರವಾಗಿರಬೇಕು ಎಂದು ಕಬ್ಬಿಣದಲ್ಲಿ ರಥಮಾಡಿದರೆ, ಅದನ್ನು ಎಳೆಯುವ ಕುದುರೆಗಳನ್ನು ಎಲ್ಲಿಂದ ತರುವುದು? ಇದೆಲ್ಲಾ ಯೋಚನೆ ಮಾಡಿ, ಆ ಮಾತನ್ನು ಕೈ ಬಿಟ್ಟೆ.'

'ಆದರೂ ಆ ಯೋಚನೆ ನನಗೆ ತಪ್ಪಲಿಲ್ಲ. ತಾಮ್ರದಲ್ಲಿ ನಿಜವಾದ ರಥದಂತೆಯೇ ಅಚ್ಚ ಕೀಲುಗಳುಳ್ಳ ಒಂದು ರಥವನ್ನು ಮಾಡಿಕೊಂಡು ಮನೆಯ ಅಂಗಳದಲ್ಲೇ ಅದನ್ನು ಎಳೆಯುತ್ತಾ, ಏರಿಳಿವಿನ ಮೇಲೆ ಓಟದ ಪರಿಣಾಮ, ಅದರ ಒಂದೊಂದು ಭಾಗದ ಮೇಲೂ ಹೇಗಾಗುವುದೆಂದು ಲೆಕ್ಕ ಹಾಕತೊಡಗಿದೆ. ನನ್ನ ಯೋಚನೆಯಲ್ಲಿ ನನಗೆ ಯಾರೂ, ಯಾವ ವಿಧದಲ್ಲಿಯೂ ನೆರವಾಗದೆ ಹೋದರೂ, ನನ್ನ ಗೀಳನ್ನು ಅಣಕಿಸುವವರಿಗೇನೂ ಕಡನಮೆಯಿರಲಿಲ್ಲ. ಕಡೆಗೆ 'ರಥವೈದ್ಯ' ಎಂದು ನಾಮಕರಣವನ್ನು ಮಾಡಿದರು.'

'ಅವರಿವರು ಅನ್ನುವುದೇನು, ಹೆಗ್ಗಡೆಯವರೇ 'ಇದೆಲ್ಲಿಯ ಹುಚ್ಚು ಹಚ್ಚಿಸಿಕೊಂಡೆ ಬಿಡು, ಗೌರಾಚಾರಿ' ಎಂದರು. ಆದಕೆ ನಾನು ಯಾರ ಬುದ್ಧಿವಾದಕ್ಕೂ, ಅಣಕಕ್ಕೂ ಜಗ್ಗುವ ಸ್ಥಿತಿಯಲ್ಲಿರಲಿಲ್ಲ.'

'ಒಂದು ದಿನ ಹೀಗೇ ಯೋಚಿಸುತ್ತಾ ಊರಮುಂದಿನ ತಾವರೆಕೆರೆಯ ಬಳಿಯ ತೋಪಿನಲ್ಲಿ ಕುಳಿತಿರುವಾಗ ಎಳನೀರು ಕದಿಯಲು ತೆಂಗಿನ ಮರವನ್ನು ಹತ್ತಿದ

ವಾನರವೊಂದನ್ನು ನೋಡಿದೆ. ಅದು ಕೈಯಿಂದ ಗರಿಯನ್ನು ಹಿಡಿದು, ಮತ್ತೊಂದು ಕೈಯಿಂದ ಕಾಯನ್ನು ಬಗೆಯುತ್ತಿತ್ತು. ಆದನ್ನು ನೋಡಿದಾಗ, ಆಕಸ್ಮಿಕವಾಗಿ ಕೈ ಜಾರಿ ಕೆಳಗೆ ಬಿದ್ದರೆ ಏನು ಗತಿ ಎಂದು ಯೋಚನೆಯಾಯಿತು. ಅದನ್ನೇ ನೋಡುತ್ತಾ ಕುಳಿತೆ- ಸ್ವಲ್ಪ ಹೊತ್ತಿಗೆ ಎಳನೀರಿನ ಕಾಯನ್ನು ತಿಂದ ಕಪಿ, ಆ ಎತ್ತರದಿಂದ ಕೆಳಗೆ ಧುಮುಕಿತು. ಅದರ ಕಾಲು ಮುರಿಯುವುದು ಖಂಡಿತ ಎಂದುಕೊಂಡೆ ನಾನು. ಆದರೆ ಕಪಿಗೆ ಮಾತ್ರ ಏನೂ ಆಗಲಿಲ್ಲ. ಧುಮುಕಿದ ನೋವೇ ಇಲ್ಲದಂತೆ ಮತ್ತೊಂದು ಮರಕ್ಕೆ ಹಾರಿಹೋಯಿತು. ನಮಗೆ ದಾರಿಯಲ್ಲಿ ನಡೆಯುವಾಗ ಜಾರಿದರೂ ಕಾಲು ಮುರಿಯುತ್ತದೆ. ಹಾಗಿರುವಾಗ ಭೇರುಂಡ ಸ್ತಂಭದ ಮಾನದಲ್ಲಿ ಎರಡು ಮೂರು ಕಂಭ ಉದ್ದವಿದ್ದ ತೆಂಗಿನ ಮರದಿಂದ ಧುಮುಕಿದರೂ ಅದರ ಕಾಲೇಕೆ ಮುರಿಯಲಿಲ್ಲ ಎಂಬ ವಿಚಾರಕ್ಕೆ ಬಿದ್ದೆ. ಅಂದಿನಿಂದ ಅದರ ಸತ್ಯವನ್ನು ಪರೀಕ್ಷಿಸಲು ಪ್ರತಿದಿನವೂ ಕಪಿಗಳು ಮೇಲಿನಿಂದ ಧುಮುಕುವುದನ್ನು ಕಣ್ಣಿನಲ್ಲಿ ಕಣ್ಣಿಟ್ಟು ನೋಡತೊಡಗಿದೆ. ಹಾಗೆ ನಾಲ್ಕಾರು ದಿನ ನೋಡಿದ ಬಳಿಕ ಒಂದು ದಿನ ಕಪಿಯ ಯುಕ್ತಿ ಅರಿವಾಯಿತು. ಕಪಿ ಎತ್ತರದಿಂದ ಧುಮುಕಿದಾದ ಅದು ನಮ್ಮಂತೆ ಕಾಲನ್ನು ನೆಲಕ್ಕೆ ಊರಲು ಯತ್ನಿಸುವುದಿಲ್ಲ. ಹಾಗಾಗಿದ್ದರೆ ಅದರ ಕಾಲು ನಮ್ಮ ಕಾಲಿನಂತೆಯೇ ಮುರಿಯುತ್ತಿತ್ತು. ಅದು ನೆಲಕ್ಕೆ ಧುಮುಕಿದಾಗ ನೆಲಕ್ಕೆ ಬಿದ್ದ ಚೆಂಡಿನಂತೆ ಮತ್ತೆ ಪುಟಿ ಏಳುವುದರಿಂದ ಅದು ಅಪಾಯವನ್ನು ತಪ್ಪಿಸಿಕೊಳ್ಳುತ್ತದೆ. ಅದನ್ನು ನೋಡಿದ ಬಳಿಕ ನನಗೆ ರಥಚಕ್ರ ಇಳುವಿಗೆ ಬೀಳುವಾಗ, ಕಲ್ಲಿನಮೇಲೆ ಕುಪ್ಪಳಿಸುವಾಗ ಹೀಗೆ ಅದು ಪುಟವೆದ್ದು ಮತ್ತೆ ನೆಲದ ಮೇಲೆ ಓಡುವಂತಾದರೆ, ಆ ಕುಲುಕಾಟದ ಪೆಟ್ಟು ರಥದಲ್ಲಿ ಕುಳಿತವರಿಗೆ ತಗಲದೆ ಹೋಗಬಹುದು ಎನಿಸಿತು. ಆ ಅನಿಸಿಕೆ ನನ್ನ ಮನದಲ್ಲಿ ಮೂಡಿದ ಗಳಿಗೆಯಲ್ಲಿ ನೀವು ನನ್ನನ್ನು ನೋಡಬೇಕಾಗಿತ್ತು. ಏನೋ ದೊಡ್ಡ ನಿಧಿ ಸಿಕ್ಕಷ್ಟು ಹರ್ಷವಾಯಿತು.'

'ತೋಪಿನಿಂದ ಮನೆಗೆ ಹಿಂತಿರುಗಿದವನೇ, ಅಂಥ ಉಪಕರಣವೊಂದನ್ನು ರಚಿಸುವ ಯೋಚನೆಗೆ ಆರಂಭಿಸಿದೆ. ಎಷ್ಟೋ ದಿನ ಯೋಚಿಸಿದ ಬಳಿಕ, ಏನೇನೋ ನೂರೆಂಟು ಪ್ರಯತ್ನ ಮಾಡಿದ ಬಳಿಕ, ಸೇನೆಯಲ್ಲಿ ಬಳಸುವ ಬಿಲ್ಲು ನನಗೆ ದಾರಿ

ತೋರಿಸಿತು. ಬಿಲ್ಲಿನ ಬೆನ್ನನ್ನು ಬಾಗಿಸಿರುವುದು, ಸೆಳೆದು ಬಿಟ್ಟ ನಾಡಿಯ ಆಘಾತ, ಬಾಣಗಾರನ ಕೈಗೆ ತಾಗದಿರಲಿ ಎಂದಲ್ಲವೇ? ಅಂದರೆ ಒಂದು ಹದಕ್ಕೆ ಬಾಗಿಸಿದ ಲೋಹದ ಪಟ್ಟಿಗೆ, ಹೀಗೆ ಆಘಾತವನ್ನು ತಡೆಯುವ ಶಕ್ತಿಯಿದೆ ಎಂದಾಯಿತು. ಹಾಗಾದರೆ, ರಥ ಚಕ್ರ ಕುಪ್ಪಳಿಸಿದಾಗ, ಅದರ ಪೆಟ್ಟನ್ನು ತಡೆಯಲು, ಚಕ್ರದ ಅಚ್ಚಿಗೂ, ರಥದ ಆಸನ ಭಾಗದ ಅಡಿಗೂ ಮಧ್ಯೆ ಅಂಥ ಲೋಹದ ಬಿಲ್ಲನ್ನು ನಿಲ್ಲಿಸಿದರೆ, ಅದರಿಂದ ಕುಳಿತವರ ಮೈಗೆ ಆ ಆಘಾತ ಅಷ್ಟಾಗದಂತೆ ತದಡೆಯಬಹುದೆಂದು ತೋಚಿತು. ಆ ಯೋಚನೆಯ ಪರಿಣಾಮವಾಗಿ ಇದನ್ನು ಸಿದ್ಧಗೊಳಿಸಿದೆ.'

—ಎಂದು ಹೇಳಿ, ಗೌರಾಚಾರಿ, ಬಟ್ಟೆಯ ಗಂಟನಲ್ಲಿದ್ದ, ಬಿಲ್ಲಿನಂತೆ ಬಾಗಿದ ಲೋಹಪಟ್ಟಿಕೆಯ ಮಾದರಿಯನ್ನು ತೋರಿಸಿದ. ತನ್ನ ಕೈಯಲ್ಲಿದ್ದ ರಥದಿಂದ, ಅದನ್ನು ರಥಕ್ಕೆ ಹೊಂದಿಸುವ ರೀತಿಯನ್ನೂ ತೋರಿಸಿದ.

ಅದುವರೆಗೂ ಗೌರಾಚಾರಿ ಹೇಳಿದ ದೀರ್ಘವಾದ ಕಥೆಯನ್ನು ನಡುವೆ ಒಂದು ಮಾತಾಡದೆ ಕೇಳಿದ ಗಂಗರಾಜರು, ಆಗ ರಥಚಕ್ರಗಳನ್ನು ಬಂಧಿಸಿದ ರಜ್ಜು ವಿಶೇಷವನ್ನು ತೋರಿಸಿ, 'ಇದೇನು?' ಎಂದು ಕೇಳಿದರು.

'ಇದು ರಥ ತಗ್ಗು ದಿಣ್ಣೆಗಳ ಮೇಲೆ, ಯಾವ ಬಗೆಯ ಅಪಘಾತಕ್ಕೂ ಅವಕಾಶವಿಲ್ಲದಂತೆ ಚಲಿಸಲು ಮಾಡಿದ ಉಪಾಯ. ಈ ಉಪಾಯದ ಯೋಚನೆ ನನಗೆ ಬಂದದ್ದು, ಒಮ್ಮೆ ಹಾವು ಹರಿಯುವುದನ್ನು ನೋಡಿದಾಗ. ಹಾವು ಎಂಥ ಏರಿಳಿವಿನಲ್ಲಿ ಹರಿಯುವಾಗಲೂ ಅದರ ಮೈಯ ಎಲುಬಿನ ಕೊಂಡಿಗಳು ಆ ಏರಿಳಿತದ ವಕ್ರತೆಗೇ ಹೊಂದಿಕೊಳ್ಳುವ ಅವಕಾಶವಿರುವುದರಿಂದ, ಎಂಥ ಒರಟು ನೆಲದ ಮೇಲಾದರೂ, ಮುಗ್ಗರಿಸದೆ, ಬೀಳದೆ ವೇಗವಾಗಿ ಚಲಿಸುವುದು ಸಾಧ್ಯವಾಗಿದೆ. ರಥ ಚಕ್ರಗಳಿಗೂ ಅಂಥ ಉಪಕರಣವನ್ನು ಜೋಡಿಸಿದರೆ, ಹಾವಿನ ಹಾಗೇ ರಥಗಳೂ ಎಂಥ ನೆಲದ ಮೇಲಾದರೂ ವೇಗವಾಗಿ ಓಡುವುದು ಸಾಧ್ಯವಾಗುವುದು ಎನಿಸಿ, ಇದನ್ನು ಸರ್ಪದ ದೇಹರಚನೆಯಂತೇ ರಚಿಸಿದೆ. ಈ ಸರಪಳಿಯ ಒಂದೊಂದು ಕೊಂಡಿಯೂ

ಪ್ರತ್ಯೇಕವಾಗಿರುವುದರಿಂದ, ಇದನ್ನು ಸೇರಿಸುವ ತಂತಿಯ ಹಗ್ಗ ಹೇಗೆಂದರೆ ಹಾಗೆ ಬಳುಕುವುದರಿಂದ, ಇದು ನೆಲದ ಏರಿಳಿವಿನ ಆಕಾರವನ್ನೇ ಧರಿಸಿ ಚಲಿಸಲು ಅನುಕೂಲವಾಗಿದೆ. ತಳಭಾಗ ನಯವಾಗಿರುವುದರಿಂದ ರಥದ ಓಟಕ್ಕೆ ತಡೆಯಾಗುವುದಿಲ್ಲ. ಈ ಸರಪಳಿಯನ್ನು ಹಿಡಿಯಲೆಂದೇ ಚಕ್ರಗಳ ಮೇಲೆ ಹಲ್ಲುಗಳನ್ನು ಮಾಡಿರುವುದು. ಮುಂಭಾಗದ ಚಕ್ರಗಳನ್ನು ದೊಡ್ಡದು ಮಾಡಿ, ಹಿಂಭಾಗವನ್ನು ಕಿರಿದಾಗಿ ಮಾಡಿರುವುದೂ ಸುಲಭ ಚಲನೆಯ ಉದ್ದೇಶದಿಂದಲೇ. ಹಾವನ್ನು ನೋಡಿ ನಾನಿದನ್ನು ಮಾಡುವುದನ್ನು ಕಲಿತದ್ದರಿಂದಲೇ ಇದಕ್ಕೆ 'ಸರ್ಪರಜ್ಜು' ಎಂದು ಹೆಸರಿಟ್ಟಿದ್ದೇನೆ'

—ಎಂದು ಆ ಉಪಕರಣದ ರಚನಾನಿಧಾನ, ಉಪಯೋಗಗಳನ್ನು ವಿವರಿಸಿದ ಗೌರಾಚಾರಿ.

ಅದನ್ನು ವಿವರಿಸಿದ್ದೇ ಅಲ್ಲದೆ, ಆ ಮಾದರಿಗಳನ್ನು ನೆಲದ ಮೇಲೆ ನಡೆಸಿ, ಕಿವಿ ಕೇಳಿದ ಮಾತು ಕಣ್ಣಿಗೂ ನಂಬಿಕೆಯಾಗುವಂತೆ ತೋರಿಸಿದ.

ಗೌರಾಚಾರಿ ರಚಿಸಿದ ವಿಶೇಷ ಉಪಕರಣಗಳಿಂದಳವಟ್ಟ ರಥಗಳಿಂದ ತಮ್ಮ ದಂಡಯಾತ್ರೆಯ ಕಾರ್ಯಕ್ಕೆ ಎಷ್ಟು ಅನುಕೂಲವಾಗುವುದೆಂದು ಮನವರಿಕೆಯಾದ ಗಂಗರಾಜರಿಗೆ ಹಿಡಿಸಲಾಗದಷ್ಟು ಸಂತೋಷವಾಯಿತು. ಆ ಸಂತೋಷದಲ್ಲಿ ಗೌರಾಚಾರಿಯ ಧೂಳು ತುಂಬಿದ ಮೈ ಹೊಲಸು ಬಟ್ಟೆ ಎಲ್ಲಾ ಮರೆತು ಹೋಗಿ, ಆತನನ್ನು ಬಿಗಿದು ಆಲಂಗಿಸಿ-

'ನಮ್ಮ ಪಾಲಿಗೆ ನಿಮ್ಮ ಪ್ರತಿಭೆ ಕಾಮಧೇನುವಾಯಿತು. ಇದಕ್ಕೆ ನಿಮಗೇನು ಮೆಚ್ಚಬೇಕು-ಕೇಳಿ. ಏನು ಬೇಡಿದರೂ ಅದು ನಿಮ್ಮದು.'

—ಎಂದರು.

ಗಂಗರಾಜರ ಉತ್ಸಾಹ, ಮೆಚ್ಚುಗೆಯನ್ನು ಕಂಡು ಗೌರಾಚಾರಿಯ ಕಣ್ಣಿನಲ್ಲೂ ನೀರು ಹರಿಯಿತು. ಕಣ್ಣನ್ನು ಒರಸಿಕೊಂಡು ಹೇಳಿದ.

'ನಾನು ಮಾಡಿದುದನ್ನು ಮೆಚ್ಚುವ ಒಬ್ಬರನ್ನಾದರೂ ಕಂಡುದು ನನ್ನ ಭಾಗ್ಯ, ಆ ಮೆಚ್ಚುಗೆಯೇ ನನಗೆ ನೂರು ಗ್ರಾಮದ ಉಡುಗೊರೆ- ನಿಮ್ಮ ಅಭಿಮಾನವೊಂದು ಶಾಶ್ವತವಾಗಿರಲಿ. ಆದರೂ- ನನಗೆ ಮೆಚ್ಚಿಗೆಕೊಡುವ ಮನಸ್ಸಿದ್ದರೆ, ಈ ಉಪಕರಣಗಳನ್ನು ನಿಮ್ಮ ರಥಗಳಿಗೆ ಅಳವಡಿಸಿ, ಮಾದರಿಯಲ್ಲಿ ಸರಿಹೋದುದು ವ್ಯಾವಹಾರಿಕವಾಗಿಯೂ ಸತ್ಯ ಎಂದು ಮನವರಿಕೆ ಮಾಡಿಕೊಳ್ಳಲು ಅವಕಾಶ ಕಲ್ಪಿಸಿಕೊಡಿ, ಅಷ್ಟು ಸಾಕು.'

'ಅಂದರೆ-ಇದನ್ನು ಯಾವ ರಥಕ್ಕೂ ಇನ್ನೂ ಆಳವಡಿಸಿ ಪರೀಕ್ಷಿಸೀಯೇ ಇಲ್ಲವೇ?'

'ಊಹೂ. ಅದಕ್ಕೆ ಅವಕಾಶವೆಲ್ಲಿಯದು? ನಮ್ಮ ಊರಿನ ಜನಕ್ಕೆ ನನ್ನನ್ನು ನೋಡಿ ನಗುವುದಕ್ಕೇ ಹೊತ್ತು ಸಾಲಲಿಲ್ಲ. ಇನ್ನು ಪರೀಕೆಗೆಲ್ಲಿ ವ್ಯವಧಾನ ತಂದಾರು? ಹೆಗ್ಗಡೆಯವರಿಗೊಬ್ಬರಿಗೆ ನನ್ನ ಮಾತು ನಂಬಿಕೆಯಾಯಿತು. ಅದಕ್ಕೇ 'ಇಲ್ಲಿ ಈ ವಿಷಯ ಯಾರೊಂದಿಗೂ ಹೇಳಹೋಗಬೇಡ. ನನ್ನ ಅಳಿಯಂದಿರು ಯುದ್ಧ ಸಿದ್ಧತೆಯಲ್ಲಿದ್ದಾರೆ. ಮೊದಲು ಅಲ್ಲಿಗೆ ಹೋಗಿ ತೋರಿಸು. ನಿನ್ನ ಪ್ರತಿಭೆಯಿಂದ ಅವರಿಗೆ ಉಪಕಾರವಾಗಲಿ' ಎಂದು ಇಲ್ಲಿಗೆ ಕಳಿಸಿದರು. 'ಅಯ್ಯ ನಿಮ್ಮ ರಥಕ್ಕಾದರೂ ಇದನ್ನು ಜೋಡಿಸುತ್ತೇನೆ' ಎಂದುದಕ್ಕೆ 'ಇಲ್ಲಿನವರು ಯಾರ ಕಣ್ಣಿಗೂ ಇದು ಬೀಳುವುದು ಬೇಡ' ಎಂದು ಕಟ್ಟುಮಾಡಿ, ಯಾರಿಗೂ ನಾನು ಈ ಮಾದರಿಯನ್ನು ತೋರಿಸುವುದಕ್ಕೆ ಬಿಡದೆ, ಇಲ್ಲಿಗೆ ಅಟ್ಟಿದರು. 'ಗೌರಾಚಾರಿ ನಿನ್ನನ್ನು ನಾನು ಮಗ ಎಂದೇ ತಿಳಿದುಕೊಂಡಿದ್ದೇನೆ. ಆ ಭಾವನೆಯಿಂದಲೇ ನಿನ್ನನ್ನು ನಾನು ನನ್ನ ಅಳಿಯಂದಿರಿಗೆ ಬಳುವಳಿ ಎಂದು ಕಳಿಸಿಕೊಡುತ್ತೇನೆ. ಅಳಿಯಂದಿರಿಗೂ ನಿನ್ನ ವಿಷಯ ತಿಳಿಸುತ್ತೇನೆ. ಇನ್ನು ಮೇಲೆ

ದ್ವಾರಸಮುದ್ರವೇ ನಿನಗೆ ಊರು, ಅವರ ಆಸ್ಥಾನವೇ ಮನೆ. ನಿನ್ನ ಸೇವೆ ಅವರಿಗೆ ಮೀಸಲು' ಎಂದು ಹೆಗ್ಗಡೆಯವರು ನನಗೆ ಅಪ್ಪಣೆ ಮಾಡಿದಾರೆ.'

ಗೌರಾಚಾರಿ ಹೇಳಿದುದನ್ನು ಕೇಳಿ ಗಂಗರಾಜರಿಗೆ, ಹೆಗ್ಗಡೆ ಮಾರಸಿಂಗಮಯ್ಯನವರು, ಅತನಿಗೆ ಆ ರೀತಿ ಕಟ್ಟುಮಾಡಿ ಕಳಿಸಿದುದರ ಕಾರಣವನ್ನು ಅರಿತುಕೊಂಡರು. ಹೊಯ್ಸಳರ ಶತ್ರುಗಳಾರಿಗೂ ಗೌರಾಚಾರಿಯ ಯುದ್ಧೋಪಯೋಗೀ ಸಂಶೋಧನೆಗಳ ಲಾಭ ಸಿಗಬಾರದೆಂದು ಮಾರಸಿಂಗಮಯ್ಯನವರು ಮಾಡಿದ ಉಪಾಯ, ಅವರ ಅಭಿಮಾನ ಮನವರಿಕೆಯಾಗಿ, ಅವರನ್ನು 'ಭಲೆ' ಎಂದು ಮನಸ್ಸಿನಲ್ಲಿಯೇ ಹೊಗಳಿದರು.

'ಹೆಗ್ಗಡೆಯವರು ಹೇಳಿದುದು ಸರಿ. ಆಚಾರ್ಯರೇ, ನೀವಿನ್ನು ದ್ವಾರಸಮದ್ರದಲ್ಲೇ ಇರಿ. ಪ್ರಭುಗಳ ಆಸ್ಥಾನ ನಿಮ್ಮಂಥ ಪ್ರತಿಭಾಶಾಲಿಗಳಿಗೆ ತವರು ಮನೆ, ಇಲ್ಲಿ-ನಿಮ್ಮ ಕೆಲಸಕ್ಕೆ ಏನೇನು ಸಾಮಾನು ಸರಂಜಾಮು ಬೇಕೋ, ಏನು ಉಪಕರಣಗಳ ಅಗತ್ಯವೋ, ಎಷ್ಟು ಜನ-ಧನ ಸಹಾಯ ಬೇಕೋ ಹೇಳಿ, ಯಾವುದಕ್ಕೂ ಕೊರತೆಯಿಲ್ಲದಂತೆ ಒದಗಿಸಿ ಕೊಡುತ್ತೇವೆ. ಈ ದಿನವೇ ಅದಕ್ಕೆ ಬೇಕಾದ ಅಪ್ಪಣೆ ಕೊಡುತ್ತೇವೆ. ನೀವು ನಿಶ್ಚಿಂತರಾಗಿ ಕಾರ್ಯನಿರತರಾಗಿ.'

'ಇದೆಲ್ಲಾ ಆಯಿತು, ಆಚಾರ್ಯರೆ. ಆದರೇ ಪ್ರಧಾನರಿಗೆ, ದೂರದಲ್ಲಿದುದ್ದನ್ನು ಹತ್ತಿರದಲ್ಲಿರುವಂತೆ ತೋರಿಸುವ ಆ ಕೊಳವಿಯನ್ನು ತೋರಿಸಲೇ ಇಲ್ಲವಲ್ಲ'

—ಎಂದ ಅದುವರೆಗೂ ಸುಮ್ಮನಿದ್ದ ಬೋಕಿಮಯ್ಯ.

'ನಿಜ, ನಿಜ. ನನಗೂ ಅದು ಮರೆತು ಹೋಗಿತ್ತು'

—ಎಂದು ಗಂಗರಾಜರೂ ಜ್ಞಾಪಿಸಿಕೊಂಡು ಕೇಳಿದರು.

'ಅದನ್ನು ನೀವು ಮರೆತಿದ್ದೇ ಮೇಲಾಯಿತು.'

—ಎಂದ ಗೌರಾಚಾರಿ.

'ಏಕೆ?'

'ಇಲ್ಲವಾದರೆ, ನೀವೂ ಬನವಾಸಿಯ ಜನದ ಹಾಗೆ 'ಇವನು ಯಾವುದೋ ಭೂತ ವಶಪಡಿಸಿಕೊಂಡಿದಾನೆ-' ಎಂದು ಹೇಳಿ, ಶೂಲಕ್ಕೇರಿಸಲು ಅಪ್ಪಣೆಮಾಡುತ್ತಿದ್ದಿರಿ.'

'ಛೆ. ಛೆ. ನನ್ನಿಂದ ಎಂದೂ ಅಂಥ ಅಕೃತ್ಯವಾಗದು. ಅದೇನು ತೋರಿಸಿ.'

'ನೋಡಿ ಸ್ವಾಮಿ. ನಿಮ್ಮ ಈ ಮಿತ್ರರು ಹೇಳಿದ ಹಾಗೆ ಇದು ಕಣ್ಣುಕಟ್ಟೂ ಅಲ್ಲ, ಮಾಟವೂ ಅಲ್ಲ. ಇಂದ್ರಜಾಲ ಮಹೇಂದ್ರಜಾಲ ಎಳ್ಳಷ್ಟೂ ಇದರಲಿಲ್ಲ. ನಮ್ಮ ತಾತ ಸೋಮೇಶ್ವರಾಚಾರಿ, ಯಾವುದೋ ಹಳೆಯ ಕಾಲದ ಓಲೇಗರಿಯ ಗ್ರಂಥದಲ್ಲಿ 'ಗರ್ಭ, ರೇಖೆ, ಮಚ್ಚೆ ಯಾವುದೂ ಇಲ್ಲದ ಸ್ಫಟಿಕ ಶಿಲೆಯನ್ನು ತೆಳುವಾದ ಹಲಗೆಯತಾಗಿ ಕತ್ತರಿಸಿದರೆ, ಅದಕ್ಕೆ ದೂರದರ್ಶಕ ಗುಣ ಬರುತ್ತದೆ' ಎಂದು ಬರೆದಿದ್ದುದನ್ನು ಓದಿದ್ದರಂತೆ. ಯಾವುದಾದರೂ ಹೊಸದನ್ನು ಹುಡುಗಬೇಕು ಎನ್ನುವ ನನ್ನ ಹುಚ್ಚನ್ನು ತಿಳಿದುಕೊಂಡ ಅವರು 'ಗೌರಾ, ಆಂಥ ಸ್ಫಟಿಕ ಕನ್ನಡಿ ಮಾಡಿಕೊಂಡರೆ, ಅದರ ಮೂಲಕ ನೋಡಿದಾಗ ಆಕಾಶದಲ್ಲಿರೋ ದೇವದೇವತೆಗಳೆಲ್ಲಾ ಕಾಣಿಸ್ತಾರಂತೆ. ಅದನ್ನು ಸಾಧಿಸಿದವನಿಗೆ ಅಂಥ ದಿವ್ಯಚಕ್ಷುಸ್ಸು ಬರುತ್ತದಂತೆ. ಸುಮ್ಮನೆ ಅದೂ ಇದೂ ಹುಡುಕಿಕೊಂಡು ಜೀವನ ಯಾಕೆ ಹಾಳು ಮಾಡಿಕೋತೀಯಾ? ಇಂಥ ವಿದ್ಯೆನಾದರೂ ಬಂದರೆ, ಸ್ವಾಮಿಪಾದಾನ ನೋಡಿ, ಬದುಕು ಸಾರ್ಥಕ ಮಾಡಿಕೋ ಬಹುದು' ಅಂತ ಹೇಳ್ತಾ ಇದ್ದ. ನನಗೂ 'ಅದು ಯಾಕೆ ಆಗಬಾರದು?' ಅನ್ನಿಸಿತು. 'ಏನು ಮಾಡಿದರೆ ಆ ವಿದ್ಯೆ ಬರುತ್ತೆ?' ಅಂತ ಕೇಳಿದೆ. 'ಸೂರ್ಯನಾರಾಯಣನ ಆರಾಧನೆ ಮಾಡು. ಆತ ಆಕಾಶಕ್ಕೆ ಸ್ವಾಮಿ, ಆತನ ಅನುಗ್ರಹವಾದರೆ, ಈ ವಿದ್ಯೆ ಹಸ್ತಗತವಾಗುತ್ತೆ' ಅಂತ ಹೇಳಿದ ನಮ್ಮ ತಾತ. 'ಆಯಿತು.' ಅಂದು ಆ ಪೂಜೆ ಪುನಸ್ಕಾರ ಮಾಡಿ, 'ಆಕಾಶದರ್ಶಿ' ವಿದ್ಯೆ

ಹುಡುಕಿಕೊಂಡು ಹೊರಟೆ. ಪೂಜೆ, ಪುನಸ್ಕಾರ ಮಾಡೋದು ನನ್ನ ಕೈಲಾದದ್ದು. ಆದರೆ ಸ್ಫಟಿಕ ಶಿಲೆ ಎಲ್ಲಿಂದ ತರೋದು ಅನ್ತಾ ಯೋಚನೆ ಮಾಡ್ತಾ ಇರೋವಾಗ, 'ಕೇದಾರೇಶ್ವರ ಮಠದ ಸ್ವಾಮಿಗಳು ನಮ್ಮ ಅಪ್ಪಯ್ಯನಿಗೆ, ಶಿವಲಿಂಗವನ್ನು ಮಾಡುವುದಕ್ಕೆಂದು ಒಂದು ದೊಡ್ಡ ಸ್ಫಟಿಕವನ್ನು ಕಳಿಸಿಕೊಟ್ಟರು. ಅಷ್ಟು ದೊಡ್ಡ ಸ್ಫಟಿಕವನ್ನೇ ನಾನು ನೋಡಿರಲಿಲ್ಲ. ಅದು ನನ್ನದಾದರೆ, ಅನುಕೂಲ ಎನ್ನಿಸಿತು. ಆ ಗಳಿಗೆಯಲ್ಲಿ, ನ್ಯಾಯ-ಅನ್ಯಾಯ, ಪಾಪ-ಪುಣ್ಯ ಎಲ್ಲಾ ಮರೆತು ಹೋಗಿ, 'ದೇವರೇ, ನನ್ನ ತಪ್ಪು ಕ್ಷಮಿಸು ಎಂದು ಬೇಡಿ, ಆ ಸ್ಫಟಿಕ ಶಿಲೆಯನ್ನು ಕದ್ದುಕೊಂಡು, ಊರು ಬಿಟ್ಟೆ. ನನ್ನ ಹೆಸರು, ದೆಸೆ ತಿಳಿಯದ ಊರಿಗೆ ಹೋಗಿ, ಅಲ್ಲಿ ಆರು ಮಾಸ ಕಷ್ಟಪಟ್ಟೆ. ದಿನಾ ಬೆಳಿಗ್ಗೆ ಎದ್ದು ತಣ್ಣೀರಿನಲ್ಲಿ ಸ್ನಾನಮಾಡಿ, ಸೂರ್ಯಸಹಸ್ರನಾಮ ಹೇಳುತ್ತಾ ಆ ಸ್ಫಟಿಕ ಶಿಲೆಯನ್ನು ತೆಯ್ದೆ. ಅದು ತೆಳುವೇನೋ ಆಯಿತು—ಆದರೆ ನಾನು ಅರಿತುಕೊಂಡ ಹಾಗೆ ಹಲಗೆಯಾಗಲಿಲ್ಲ. ಅದು ಎರಡಾಗಿ ಸೀಳಿ ಒಂದರ ಮಧ್ಯದಲ್ಲಿ ಹಳ್ಳ, ಇನ್ನೊಂದರ ಮಧ್ಯದಲ್ಲಿ ಉಬ್ಬು ಉಳಿದುಹೋಯಿತು. 'ಇದೇನು ನನ್ನ ಶ್ರಮ ವ್ಯರ್ಥವಾಯಿತಲ್ಲಾ' ಎಂದುಕೊಂಡಾಗ, ಆ ರಾತ್ರಿ ಸೂರ್ಯನಾರಾಯಣ ಸ್ವಾಮಿ ಕನಸಿನಲ್ಲಿ ಬಂದು 'ನಾನು ನಿನಗೆ ಪ್ರಸನ್ನನಾಗಿದೇನೆ. ನೀನು ಮಾಡಿದುದು ಸರಿ' ಎಂದು ಅಪ್ಪಣೆ ಕೊಡಿಸಿದ ಹಾಗಾಯಿತು.

'ಅದರಿಂದ ನನ್ನ ಮನಸ್ಸಿಗೂ ನೆಮ್ಮದಿಯಾಗಿ, ಮಾರನೆಯದಿನ ಅಂಗೈಯಮೇಲೆ ಆ ಸ್ಫಟಿಕವನ್ನಿಟ್ಟುಕೊಂಡು ನೋಡಿದಾಗ, ಅಂಗೈ ರೇಖೆಗಳು ಬಹು ಸ್ಪಷ್ಟವಾಗಿ, ಇದ್ದುದರ ಹತ್ತರಷ್ಟು ದೊಡ್ಡದಾಗಿ ಕಾಣಿಸಿದವು. ಕಣ್ಣಿಗಿಟ್ಟುಕೊಂಡು ನೋಡಿದೆ. ಮೊದಲು ಏನೂ ಸರಿಯಾಗಿ ಕಾಣಲಿಲ್ಲ; ಮಂಕು ಮಂಕಾಗಿತ್ತು. ಅಷ್ಟು ದೂರ ಎರಡನ್ನೂ ಒಂದರ ಮುಂದೆ ಮತ್ತೊಂದನ್ನು ಹಿಡಿದು ನೋಡಿದಾಗ, ದೂರದಲ್ಲಿದ್ದುದು ಹತ್ತಿರ ಕಾಣಿಸಿತು. ಸರಿ ಎಂದು, ಅಷ್ಟು ಉದ್ದದ ಒಂದು ಬಿದಿರು ಕೊಳವಿಗೆ ಆ ಸ್ಫಟಿಕ ದರ್ಪಣವನಿಟ್ಟು ನೋಡಿದೆ. ಆಗ ಸರಿಹೋಯಿತು.'

'ಗೆದ್ದೆ ಎಂದುಕೊಂಡು, ಇದನ್ನು ಕೇದಾರೇಶ್ವರ ಸ್ವಾಮಿಗೇ ಅರ್ಪಿಸಿ, ಸ್ಫಟಿಕ ಕದ್ದ ಪಾಪ ಕಳೆದುಕೊಳ್ಳೋಣ ಎಂದು ಬಳ್ಳಿಗಾಮೆಗೆ ಬಂದೆ. ಅದರೆ ಊರಿನವರ ಪಾಲಿಗೆ, ಮಠದ ವಸ್ತು ಕದ್ದ ನಾನು ಅಂತ್ಯಜನಿಗಿಂತ ಕಡೆಯಾಗಿದ್ದೆ. ಮಾರಸಿಂಗಮಯ್ಯನವರು ನನ್ನ ರಕ್ಷಣೆಗೆ ಬರದೆ ಹೋಗಿದ್ದರೆ, ನನ್ನನ್ನು ಶೂಲಕ್ಕೆ ಏರಿಸಿಬಿಡುತ್ತಿದ್ದರು. ಎಷ್ಟೋದಿನ ಆದಮೇಲೆ, ಸ್ವಾಮಿಗಳಿಗೆ ಈ 'ಆಕಾಶದರ್ಶಿ' ತೋರಿಸಿದೆ. ಅವರಿದನ್ನು ಕೈಯಲ್ಲಿ ಕೂಡ ಮುಟ್ಟಲಿಲ್ಲ. ನನ್ನ ಬಲವಂತಕ್ಕೆ ಇದನ್ನು ಪರೀಕ್ಷಿಸಿದರೂ, 'ಆಚಾರಿ ಏನೋ ಅಭಿಚಾರ ಮಾಡಿ, ಈ ಕೊಳವಿಯೊಳಗೆ ಎಂಥದೋ ಭೂತಾನ ದಿಗ್ಬಂದನ ಮಾಡಿ ಕೂಡಿಸಿದ್ದಾನೆ. ಇಲ್ಲವಾದರೆ ಅಷ್ಟುದೂರಾ ಇರೋದು, ಹತ್ತಿರ ಇರೋಹಾಗೆ ಕಾಣೋದು ಮನುಷ್ಯನ ಕಣ್ಣಿಗೆ ಸಾಧ್ಯವೇ? ಈ ಆಚಾರಿ, ಅವನ ಭೂತಯಂತ್ರ ಎರಡನ್ನು ಕಾಳಿಕಾದೇವಿಗೆ ಬಲಿ ಕೊಡಬೇಕು' ಎಂದೇ ಆಡಿಕೊಂಡರು. ನಾನು ಜೀವ ಭೀತಿಯಿಂದ ಇದನ್ನು ಅಡಗಿಸಿಟ್ಟುಬಿಟ್ಟೆ'

—ಎಂದು ಗೌರಾಚಾರಿ, ತಾನು ಕಂಡುಹಿಡಿದ 'ಆಕಾಶದರ್ಶಿ' ಯ ಕಥೆ ಹೇಳಿದ.

ಆ ಕಥೆಯನ್ನು ಕೇಳಿದ ಬಳಿಕ ತಮ್ಮ ಕುತೂಹಲವನ್ನು ಅಡಗಿಸಿಕೊಳ್ಳಲಾಗದೆ, ಗಂಗರಾಜರು, ತಮ್ಮ ಮುಂದಿದ್ದ ಆಕಾಶದರ್ಶಿಯನ್ನು ಕೈಗೆ ತೆಗೆದುಕೊಂಡು ನೋಡಿದರು.

ಪಂಚಲೋಹದ ಕೊಳವಿಯ ಸುತ್ತಲೂ ನವಗ್ರಹಗಳ ಚಿತ್ರಗಳನ್ನು ಕೊರೆಯಲ್ಪಟ್ಟಿದ್ದುದಲ್ಲದೆ, ಕೊಳವಿಯ ಎರಡು ಕಡೆಯ ಬಾಯಿಗೂ ಎರಡು ಸ್ಫಟಿಕದರ್ಪಣಗಳು ಜೋಡಿಸಲ್ಪಟ್ಟಿದ್ದವು.

ಅದನ್ನು ಗಂಗರಾಜರು ತಮ್ಮ ಕಣ್ಣಿಗೆ ಇಟ್ಟುಕೊಂಡು ನೋಡಿದರು, ಏನೋ ಎಲ್ಲವೂ ಮಬ್ಬು ಮಸಕಾಗಿ ಕಾಣಿಸಿತು. ಆಗ ಗೌರಾಚಾರಿ—

'ಎಲ್ಲರ ದೃಷ್ಟಿ ಶಕ್ತಿಯೂ ಒಂದೇ ಆಗಿರೋದಿಲ್ಲ. ಅದಕ್ಕೇ ಆ ಎರಡು ಕನ್ನಡೀನ ಎರಡು ಕೊಳವೆಗೆ ಜೋಡಿಸಿ, ಒಂದನ್ನು ಮತ್ತೊಂದರಲ್ಲಿ ಸೇರಿಸಿದೇನೆ. ಆ ಕೊಳವಿಗಳನ್ನು ಹಿಂದೆ ಮುಂದೆ ಸರಿಸಿ ನೋಡಿ, ಸರಿಯಾಗಿ ಕಾಣುತ್ತದೆ'

—ಎಂದು 'ಆಕಾಶದರ್ಶಿ' ಯ ಮೂಲಕ ನೋಡುವ ಕ್ರಮವನ್ನು ವಿವರಿಸಿದ.

ಗೌರಾಚಾರಿಯ ಸಲಹೆಯಂತೆ, ಕೊಳವಿಯ ಉದ್ದವನ್ನು, ಹಿಂದು ಮುಂದು ಮಾಡಿ, ಸರಿಪಡಿಸಿಕೊಂಡು ನೋಡಿದಾಗ, ಗಂಗರಾಜರಿಗೆ ಅರಮನೆಯ ಮಹಾದ್ವಾರದ ಮೇಲಿನ ಗೋಪುರದ ಪಂಚಕಲಶ ಕಂಡವಲ್ಲದೆ, ಆ ಪಂಚಕಲಶಗಳ ಮೇಲೆ, ಶಿಲ್ಪಿ ರೇಖಿಸಿದ ಪದ್ಮದದಳಗಳೂ ಕಾಣಿಸಿ, ಅವರ ಮೈ ಪವಾಡವನ್ನು ಕಂಡಂತೆ ರೋಮಾಂಚವಾಯಿತು.

ಹಾಗೇ ಕೊಳವಿಯನ್ನು ಬೇರೆ ಬೇರೆ ದಿಕ್ಕಿಗೆ ತಿರುಗಿಸಿ, ಸ್ಪಷ್ಟಗಿರಿಯ ಬೆಟ್ಟವನ್ನು ನೋಡಿದರು. ಬೆಟ್ಟದ ಬಂಡೆಗಳು ಹತ್ತಿರ ಕಂಡದ್ದೇ ಅಲ್ಲದೆ, ಆ ಶಿಲೆಗಳ ಮೇಲಿನ ಉಬ್ಬು, ತಗ್ಗು, ಪಾಚಿ, ಪದರ ಎಲ್ಲವೂ ಕಂಡವು.

ಅದನ್ನು ನೋಡಿದ ಸಂತೋಷದಲ್ಲಿ ಅವರಿಗೆ, ಬಯಸಿದ ವಸ್ತು ಸಿಕ್ಕ ಸಣ್ಣ ಮಗುವಿನ ಹಾಗೆ ಕುಪ್ಪಳಿಸಿ ಕುಣಿಯುವಂತಾಯಿತು. ಆ ಆನಂದಾತಿರೇಕದಲ್ಲಿ ಮೈಮರೆತು, ಒಳಗಿದ್ದ ತಮ್ಮ ಮದವಳಿಗೆ ಲಕ್ಷ್ಮೀ ಮತಿಯನ್ನು ಕೂಗಿ—

'ಲಕ್ಷ್ಮೀ... ಲಕ್ಷ್ಮೀ....ಇಲ್ಲಿ ನೋಡು ಬಾ....ಎಂಥ ಅದ್ಭುತ....ಏನು ಆಶ್ಚರ್ಯ....'

—ಎಂದು ಕೂಗಿದರು.

ಅವರ ಕೂಗು ಕೇಳಿದ ಅವರ ಮಡದಿ ಲಕ್ಷ್ಮೀಮತಿ ಮಗನಿಗೆ ಏನಾಯಿತೋ ಎಂದು ಮಾಡುತ್ತಿದ್ದ ಪೂಜೆಯನ್ನೂ ಬಿಟ್ಟು, ಚೌಪಳಿಗೆಗೆ ಓಡಿಬಂದ ಗಂಗರಾಜರ

ತಾಯಿ ಪೋಚಿಕಬ್ಬೆ ಆಳುಕಾಳುಗಳು ಒಬ್ಬೊಬ್ಬರಿಗೂ ಆ ಆಶ್ಚರ್ಯ ವಿಶೇಷವನ್ನು ತೋರಿಸಿದರು.

ಆಕಾಶದರ್ಶಿಯ ಮೂಲಕ ಸಹಸ್ರ ಕೂಟ ಜಿನಾಲಯವನ್ನು ನೋಡಿದ ವೃದ್ಧ ಪೋಚಿಕಬ್ಬೆಗಂತೂ ಬಾಯೇ ಕಟ್ಟಿ ಹೋಯಿತು.

—ಎಂದು ಹೇಳಿದರು

'ಇವತ್ತಿನವರೆಗೂ ಭಗವಂತ ನನ್ನ ಕಣ್ಣು ಉಳಿಸಿದ್ದು ಸಾರ್ಥಕವಾಯಿತು. ಲಕ್ಷ್ಮೀ-ಒಳಗೆ ಹೋಗಿ, ಬೊಕ್ಕಸದಲ್ಲಿರೊ, ಒಂದು ಕೊಳಗ ಮುತ್ತನ್ನು ತಂದು ಈ ಪುಣ್ಯಾತ್ಮರ ಮಡಲಿಗೆ ಹಾಕಿಬಿಡು....ಗಂಗಣ್ಣ.... ನೀನು ಆ ಸೀಮೆ ಗೆದ್ದೆ ಈ ನಾಡು ಗೆದ್ದೆ ಅನ್ತಾ ಇದ್ದೆಯಲ್ಲಾ-ನೋಡಿದೆಯಾ ಆಕಾಶ ಪಾತಾಳ ಎಲ್ಲಾನೂ ಕೊಳವೀಲಿ ಗೆದ್ದ ಈ ಮಹಾನುಭಾವ ನಿಜವಾಗಿಯೂ ಪ್ರಚಂಡ ದಂಡನಾಯಕ. ಮೊದಲು ದೊರೆಗಳಿಗೆ ಈ ದೈವೀಪುರುಷನ ಭೇಟಿ ಮಾಡಿಸು. ಆ ಮಹಾರಾಯ, ಪವಾಡಪುರುಷನನ್ನ, ಈ ಅದ್ಭುತವನ್ನ ನೋಡಿ, ಸಂತೋಷಪಡಲಿ. ಹಾಗೇ ಈ ಪವಾಡಾನ ಅರಮನೆ ಬೊಕ್ಕಸಕ್ಕೆ ಒಪ್ಪಿಸಿ ಬಾ. ಇಂಥದ್ದೆಲ್ಲಾ ಅರಮನೆ, ಗುರು ಮನೇಲಿರಬೇಕೇ ಹೊರತು, ನಮ್ಮಂಥ ಸಾಮಾನ್ಯರ ಹತ್ತಿರ ಇರಬಾರದು'

—ಎಂದರು ಪೋಚಿಕಬ್ಬೆ.

'ನಿಜ....ನಿಜ ಅವ್ವ....ನೀವಾಡಿದ್ದು ಸತ್ಯ. ದೊರೆ ಕಣ್ಣು ನೋಡಬೇಕಾದ್ದು ಇದು.'

—ಎಂದು ಹೇಳಿ–

'ಇದನ್ನು ಮೊದಲು ನಮಗೆ ತೋರಿಸಿದ ಮರ್ಯಾದೆಗೆ ನಿಮಗಿರಲಿ.'

—ಎಂದು ತಮ್ಮ ಕತ್ತಿನಲ್ಲಿದ್ದ ಹಾರ, ಕೈಯಲ್ಲಿದ್ದ ನವರತ್ನ ಕಡಗಗಳನ್ನು ತೆಗದು ಗೌರಾಚಾರಿಗೆ ತೊಡಿಸಿದರು. ಆ ವೇಳೆಗೆ ಒಳಗೆ ಹೋದ ಲಕ್ಷ್ಮೀಮತಿಯೂ, ಒಂದು ಮೊರದ ತುಂಬಾ ಮುತ್ತು ರತ್ನಗಳನ್ನು ತುಂಬಿಕೊಂಡು ತಂದು—

'ಬಡವರ ಸೇವೆ ಒಪ್ಪಿಸಿಕೊಳ್ಳಿ.'

—ಎಂದು ಗೌರಾಚಾರಿಯ ಇದುರಿನಲ್ಲಿ ಸುರಿದಳು.

ಅದನ್ನು ನೋಡಿ, ಆಕಾಶದರ್ಶಿಯ ಮೂಲಕ ನೋಡಿದಾಗ, ಅವರೆಲ್ಲರಿಗೂ ಆದಷ್ಟೇ ಆಶ್ಚರ್ಯ ಗೌರಾಚಾರಿಗೂ ಆಯಿತು. ಅವರ ಒಳ್ಳೆಯತನದಿಂದ, ಮೂಡಿದ ಸಂತೋಷವನ್ನು ಹೃದಯದಲ್ಲೇ ಭರಿಸಲಾಗದ, ಎಳೆಯ ಮಗುವಿನ ಹಾಗೆ ಅತ್ತುಬಿಟ್ಟ.

'ಇವತ್ತು ಸತ್ತ ನನ್ನ ಅಪ್ಪ ಅವ್ವೋರ ಮತ್ತೆ ಕಂಡಹಾಗಾಯಿತು. ಇದೆಲ್ಲಾ ನನ್ನಂಥವರಿಗೆ ಯಾಕೆ? ನಿಮ್ಮ ಪ್ರೀತಿಯೇ ನನಗೆ ನವನಿಧಿ. ಈ ಮುತ್ತು ರತ್ನ ತಗೊಂಡು, ನಿಲುವಾಭರಣ ಮಾಡಿಸಿ ಇಟ್ಟುಕೊಂಡು ಸಾಕ್ಷಾತ್ ಮಹಾಲಕ್ಷ್ಮಿಯಾಗು ನನ್ನವ್ವ'

—ಎಂದು ಬಿಕ್ಕುತ್ತಲೇ ಲಕ್ಷ್ಮೀಮತಿಗೆ ಹೇಳಿದ.

ಇದೆಲ್ಲವನ್ನೂ ಮಾತುಬರದ ಹಸುಳೆಯಂತೆ ಸುಮ್ಮನೆ ನೋಡುತ್ತಿದ್ದ ಬೋಕಿಮಯ್ಯ, ಕರುನಿಟ್ಟ ಬೊಂಬೆಯಂತೆ, ಕಣ್ಣರಳಿಸಿ ಕುಳಿತಿದ್ದ.

ಗಂಗರಾಜರಿಂದ ಗೌರಾಚಾರಿಯ ಸಂಶೋಧನೆಗಳ ವಿಚಾರವನ್ನರಿತ ವಿಷ್ಣುವರ್ಧನರಾಯ, ಆತನನ್ನು ಅರಮರೆಗೇ ಕರೆಸಿಕೊಂಡು ರಾಜಾಧಿರಾಜರನ್ನು ಸತ್ಕರಿಸುವಂತೆ, ಮರ್ಯಾದೆ ಮಾಡಿ ಸತ್ಕರಿಸಿದ.

ತನ್ನ ತವರೂರಿನ ನಿಪುಣನೊಬ್ಬನ ಸಾಧನೆ, ಪ್ರತಿಭೆಗಳಿಗೆ ಮನಸೋತ ರಾಜಪಕ್ಷ್ಮಿ ಶಾಂತಲಾದೇವಿ, ಗೌರಾಚಾರಿಯನ್ನು ಅಂತಃಪುರದ ಅತಿಥಿ ಶಾಲೆಯಲ್ಲೇ ಇರಿಸಿಕೊಂಡು, ರಾಜೋಪಚಾರ ಮಾಡಿ, ತನ್ನ ಮನಸ್ಸು ತಣಿಸಿಕೊಂಡಳು.

ಆದರೆ ಗೌರಾಚಾರಿಗೆ ಈ ಉಪಚಾರಗಳಿಂದಲೇ ತೃಪ್ತಿಯಾಗಲಿಲ್ಲ. 'ಅವ್ವಾ, ಈ ಮೈಗೆ ಅಂಬಲಿ ಕುಡಿಸಿದರೇನು, ಅಮೃತ ಎರೆದರೇನು. ನನ್ನ ಜೀವಕ್ಕೆ ಅಷ್ಟರಿಂದ ತೃಪ್ತಿ ಇಲ್ಲ.'—ಎಂದ.

'ನಾವು ಕೊಟ್ಟದ್ದು ಮಾಡಿದ್ದು ನಮ್ಮ ತೃಪ್ತಿಗಾಗಿ ಆಚಾರ್ಯರೇ. ನಿಮ್ಮ ತೃಪ್ತಿಗೆಂದಲ್ಲ. ನಿಮಗೇನು ಬೇಕು ಕೇಳಿ?'

— ಎಂದಳು ಶಾಂತಲಾದೇವಿ.

'ಹೆಗ್ಗಡೆಯವರು ನನ್ನನ್ನು ಕಳಿಸಿದ್ದು ಉಂಡುಟ್ಟು ಮಲಗಲಿಕ್ಕಲ್ಲ ನನ್ನವ್ವ. ನಾನು ಕೊಚ್ಚಿಕೊಂಡ ಬಡಾಯಿ ನಿಜ ಅಂತ ಮಾಡಿ ತೋರಿಸೋಕೆ ಅವಕಾಶ ಮಾಡಿಕೊಟ್ಟರೆ ಅಷ್ಟೈಶ್ವರ್ಯಾನೂ ಕೊಟ್ಟ ಹಾಗಾಗುತ್ತೆ. ಅಷ್ಟು ಮಾಡಿಸಿ'

—ಎಂದು ಶಾನ್ತಲಾದೇವಿಯನ್ನು ಬೇಡಿದ ಗೌರಾಚಾರಿ.

'ಅಷ್ಟು ಆತುರವೇನು? ಇಷ್ಟು ದಿನ ಬಳಲಿದ ಜೀವ ಈಗಲಾದರೂ ಎರಡು ದಿನ ಹಾಯಾಗಿರಲಿ. ಅಷ್ಟಲ್ಲವಾದರೆ ಪ್ರಯಾಣದ ದಣಿವು ತೀರುವವರೆಗಾದರೂ ವಿಶ್ರಾಂತಿ ತೆಗೆದುಕೊಳ್ಳಿ.'

—ಎಂದು ವಿಷ್ಣುವರ್ಧನ, ಶಾನ್ತಲಾದೇವಿಯರು ಒಟ್ಟಾಗಿ ಹೇಳಿದರೂ ಗೌರಾಚಾರಿ ಕೇಳಲಿಲ್ಲ.

'ಅದಾಗದು. ನನ್ನ ಅಳಿಯಂದಿರು ಯುದ್ಧ ಪ್ರಯತ್ನದಲ್ಲಿದಾರೆ. ನೀನೂ ಹೋಗಿ ಮಗನ ಹಾಗೆ ಅವರಿಗೆ ನೆರವಾಗು' ಎಂದು ಹೇಳಿ ಹೆಗ್ಗಡೆಯವರು ನನನ್ನು

ಕಳುಹಿಸಿದರು. ಆ ಕೆಲಸ ಮರೆತು ನಾನು ಹಾಲು ತುಪ್ಪದಲ್ಲಿ ಕೈತೊಳೆದು ಮಲಗಲೇ? ನನ್ನಿಂದ ಹಾಗಿರುವುದು ಸಾಧ್ಯವಿಲ್ಲ. ನನ್ನ ವಿಷಯದಲ್ಲಿ ವಿಶ್ವಾಸವಿದ್ದರೆ, ನಾನು ಕಂಡುಹಿಡಿದುದರಿಂದ ನಿಮಗೆ ಸಹಾಯವಾಗುವುದೆಂದಿದ್ದರೆ, ಕೆಲಸಮಾಡಲು ಅವಕಾಶ ಮಾಡಿಕೊಟ್ಟು ಆ ನಂಬಿಕೆಯ ಕಿರೀಟ ನನ್ನ ತಲೆಯ ಮೇಲಿಡಿ'

—ಎಂದು ಬೇಡಿದ.

ಗೌರಾಚಾರಿಯ ಸಂಶೋಧನೆಗಳ ರಣೋಪಯುಕ್ತತೆಯ ವಿಷಯದಲ್ಲಿ ವಿಷ್ಣುವರ್ಧನನಿಗಾಗಲೀ, ದಂಡನಾಯಕ ಗಂಗರಾಜರಿಗಾಗಲಿ ಯಾರಿಗೂ ಸಂಶಯವಿರಲಿಲ್ಲ.

'ಈ ಹೊತ್ತಿನಲ್ಲೇ ಮಾರಸಿಂಗಮಯ್ಯನವರು ಗೌರಾಚಾರಿಯನ್ನು ಇಲ್ಲಿಗೆ ಕಳುಹಿದುದು, ನಮಗೆ ಗೆಲುವು ಶತಸ್ಸಿದ್ಧವೆಂಬುದಕ್ಕೆ ಸೂಚನೆ. ಎರಡು ದಿನ ತಡವಾದರೂ ಆತನ ಸಂಶೋಧನೆಗಳ ಉಪಯೋಗ-ಪಡೆಯುವುದು ಒಳಿತು

—ಎಂದು ಗಂಗರಾಜರೂ ಉಳಿದ ಸಚಿವ, ದಂಡನಾಯಕರೂ ಅಭಿಪ್ರಾಯ ಪಟ್ಟಿದ್ದರು.

ಆದರೆ ವಿಷ್ಣುವರ್ಧನನಿಗೇ ಈ ಅವಸರದಲ್ಲಿ ಅಷ್ಟು ರಥಗಳನ್ನು ಬಿಚ್ಚಿ ಮತ್ತೆ ಸರಿಪಡಿಸುವುದಾದೀತೇ ಎಂಬ ಅನುಮಾನವಿತ್ತು. ಹಾಗೇ ಆ ಕೆಲಸಕ್ಕಾಗಿ ನಾವು ದಿನ ದೂಡಿದರೆ, ನಮ್ಮ ಸಂಗ್ರಾಮ ಸಿದ್ಧತೆಯ ವಾರ್ತೆಯನ್ನರಿತ ಚೋಳರೂ ಕೋಟೆಗಳನ್ನು ಬಲಪಡಿಸಿಕೊಂಡು, ನಮ್ಮ ಕಾರ್ಯ ಕಠಿಣವಾದೀತೇನೋ ಎಂಬ ಭೀತಿಯೂ ಇತ್ತು.

ಆದರೆ ಗೌರಾಚಾರಿ—-

'ನಮ್ಮಿಂದ ಪ್ರಭು ಕಾರ್ಯದಲ್ಲಿ ತಡವಾಗುವುದು ಬೇಡ. ಪ್ರಭುಗಳು ಜ್ಯೋತಿಷ್ಯರನ್ನು ಕೇಳಿ, ಯುದ್ಧ ಯಾತ್ರೆಯ ಮುಹೂರ್ತ ನಿಶ್ಚಯಿಸಲಿ. ನಮಗೆ ಒಂದು

ವಾರದ ಅವಧಿ ದೊರೆತರೂ ಸಾಕು. ಸಾಕಷ್ಟು ಜನ ಬಡಗಿಗಳು, ಕಮ್ಮಾರರ ನೆರವು ದೊರೆತರೆ ಆ ವೇಳೆಗೆ ಒಂದು ಸಾವಿರ ರಥವನ್ನಾದರೂ ಸಿದ್ಧಪಡಿಸಿ ಕೊಡುತ್ತೇನೆ. ಈ ಸಮರದಲ್ಲೇ ನನ್ನ ಸಂಶೋಧನೆಯ ಪರೀಕ್ಷೆಯೂ ನಡೆದು ಹೋಗಲಿ.'

—ಎಂದು ಹೇಳಿ ಆ ಸಂಶಯ ಭೀತಿಗಳನ್ನು ನಿವಾರಿಸಿದ. ಗಂಗರಾಜರೂ ಆ ಮಾತಿಗೆ ಸಮ್ಮತಿಸಿದರು.

ಎಲ್ಲರೂ ಹಾಗಾಗಬಹುದೆಂದು ಹೇಳಿದುದಕ್ಕೆ ವಿಷ್ಣುವರ್ಧನನೂ ಸಮ್ಮತಿಸಿದ. ದೊರೆಯ ಅಪ್ಪಣೆಯಂತೆ ಗಂಗರಾಜರು ದ್ವಾರಸಮುದ್ರದಲ್ಲಿದ್ದ ಬಡಗಿಗಳು, ಕಮ್ಮಾರರು, ಲೋಹಕರ್ಮಿಗಳೆಲ್ಲರನ್ನೂ ಕಲೆ ಹಾಕಿದುದೇ ಅಲ್ಲದೆ, ಸುತ್ತಮುತ್ತಲ ಗ್ರಾಮ, ನಗರಗಳಲ್ಲಿದ್ದ ಕೆಲಸಗಾರರೆಲ್ಲರನ್ನೂ ಅವಸರವಾಗಿ ರಾಜಧಾನಿಗೆ ಕರೆಯಿಸಿ, ಎಲ್ಲರಿಗೂ ಗೌರಾಚಾರಿ ಹೇಳಿದಂತೆ ಹಗಲಿರುಳೂ ದುಡಿದು ರಥಗಳನ್ನು ನಿರ್ಮಿಸುವಂತೆ ಕಟ್ಟಪ್ಪಣೆ ಮಾಡಿದ. ಕೆಲಸದಲ್ಲಿ ನಿದ್ರೆ, ಆಲಸ್ಯ, ತಾತ್ಸಾರಗಳನ್ನು ತೋರಿದವರಿಗೆ ಕೈ ಕತ್ತರಿಸುವ ಶಿಕ್ಷೆಯನ್ನು ವಿಧಿಸುವುದಾಗಿ ಹೇಳಿ, ಪ್ರತಿಯೊಬ್ಬರಿಗೂ ಅವರವರು ಮಾಡಿದ ಕೆಲಸದ ಪ್ರಮಾಣಕ್ಕೆ ಅನುಗುಣವಾಗಿ, ವೇತನ ಕೊಡುವುದೇ ಅಲ್ಲದೆ, ಆ ಪ್ರಮಾಣಕ್ಕನುಸಾರವಾಗಿ ಉಡುಗೊರೆಗಳನ್ನೂ ಕೊಡುವುದಾಗಿ ತಿಳಿಸಿದ.

ಗಂಗರಾಜನ ಅಪ್ಪಣೆಯಿಂದ ರಾಜಧಾನಿಯ ಹೊರವಳಯದಲ್ಲಿ ನೂರಾರು ಕರ್ಮಶಾಲೆಗಳು ನಿರ್ಮಾಣವಾಗಿ, ಸಾವಿರಾರು ಜನ ಕೆಲಸಗಾರರು ಗೌರಾಚಾರಿಯ ನೇತೃತ್ವದಲ್ಲಿ ಹಗಲಿರುಳೂ ದುಡಿಯಲಾರಂಭಿಸಿದರು. ಕೆಲಸಗಾರರಿಗೆ ಊಟ, ತಿಂಡಿಗಳಿಗೆ ಕೊರತೆಯಾಗದಂತೆ ಅವರಿದ್ದಲ್ಲಿಗೇ ಅದು ಸರಬರಾಯಿ ಆಗುವ ವ್ಯವಸ್ಥೆಯನ್ನು ಗಂಗರಾಜರು ಮಾಡಿದುದೇ ಅಲ್ಲದೆ, ಅಲ್ಲಿ ಏನು ಕೆಲಸ ನಡೆಯುತ್ತಿದೆ ಎಂಬುದು ಬೇರೆಯವರಿಗೆ ತಿಳಿಯದಂತೆ, ಕೆಲಸಗಾರರು ಕೆಲಸ ಬಿಟ್ಟು ಮಾತು, ಅಲೆತದಲ್ಲಿ ಹೊತ್ತು ಕಳೆಯದಂತೆ ಕಾವಲಿರಲು, ಆ ಕರ್ಮಶಾಲೆಗಳ ಸುತ್ತಲೂ ಸೇನೆಯ ಕಾವಲು ಹಾಕಿದರು.

ಆದರೆ ಪ್ರಭು ಭಕ್ತಿ, ದೇಶಭಕ್ತಿಗಳಿಂದ ಪ್ರಚೋದಿತರಾದ ಆ ಕೆಲಸಗಾರರಿಗೆ ಯಾವ ಭಯ, ಬಹುಮಾನದ ಪ್ರೋತ್ಸಾಹವೂ ಅಗತ್ಯವಿರಲಿಲ್ಲ. ಯುದ್ಧದಲ್ಲಿ ತಮ್ಮ ದೊರೆ ಗೆಲ್ಲಬೇಕು, ಎನ್ನುವ ಶ್ರದ್ದೆಯೊಂದಿಗೆ ಹೊಸದೊಂದನ್ನು ಆದಷ್ಟು ಬೇಗ ಮಾಡಿ ತೋರಿಸುವ ಉತ್ಸಾಹವೂ ಬೆರೆತು, ಮಿಂಚಿನ ವೇಗದಲ್ಲಿ ಕೆಲಸಗಳು ನಡೆದವು. ದೇವತಾ ಪೂಜೆ, ವಿಶ್ವಕರ್ಮ, ಮಯ ಮೊದಲಾದ ದೇವಶಿಲ್ಪಿಗಳ ಆರಾಧನೆಗಳ ಬಳಿಕ, ಕುಲುಮೆಗಳಲ್ಲಿ ಹೊತ್ತಿದ ಬೆಂಕಿ, ಹರಿದಾಡಿ ದೂರಕ್ಕೂ ಕೇಳಿಸುವಂತೆ ಸುಯ್ಯುವ ರಾಕ್ಷಸಾಕಾರದ ಕಿಡಿಗಳು ನೀಡಿದ ಗಾಳಿಯನ್ನನ್ನಾಂತು ಪ್ರಜ್ವಲಿಸಿತು. ಕಬ್ಬಿಣವನ್ನು ಕಾಸಿ, ಕುಟ್ಟುವ ಸದ್ದು, ಮರಮಟ್ಟುಗಳನ್ನು ಕೊಯ್ಯುವ, ಜೋಡಿಸಿ ಬಿಗಿ ಮಾಡುವ ಸದ್ದು ಹತ್ತಾರು ಗಾವುದಗಳ ದೂರಕ್ಕೆ ಹರಡಿತು.

ಕೆಲಸ ಆರಂಭವಾದ ಎರಡನೆಯ ದಿನವೇ ತಾನು ಯೋಚಿಸಿದ ಲೋಹಪಟ್ಟಿಕೆಗಳಿಂದ ಸಜ್ಜಾದ ರಥವೊಂದನ್ನು ನಿರ್ಮಿಸಿ, ಪರೀಕ್ಷೆಗೆಂದು ದೊರೆಯ ಬಳಿ ತಂದ.

ಆ ರಥವನ್ನು ಯಾರು ಆರೋಹಿಸಿ, ಪರೀಕ್ಷಿಸುವರೆಂಬ ಮಾತು ಚರ್ಚೆಗೆ ಬಂದಾಗ, ಕುಮಾರವಿಷ್ಣುದಂಡನಾಯಕ—

'ಸಮರಾಧಿಪತ್ಯವಂತೂ ಹಿರಿಯರಿಗಾಯಿತು. ಈ ರಥ ಪರೀಕ್ಷೆಯ ಮನ್ನಣೆಯಾದರೂ ನಮಗಾಗಲಿ. ನಾನೇ ರಥಾರೋಹಣ ಮಾಡುತ್ತೇನೆ,'

—ಎಂದು ಹೇಳಿದ.

ಕುಮಾರವಿಷ್ಣು ದಂಡನಾಯಕನ ವಿಷಯದಲ್ಲಿ ವಿಷ್ಣುವರ್ಧನನಿಗಿದ್ದ ಭಾವನೆಯನ್ನು ಅರಿತ ಗೌರಾಚಾರಿ—

'ಪ್ರಭು, ಇದು ರಥಪರೀಕ್ಷೆಯಷ್ಟೇ ಅಲ್ಲ. ನಮ್ಮ ಗೌರವ ಪರೀಕ್ಷೆ. ಇದರ ಯೋಗ್ಯತೆ ಇಷ್ಟೇ ಎಂದು ನಿರ್ಣಯವಾಗಬೇಕಾದರೆ, ಸ್ವತಃ ಜೀವ ಭಯ

ಇರುವವರಾಗಲಿ, ಅಥವಾ, ಯಾರ ಯೋಗಕ್ಷೇಮದ ವಿಷಯದಲ್ಲಿ ಪ್ರಭುಗಳಿಗೆ ಆಸಕ್ತಿಯಿದೆಯೋ ಅಂಥವರಾಗಲಿ ಓಡಿಸುವುದು ಯುಕ್ತವಾಗಲಾರದು. ಆದುರದಿಂದ, ಜೀವ ಭಯವನ್ನೂ ಬಿಟ್ಟು, ಪ್ರಭುಗಳ ಪಾದಕ್ಕೆ ತಲೆಯೊಪ್ಪಿಸುವ , ಪ್ರತಿಜ್ಞೆ ಮಾಡಿದ ಲೆಂಕರಲ್ಲಿ ಯಾರಾದರೊಬ್ಬರು, ದೊಡ್ಡ ದೊಡ್ಡ ಹಳ್ಳ ತಿಟ್ಟುಗಳ ಮೇಲೆ, ಕಲ್ಲು ಗಿಡಗಳಮೇಲೆ, ರಥವನ್ನು ಆದಷ್ಟು ವೇಗದಲ್ಲಿ ಓಡಿಸಲಿ. ಆಗ ಈ ಲೋಹಪಟ್ಟಿಕೆಯಿಂದ ಏನಾದರೂ ಉಪಯೋಗ ಉಂಟೇ ಇಲ್ಲವೇ ಎನ್ನುವುದು ನಿರ್ಣಾಯಕವಾಗಿ ತಿಳಿಯುತ್ತದೆ.'

—ಎಂದು ಸಲಹೆ ಮಾಡಿದ.

'ಪ್ರಭುಗಳ ಊಳಿಗದಲ್ಲಿರುವವರಲ್ಲಿ 'ಗಂಡಪೆಂಡಾರ'ವನ್ನು ಹಾಕಿಕೊಂಡವರೊಬ್ಬರೇ ಲೆಂಕರಲ್ಲ. ಆವರ ಊಪ್ಪುಂಡವರೆಲ್ಲರೂ ವೇಳೆ ವಡಿಚರೇ. ಆದುದರಿಂದ ನಮ್ಮ ನಮ್ಮಲ್ಲಿ ಭೇದ ಕಲ್ಪಿಸಲಾಗದು. ಉಳಿದವರಿಗೆ ದೊರಕುವ ಗೌರವ ನಮಗೆ ದೊರತರೇನು ತಪ್ಪು? ಆಳಿಗೆ ಇಲ್ಲದ ಜೀವಭೀತಿ ನಮಗುಂಟೇ? ಆಚಾರ್ಯರಿಗೆ ನಮ್ಮ ಸಾಹಸದ ವಿಷಯದಲ್ಲಿ ಈಗ ಸಂಶಯವನ್ನು, ನಮಗೆ ರಥಾರೋಹಣ ಮಾಡಲು ಅಪ್ಪಣೆಕೊಟ್ಟು ಪ್ರಭುಗಳು ನಿವಾರಿಸಬೇಕು'

—ಎಂದು ಹಟ ಹಿಡಿದು ಕೇಳಿದ ಕುಮಾರವಿಷ್ಣು.

'ಅದೂ ಯುಕ್ತವೇ. ಇದರ ಅತಿಮಿತಿ ಹೀಗೆಂದು ತಿಳಿಯದ ಹೊಸ ವಸ್ತುವಿನ ಪರೀಕ್ಷೆಗೆ ಅವರಿವರ ಜೀವವನ್ನು ಒಡ್ಡುವುದಕ್ಕಿಂತ ನಮ್ಮವರ ಮೇಲೆ ಆ ಪ್ರಯೋಗ ನಡೆಯುವುದು ಒಳಿತು'

—ಎಂದು ಹೇಳಿ ವಿಷ್ಣುವರ್ಧನ ಕುಮಾರ ವಿಷ್ಣುವೇ ರಥಪರೀಕ್ಷೆ ಮಾಡುವುದಕ್ಕೆ ಒಪ್ಪಿದ.

ಅದರಂತೆಯೆ ಅದೇ ದಿನ ಸಂಜೆ ಪುಷ್ಪಗಿರಿಯ ಮುಂದಿನ ವಿಶಾಲವಾದ ಬಯಲಿನಲ್ಲಿ ರಥ ಪರೀಕ್ಷೆಗೆ ಸಿದ್ಧತೆಗಳು ನಡೆದವು.

ಬಯಲಿನ ಒಂದು ಬದಿಯಲ್ಲಿ ನಿರ್ಮಿಸಿದ ವೇದಿಕೆಯ ಮೇಲೆ ವಿಷ್ಣುವರ್ಧನ, ತನ್ನ ಪಟ್ಟಮಹಿಷಿ ಶಾನ್ತಲಾದೇವಿಯೊಂದಿಗೆ ಉಚಿತಾಸನದಲ್ಲಿ ಮಂಡಿಸಿದ. ಅವನ ಇಬ್ಬದಿಯಲೂ, ಗಂಗರಾಜ, ಪುಣಿಸಮಯ್ಯ ಮೊದಲಾದ ಸಚಿವ ದಂಡನಾಯಕರೂ, ಪಸಾಯಿಗರೂ, ನಗರ ಮುಖ್ಯರೂ, ಸೇನೆಯ ಅಧಿಕಾರಿಗಳೂ ಕುಳಿತರು.

ವೇದಿಕೆಯ ಇದುರಿನಲ್ಲಿ, ಅಷ್ಟು ದೂರದಲ್ಲಿ ಬಹು ವೇಗವಾಗಿ ಓಡಬಲ್ಲಂಥ ಶಕ್ತಿಶಾಲಿ ಅಶ್ವಗಳನ್ನು ಕಟ್ಟಿದ ರಥ ಸಿದ್ಧವಾಗಿತ್ತು.

ಪುರೋಹಿತರು ನೂತನ ರಥದ ಪೂಜೆಯನ್ನು ಮಾಡ್ಕ, ಕುದುರೆಗಳ

ಹಣೆಗೆ ಕುಂಕುವನ್ನಿಟ್ಟ ಬಳಿಕ್ಕ ಗೌರಾಚಾರಿಯೂ ರಥದ ಬಳಿಗೆ ತೆರಳಿ,

ಅದಕ್ಕೆ ಕುಂಕುಮವಿಟ್ಟು ನಮಸ್ಕರಿಸಿ—

'ತುಂಬಿದ ಸಭೆಯಲ್ಲಿ ನಮ್ಮ ಮರ್ಯಾದೆಯನ್ನು ಕಾಲಕಸ ಮಾಡಬೇಡ'

—ಎಂದು ಬೇಡಿ, ದೊರೆಯಬಳಿಗೆ ಬಂದು—

'ಇನ್ನು ಪರೀಕ್ಷೆ ನಡೆಯಲಿ'

—ಎಂದು ಕೇಳಿದರು.

ಆ ಹೊತ್ತನ್ನೇ ಕಾಯುತ್ತಿದ್ದ ಕುಮಾರವಿಷ್ಣುದಂಡನಾಯಕ, ಅರಸು-ಅರಸಿತಿಯರಿಗೆ ವಂದಿಸಿ, ಅವರ ಹರಕೆಯನ್ನು ಪಡೆದು, ರಭದ ಬಳಿ ನಡೆದು, ರಥ ವಂದನೆ ಸಲ್ಲಿಸಿ, ಬಲಗಾಲು ಮುಂದಾಗಿ ರಥವನ್ನೇರಿ, ಸಾರಥಿ ಸ್ಥಾನದಲ್ಲಿ ಕುಳಿತು, ಅದುವರೆಗೂ ಕುದುರೆಗಳನ್ನು ಹಿಡಿದ ಆಳುಗಳಿಂದ, ವಾಘೆಯನ್ನು ತನ್ನ ಕೈಗೆ

ತೆಗೆದುಕೊಂಡು, ರಥವನ್ನು ಎಳೆಯಲು ಆರೋಹಿಯಷ್ಟೇ ಉತ್ಸುಕವಾಗಿ ಮುಂಗಾಲು ಗೊರಸುಗಳಿಂದ ನೆಲವನ್ನು ಬಗೆಯುತ್ತಿದ್ದ ಕುದುರೆಗಳ ಬೆನ್ನನ್ನು ಚಪ್ಪರಿಸಿದ.

ಅಶ್ವ ಹೃದಯವನ್ನು ಬಲ್ಲ ಕುಮಾರವಿಷ್ಣುದಂಡನಾಯಕನ ಹಸ್ತಚೋದನೆಯಿಂದ ಉತ್ತೇಜಿತವಾದ ಆ ಜಾತ್ಯಶ್ವಗಳು, ಗಾಳಿ ವೇಗದಲ್ಲಿ ರಥವನ್ನು ಎಳೆದವು.

ತಗ್ಗು ದಿಣ್ಣೆಗಳ ಮೇಲೆ, ಮಿಂಚಿನ ವೇಗದಲ್ಲಿ ಓಡುವ ರಥ ನೋಟಕರ ಎದೆಯಲ್ಲಿ 'ಎಲ್ಲಿ ಉರುಳುವುದೋ, ಯಾವಾಗ ಚಕ್ರಗಳ ಕೀಲು ಕಳಚಿ ಬೀಳುವುದೋ, ಕುದುರೆಗಳ ಕಾಲೆಲ್ಲಿ ಮುರಿಯುವುದೋ, ಆರೋಹಿಯೇ ಎಲ್ಲಿ ಉರುಳುವನೋ' ಎಂಬ ಭೀತಿ, ಕಾತರ, ವಿಸ್ಮಯ, ಹರ್ಷ ಮೊದಲಾದ ನಾನಾ ಭಾವನೆಗಳನ್ನು ಮೂಡಿಸಿತು.

ಆ ರಥದ ವೇಗವಾದ ಓಟದಿಂದ ಮೂಡಿದ ಉತ್ಸಾಹದಿಂದ, ಅರೆಯೆದ್ದು ಮಂಡಿಯೂರಿ ಕುಳಿತು ವಿಷ್ಣುವರ್ಧನನೂ, ತುಟಿಕಚ್ಚಿ 'ಆಕಾಶದರ್ಶಿ' ಯ ಮೂಲಕ ರಥದ ಓಟವನ್ನು ವೀಕ್ಷಿಸುತ್ತಿದ್ದ.

ಕುಮಾರವಿಷ್ಣುದಂಡನಾಯಕನ ರಥಾರೋಹಣ ಚಾತುರಿಯಿಂದ ಮೂಡಿದ ಉತ್ಸಾಹ-ಉದ್ವೇಗಗಳಿಂದ ತಾನು ಓಲಗದಲ್ಲಿರುವುದನ್ನೂ ಮರೆತು, ದೊರೆಯ ತೋಳನ್ನು ತಬ್ಬಿ, ಮೆಚ್ಚಿಗೆಯನ್ನು ಹತ್ತಿಕ್ಕಲಾರದೆ, ಶಾನ್ತಲಾದೇವಿಯೂ 'ಭಲೆ ವಿಷ್ಣು ಭಲೆ ಕುಮಾರ' ಎಂದು ಹೊಗಳಿದಳು.

ಗೌರಾಚಾರಿಯಂತೂ ಕಣ್ಣೆವೆಗಳನ್ನು ಅಲುಗಿಸದೆಯೇ, ಬಿಡುಗಣ್ಣನಾಗಿ ರಥದ ಓಟವನ್ನು ನೋಡುತ್ತಿದ್ದ.

ನೋಡುವವರ ಎದೆಯಲ್ಲಿ ಅಚ್ಚರಿ-ಮೆಚ್ಚುಗೆ ಮೂಡಿಸುವಂತೆ, ಬಯಲನ್ನು ಹತ್ತಾರು ಬಾರಿ ಸುತ್ತಿ, ಕುಮಾರವಿಷ್ಣುದಂಡನಾಯಕ ಮತ್ತೆ ರಥವನ್ನು, ಅದು ಮೊದಲಿದ್ದ

ಎಡೆಯಲ್ಲಿಯೇ ತಂದು ನಿಲ್ಲಿಸಿ. ಬಾಯಿಂದ ನೊರೆಗಾರುತ್ತಾ, ಬುಸುಗರೆಯುತ್ತಿದ್ದ ಕುದುರೆಗಳ ಬೆನ್ನು ಚಪ್ಪರಿಸಿ, ತಿನ್ನಲು ಹಿಡಿ ಚಿಗುರು ಹುಲ್ಲನ್ನು ಕೊಟ್ಟು, ಏನೂ ಆಯಾಸವಾಗದವನಂತೆ, ನಸು ನಗುತ್ತಾ ದೊರೆಯ ಬಳಿಗೆ ನಡೆದು ಬಂದ.

ರಥ ನಿಲ್ಲುತ್ತಿದ್ದ ಹಾಗೆ, ಗೌರಾಚಾರಿ ರಥದ ಬಳಿ ಓಡಿ, ಗಾಲಿಯ ಮೇಲಿನ ಲೋಹ ಪಟ್ಟಿಕೆಗಳ ಗತಿ ಏನಾಗಿದೆಯೋ ಎಂದು ಪರೀಕ್ಷಿಸಿದ. ಆಗತಾನೇ ಕುಲುಮೆಯಿಂದ ಹೊರ ತೆಗೆದಂತೆ ಥಳಥಳಿಸುತ್ತಿದ್ದ ಲೋಹಪಟ್ಟಿಕೆಗಳು, ಯಾವ ಬಗೆಯ ಅಪಾಯವಾಗದೆ, ಜೋಡಣೆ ಕೆಡದೆ ಇದ್ದುದನ್ನು ನೋಡಿ, ಆತನಿಗೆ ಅಪಾರ ಆನಂದವಾಯಿತು. ಆ ಆನಂದದಲ್ಲೆ—

'ನನ್ನ ಮರ್ಯಾದೆಯನ್ನುಳಿಸಿದೆ ಕಂದಾ.'

—ಎಂದು ಮಗುವಿಗೆ ಮುತ್ತಿಡುವಂತೆ ಅ ಲೋಹಪಟ್ಟಿಕೆಗೆ ಮುತ್ತಿಟ್ಟ.

ತನ್ನ ಕೃತಿಯ ಬಗ್ಗೆ ಆತ ವ್ಯಕ್ತಪಡಿಸಿದ ಪ್ರೇಮ, ಅಭಿಮಾನವನ್ನು ಕಂಡು ವಿಷ್ಣುವರ್ಧನನ ಕಣ್ಣಲ್ಲಿ ನೀರಾಡಿತು.

'ದೇಶ ಉಳಿಯುವುದೂ, ಬೆಳೆಯುವುದೂ, ತಮ್ಮ ಕೃತಿಯ ಬಗ್ಗೆ ಇಂಥ ಅಭಿಮಾನವನ್ನುಳ್ಳ ಪ್ರತಿಭಾಶಾಲಿಗಳಿಂದಲೇ.'

—ಎಂದು ತನಗೆ ತಾನೇ ಹೇಳಿಕೊಂಡು, ಸಮೀಪಕ್ಕೆ ಬಂದ ಕುಮಾರವಿಷ್ಣುದಂಡನಾಯಕನತ್ತ ತಿರುಗಿ, ಆತುರವಾಗಿ—

'ಏನಾದರೂ ವ್ಯತ್ಯಾಸ ಕಂಡಿತೋ?'

—ಎಂದು ಕೇಳಿದ.

'ಈ ಉಪಕರಣಕ್ಕಾಗಿ ಗೌರಾಚಾರ್ಯರಿಗೆ ಏನು ಮೆಚ್ಚುಗೆ ಕೊಟ್ಟರೂ ಸಾಲದು! ಎಂಥ ತಿಟ್ಟಿನ ಮೇಲೆ ಎಷ್ಟು ವೇಗವಾಗಿ ಓಡಿಸಿದರೂ, ರಥ ಉಯ್ಯಾಲೆಯಂತೆ ಆಡುತ್ತದೆಯೇ ಹೊರತು, ಮೈಗೆ ಪೆಟ್ಟಾಗುವುದಿರಲಿ, ಕುಡಿದ ನೀರೂ ಕದಲುವುದಿಲ್ಲ. ಇಂಥ ರಥವಿದ್ದರೆ ಹೊತ್ತು ಮೂಡುವಾಗ ದ್ವಾರಸಮುದ್ರ ಬಿಟ್ಟರೆ, ಹೊತ್ತು ನೆತ್ತಿಯ ಮೇಲೆ ಬರುವ ವೇಳೆಗೆ ತಲಕಾಡಿನ ಬಾಗಿಲಿನಲ್ಲೇ ಪಾಳಯ ಮಾಡಬಹುದು. ಅಷ್ಟು ದೂರ ಹೋದರೂ, ಕುದುರೆಗಳಿಗಾಗಲಿ ರಥದಲ್ಲಿ ಕುಳಿತವರಿಗಾಗಲಿ, ರಥವನ್ನು ನಡೆಸುವವರಿಗಾಗಲಿ ಕೊಂಚವೂ ಶ್ರಮವಾಗುವುದಿಲ್ಲ.'

— ಎಂದು ಕುಮಾರ ವಿಷ್ಣು ಉತ್ಸಾಹದಿಂದ ವಿಷ್ಣುವರ್ಧನನ ಪ್ರಶ್ನೆಗೆ ಉತ್ತರವಿತ್ತ.

ಆ ಮಾತನ್ನು ಕೇಳಿ ವಿಷ್ಣುವರ್ಧನನಿಗೆ, ರಥದ ಅಡಿಭಾಗದಲ್ಲಿ ಚಕ್ರದ ಮೇಲೆ ಕುಳಿತ ಆ ಲೋಹವಪಟ್ಟಿಕೆ ನಿರ್ಜೀವ ವಸ್ತುವಿನಂತೆ ಕಾಣದೆ, ತನ್ನ ವಿಜಯ ಸಾಧನೆಗಾಗಿ ದೇವರು ತಾನೇ ಕಳಿಸಿದ ವರದಾನದಂತೆ ಕಂಡಿತು. ಆ ಭಾವದಿಂದ ಉದ್ದೀಪಿತವಾದ ಕಣ್ಣುಗಳ ಇದಿರು, ಮಿಂಚಿನ ವೇಗದ ನೂರು ದಾಳಿಗಳು ಕಂಡು ಮರೆಯಾದವು.

ಆ ಉಪಕರಣವನ್ನು ಸೃಜಿಸಿದ ಗೌರಾಚಾರಿಗೆ ಯುಕ್ತವಾದ ಉಡುಗೊರೆಗಳನ್ನು ವಿಷ್ಣುವರ್ಧನ ಕೊಟ್ಟ ಬಳಿಕ, ಅಂದಿನ ಓಲಗ ಕದಲಿತು.

ಅದಾದ ಮೂರನೆಯ ದಿನಕ್ಕೇ ಗಂಗರಾಜರ ಕುಮಾರ ಬೊಪ್ಪಣ ದಂಡನಾಯಕ, ಗೌರಾಚಾರ್ಯನಿಂದ ನಿರ್ಮಿತವಾದ 'ಸರ್ಪರಜ್ಜು'ವಿನಿಂದ ಸಂಯೋಜಿತವಾದ ರಥ ಪರೀಕ್ಷೆ ಮಾಡಿ, ಆ ವಿಷಯದಲ್ಲೂ ಗೌರಾಚಾರಿಯ ಹೇಳಿಕೆ ಸುಳ್ಳಲ್ಲವೆಂಬುದನ್ನು ಸಕಲರಿಗೂ ಮನವರಿಕೆ ಮಾಡಿಕೊಟ್ಟ.

ಆ ಪರೀಕ್ಷೆಯಿಂದ 'ಸರ್ಪರಜ್ಜು'ವಿನ ಬಳಕೆಯಿಂದ ರಥದ ಓಟ ಸರಾಗವಾಗುವುದೇ ಅಲ್ಲದೆ, ಗಾಲಿಗಳ ಸವೆತವೂ ತಪ್ಪುವುದೆಂಬುದು ಅರಿವಾಗಿ,

ವಿಷ್ಣುವರ್ಧನನಿಗೆ ಗೌರಾಚಾರಿಗೆ ಏನು ಮೆಚ್ಚು ಕೊಟ್ಟರೂ ತೃಪ್ತಿಯಾಗದಷ್ಟು ಸಂತೋಷವಾಯಿತು.

೬

ಗೌರಾಚಾರಿಯ ಮಾತಿನಂತೆ, ಒಂದು ವಾರದೊಳಗಾಗಿ ಸಾಕಷ್ಟು ಸಂಖ್ಯೆಯಲ್ಲಿ ಹೊಸ ರಥಗಳು ನಿರ್ಮಾಣವಾಗಿ, ಆ ರಥಗಳು ಸೇನೆಗೆ ಹಂಚಲ್ಪಟ್ಟವು. ವಿಷ್ಣುವರ್ಧನ ಒಂದು ದಿನ ವಿಶೇಷ ಓಲಗ ನೆರೆಸಿ, ಗೌರಾಚಾರ್ಯರಿಗೂ, ರಥ ನಿರ್ಮಾಣಕಾರ್ಯದಲ್ಲಿ ಹಗಲಿರುಳೂ ಶ್ರಮಿಸಿದ ಬಡಗಿ, ಕಮ್ಮಾರ, ಅಕ್ಕಸಾಲಿ ಮೊದಲಾದ ಹಲವು ವೃತ್ತಿಯವರಿಗೂ, ಅವರನ್ನು ಅಭಿವಂದಿಸಿ ಪಾರಿತೋಷಗಳನ್ನಿತ್ತ.

ಉಡುಗೊರೆಗಳನ್ನು ಪಡೆದ ಸಹಸ್ರಾರು ಜನರಲ್ಲಿ ಒಬ್ಬೊಬ್ಬರೂ 'ಇಂಥ ಉಡುಗೊರೆ ಸಿಗುವುದೆಂದು ನಾವು ಊಹಿಸಿರಲಿಲ್ಲ' ಎಂದುಕೊಂಡರೇ ವಿನಾ 'ಇಷ್ಟೆಯೇ?' ಎಂದು ಗೊಣಗುವವರು ಒಬ್ಬರೂ ಇರಲಿಲ್ಲ.

ಆ ಓಲಗದಲ್ಲಿ ಗೌರಾಚಾರಿಗಾದ ಮರ್ಯಾದೆಯನ್ನು ಕಂಡ ಎಷ್ಟೋ ಜನ ತಾವೂ ಅವರಂತೆಯೇ ಏನಾದರೂ ಹೊಸದನ್ನು ಕಂಡುಹಿಡಿದು ಅಂಥ ಮೆಚ್ಚುಗೆ, ಮನ್ನಣೆ ಪಡೆಯಬೇಕು ಎಂದುಕೊಂಡು, ಏನು ಕಂಡುಹಿಡಿಯುವುದೆಂಬ ಯೋಚನೆಗೆ ತೊಡಗಿದರು.

ಹೊಸ ರಥಗಳನ್ನು ಪಡೆದ ಸೇನೆ 'ಎಂದು ದಂಡಯಾತ್ರೆ ಆರಂಭವಾದೀತೋ? ಎಂದು ಅವನ್ನು ಶತ್ರುಸೇನೆಯ ಮುಂದೆ ಮೆರೆಸಿ, ಅವರನ್ನು ಮುರಿದೇವೋ' ಎಂದು ಕಾತರಪಡತೊಡಗಿತು.

ಆ ಸೇನೆಯಂತೆ ದೊರೆಯೂ ದಂಡಯಾತ್ರೆಯ ಆರಂಭದಿನವನ್ನು ನೆನೆದು ಕನಸು ಕಾಣತೊಡಗಿದ.

ಗಂಗರಾಜರೂ, ಅಷ್ಟೇ ಆತುರವಾಗಿ ಆ ಸಿದ್ಧತೆಯಲ್ಲಿದ್ದರು.

ಸಚಿವ ಪರಿವಾರ, ದಂಡನಾಯಕರ ಮಂಡಲಿಯಲ್ಲಿ ವಿಚಾರ ನಡೆಸಿ, ಗಂಗರಾಜರು, ತಲಕಾಡಿನತ್ತ ನಡೆಯುವ ಸೇನೆಗೆ ತಮ್ಮ ಆಧಿಪತ್ಯ, ಕೊಂಗುನಾಡು, ನೀಲಪರ್ವತ ಪ್ರಾಂತದ ದಾಳಿ, ಪುಣಿಸಮಯ್ಯನವರ ಆಧಿಪತ್ಯದಲ್ಲಿ ನಡೆಯಬೇಕು; ನಿಗರಿಲಿ ಚೋಳ ಮಂಡಲದತ್ತ ನಡೆಯುವ ಸೇನೆ ರಾಜಸಹೋದರ ಉದಯಾದಿತ್ಯರ ನಾಯಕತ್ವದಲ್ಲಿ ನುಗ್ಗಬೇಕು— ಎಂದು ತೀರ್ಮಾನಿಸಿದರು.

ಕುಮಾರವಿಷ್ಣುದಂಡನಾಯಕ, ಕುಮಾರಬೊಪ್ಪಣದಂಡನಾಯಕ, ಕೊಣೆಯ ಶಂಕರ ದಂಡನಾಯಕ, ಚಾಮರಾಜ ದಂಡನಾಯಕ, ಮೊದಲಾದವರು ಯಾರು ಯಾರಿಗೆ ಸಹಕರಿಸಬೇಕು, ಒಂದೊಂದು ಸೀಳಿಗೂ ಎಷ್ಟು ರಥ, ಆನೆ ಕುದುರೆ, ಪದಾತಿಗಳ ದಳವೆಂದೂ ನಿಶ್ಚಯಮಾಡಿದರು.

ಈ ಮೂರು ಸೀಳು ಸೇನೆ, ಚೋಳ ಮಂಡಲ ದಿಗ್ವಿಜಯದಲ್ಲಿ ತೊಡಗಿದಾಗ, ಮರಿಯಾನೆದಂಡನಾಯಕ, ಭರತದಂಡನಾಯಕರು, ರಾಜಧಾನಿಯಲ್ಲಿದ್ದು ಅಲ್ಲಿಯ ರಕ್ಷಣೆಯನ್ನೂ, ಯುದ್ಧ ನಿರತವಾದ ಸೇನೆಗೆ ಅಗತ್ಯವಾದ ವಸ್ತುಗಳನ್ನೂ ಸರಬರಾಯಿ ಮಾಡುವ ಕೆಲಸವನ್ನು ನಿರ್ವಹಿಸಬೇಕೆಂದೂ, ಗಂಗರಾಜರು ಗೊತ್ತುಪಡಿಸಿ, ತಾವು ಮಾಡಿದ ಏರ್ಪಾಟುಗಳೆಲ್ಲವನ್ನೂ, ದೊರೆಗೆ ವರದಿಮಾಡಿ, ಆತನ ಒಪ್ಪಿಗೆ ಪಡೆಯಲೆಂದು, ವಿಷ್ಣುವರ್ಧನನನ್ನು ಅರಮನೆಯಲ್ಲಿ ಹೋಗಿ ಕಂಡರು.

ಗಂಗರಾಜರು ತನ್ನನ್ನು ಕಾಣಲು ಅರಮನೆಯ ಬಳಿ ಬಂದುದನ್ನು ಮನೆವೆರ್ಗ್ಗಡೆಯವರು ಕಳುಹಿಸಿದ ಪರಿಚಾರಿಕರಿಂದ ತಿಳಿದ ವಿಷ್ಣುವರ್ಧನ ಪ್ರಧಾನಿಗಳನ್ನು ಅಂತಃಪುರಕ್ಕೇ ಕರೆದು ತರಲು ಅಪ್ಪಣೆ ಮಾಡಿದ.

ಆ ಹೊತ್ತಿನಲ್ಲಿ ಪತಿಯೊಂದಿಗೆ ಚದುರಂಗದಾಟವಾಡುತ್ತಿದ್ದ ಶಾನ್ತಲಾದೇವಿ ಗಂಗರಾಜರು ದೊರೆಯೊಡನೆ ಅವಸರದ ರಾಜಕಾರಣವನ್ನು ಚರ್ಚಿಸಲು ಬಂದಿರುವರೆಂಬುದನ್ನು ಕೇಳಿ ತಾನಿದ್ದು ಅವರ ಮಾತಿಗೆ ಆತಂಕ ತರಬಾರದೆಂದು ಯೋಚಿಸಿ, ಹಾಸು ಕಾಯಿಗಳನ್ನು ಬದಿಗಿರಿಸಿ—

'ಪ್ರಧಾನರೊಂದಿಗೆ ಮಾತುಕಥೆಗಳು ಮುಗಿದ ಬಳಿಕ ಮತ್ತೆ ಕಾಣಿಸಿಕೊಳ್ಳುತ್ತೇನೆ.'

—ಎಂದು ಅಲ್ಲಿಂದ ಹೋಗಲು ಯತ್ನಿಸಿದಳು.

ಆಕೆಯ ಮಾತು ಕೇಳಿ, ಏನೊ ಯೋಚನೆ ಮಾಡಿದ ವಿಷ್ಣುವರ್ಧನ

'ನೀನು ಹೋಗುವುದು ಬೇಡ ದೇವಿ. ಇಲ್ಲೇ ಇರು'

—ಎಂದ.

'ನಾನಿದ್ದರೆ ನಿಮ್ಮ ಮಾತು ಕಥೆಗಳಿಗೆ ಅಡ್ಡಿಯಾಗದೇ?'

'ಊಹೂ. ಮಾತು ಕಥೆಗಳಲ್ಲಿ ನಾನು ಲೆಕ್ಕಹಾಕಿರುವ ಮಾತೇನಾದರೂ ಬಂದರೆ, ನಿನಿಂದ ನನಗೆ ಸಹಾಯವಾಗಬಹುದು. ಆದ್ದರಿಂದ ನೀನು ಇರುವುದೇ ಒಳಿತು'

—ಎಂದು ಹೇಳಿ ಶಾನ್ತಲಾದೇವಿಯನ್ನು ತನ್ನ ಬಳಿಯಲ್ಲೇ ಉಳಿಸಿಕೊಂಡ ವಿಷ್ಣುವರ್ಧನ.

ಅವರಿಬ್ಬರೂ ಮಾತನಾಡುತ್ತಿರುವಾಗಲೇ ಪಡಿಯರತಿ, ಬಾಗಿಲಬಳಿ ಕಾಣಿಸಿಕೊಂಡು ಗಂಗರಾಜರು ಬಂದ ವಿಷಯ ತಿಳಿಸಿದಳು.

'ಒಳಗೆ ಬಿಡು.'

—ಎಂದು ಶಾನ್ತಲಾದೇವಿಯೇ ಪಡಿಯರತಿಗೆ ಅಪ್ಪಣೆ ಮಾಡಿದಳು. ಒಳಗೆ ಬಂದ ಗಂಗರಾಜರು, ದೊರೆಗೂ, ರಾಣಿಗೂ ವಂದಿಸಿ—

'ವಿಶ್ರಾಂತಿಯ ವೇಳೆಯಲ್ಲಿ ಬಂದು ಸನ್ನಿಧಾನಕ್ಕೆ ತೊಂದರೆ ಕೊಟ್ಟ ಹಾಗಾಯಿತೇನೊ? ಮಹಾರಾಜ್ಞಿಯವರು ಮನ್ನಿಸಬೇಕು.'

—ಎಂದ ಕೇಳಿದರು, ಶಾನ್ತಲಾದೇವಿಯಿತ್ತ ನೋಡಿ.

'ರಾಜ್ಯಕಾರ್ಯಕ್ಕೇ ನಮ್ಮ ಬಾಳನ್ನು ಮೀಸಲು ಮಾಡಿದ ಬಳಿಕ, ಅದರಲ್ಲಿ ಆ ಹೊತ್ತು, ಈ ಹೊತ್ತು ಎಂಬ ಭೇದವೆಲ್ಲಿಯದು? ಅಂಥ ಸಂಕೋಚಕ್ಕೆ ಕಾರಣವೇ ಇಲ್ಲ. ಬಂದ ಕಾರಣವೇನು ಹೇಳಿ.'

—ಎಂದ ವಿಷ್ಣುವರ್ಧನ.

'ಇಂದು ನೆರೆದ ಸಚಿವ, ದಂಡನಾಯಕರ ಸಭೆಯಲ್ಲಿ ಕೆಲವು ತೀರ್ಮಾನಗಳಾದವು. ಅದನ್ನು ತಮಗೆ ತಿಳಿಸಿ, ತಮ್ಮ ಅಭಿಪ್ರಾಯ ತಿಳಿಯಬೇಕೆಂದು ಬಂದೆ.'

—ಗಂಗರಾಜರು ತಾವು ಆ ಹೊತ್ತಿನಲ್ಲಿ ಬಂದುದಕ್ಕೆ ಕಾರಣವನ್ನು ತಿಳಿಸಿದರು, ದೊರೆ ತೋರಿಸಿದ ಆಸನದಲ್ಲಿ ಕುಳಿತು.

'ಸರಿಯೇ. ಸಚಿವ ಮಂಡಲಿಯಲ್ಲಿ ಏನು ತೀರ್ಮಾನವಾಯಿತು?'

'ತಲಕಾಡಿನ ದಿಗ್ವಿಜಯ ಸಂದರ್ಭದಲ್ಲಿ, ಯಾರು ಯಾರು ಎತ್ತೆತ್ತ ಕಡೆ ಹೋಗುವುದು, ಯಾವ ದಿಕ್ಕಿನ ದಾಳಿಗೆ ಯಾರು ಸೇನಾಧಿಪತಿಗಳು ಎಂಬ ವಿಚಾರದಲ್ಲಿ ಎಲ್ಲರ ಸಲಹೆಯನ್ನೂ ಹಡೆದು, ಒಂದು ನಿರ್ಧಾರಕ್ಕೆ ಬರಲಾಯಿತು....'

'ಹೇಳಿ-ಯಾರ ಭಾಗ್ಯ ಹೇಗೆ?'

—ಎಂದು ವಿಷ್ಣುವರ್ಧನ ಗಂಗರಾಜರು ನಿಲ್ಲಿಸಿದ ಮಾತನ್ನು ಮುಂದುವರಿಸಲು ಸೂಚಿಸಿದ.

ವಿಷ್ಣುವರ್ಧನನ ಅಪ್ಪಣೆಯಂತೆ ಗಂಗರಾಜರು ಸಚಿವಸಭೆಯಲ್ಲಾದ ಮಾತುಕಥೆಗಳನ್ನು ಸಂಗ್ರಹವಾಗಿ ವಿವರಿಸಿ, ಹೇಳಿದರು—

'ಯಾರೊಬ್ಬರಿಗೂ ಅನ್ಯಾಯವಾಗದಂತೆ, ಅಸಮಾಧಾನವಾಗದಂತೆ, ನಮ್ಮ ಬುದ್ಧಿಗೆ ತಿಳಿದಮಟ್ಟಿಗೆ ತೀರ್ಮಾನ ಮಾಡಿದೇವೆ.'

'ನಿಜ. ನಿಮ್ಮ ತೀರ್ಮಾನದಿಂದ ಯಾರಿಗೂ ಅನ್ಯಾಯವಾಗಿಲ್ಲ- ಒಬ್ಬರನ್ನು ಉಳಿದು.'

—ಗಂಗರಾಜರು ಹೇಳಿದುದನ್ನು ಕೇಳಿ ಅವರ ಮುಖವನ್ನೇ ನೋಡುತ್ತಾ ಹೇಳಿದ ವಿಷ್ಣುವರ್ಧನ.

ದೊರೆ ತಮ್ಮನ್ನು ನೋಡಿದ ರೀತಿಯನ್ನು ನೋಡಿ ಗಂಗರಾಜರಿಗೂ ಉಗುಳು ನುಂಗುವಂತಾಯಿಂತು. ಯಾರಿಗೆ ತಮ್ಮಿಂದ ಅಪಚಾರವಾಯಿತೋ ಎಂದು ಗಾಬರಿಯಾಯಿತು. ಆ ಭಯದಿಂದಲೇ—

'ಯಾರಿಗೆ?'

—ಎಂದು ಕೇಳಿದರು.

'ಎಲ್ಲರಿಗಿಂತ ಮುಖ್ಯವಾಗಿ, ಯಾರಿಗೆ ಮೊದಲು ಪಾಲು ಸಲ್ಲಬೇಕಾಗಿತ್ತೊ ಅವರನ್ನೇ ಮರೆತಿದ್ದೀರ.'

'ಅಂದರೆ.... ಯಾರಿಗೆ? ನನಗೆ ತಿಳಿದಂತೆ ಯಾರನ್ನೂ ಮರೆತಿಲ್ಲ.'

'ಮರೆತಿದ್ದೀರ.'

'ಯಾರನ್ನು?'

'ನಮ್ಮನ್ನು! ಸಭೆಯಲ್ಲಿ ಮಹಾ ಸೇನಾಧಿಪತ್ಯಕ್ಕೆ ನಿಮ್ಮ ಹೆಸರು ಸೂಚಿಸಿದ ಸಚಿವ ಪುಣಿಸಮಯ್ಯನವರಿಗೆ, ನಿಮ್ಮನ್ನೇ ಹೊಗಳಿ ಹಿರಿಯರೆಂದ ಕುಮಾರ ವಿಷ್ಣುವಿಗೆ- ಎಲ್ಲರಿಗೂ, ಈ ದಿಗ್ವಿಜಯ ಯಾತ್ರೆಯಲ್ಲಿ ಪಾಲುಕೊಟ್ಟು, ನಮ್ಮನ್ನು ಮಾತ್ರ ಮರೆತುಬಿಡಬಹುದೇ ಪ್ರಧಾನಿಗಳೇ? ನಿಮ್ಮಿಂದ ಇಂಥ ಅನ್ಯಾಯವಾಗುವುದೆಂದು ನಂಬಿದ್ದರೆ, ನಿಮಗೇ ಸೇನಾಧಿಪತ್ಯ ಕಟ್ಟುವ ತಪ್ಪು ನಮ್ಮಿಂದ ಆಗುತ್ತಿರಲಿಲ್ಲ. ಈಗಲೂ ನೀವು ಈ ತಪ್ಪನ್ನು ತಿದ್ದಿಕೊಳ್ಳುವುದು ಲೇಸು.'

—ಎಂದು, ಹೆಚ್ಚು ಸಿಟ್ಟು ಬಂದಂತೆ, ಕಣ್ಣುಗಳನ್ನು ಕೆಂಪಗೆ ಮಾಡಿಕೊಂಡು ಹೇಳಿದ ವಿಷ್ಣುವರ್ಧನ.

ಆತನ ಸಿಟ್ಟನ್ನು ಕಂಡು, ಗಂಗರಾಜರಿಗೆ ನಾಲಿಗೆಯ ದ್ರವ ಒಣಗುವುದು ಇರಲಿ, ಬಳಿಯಲ್ಲಿದ್ದ ಶಾನ್ತಲಾದೇವಿಗೂ ಬೆಚ್ಚಿ ಬೀಳುವಂತಾಯಿತು. ದೊರೆಯ ಸಿಟ್ಟನ್ನು ನೋಡಿ, ಗಂಗರಾಜರ ಬಾಯಿಂದ ಮಾತೇ ಹೊರಡದುದನ್ನು ಕಂಡ ಶಾನ್ತಲಾದೇವಿಯೇ—

'ನೀವಿಷ್ಟು ಸಿಟ್ಟಾದರೆ ಹೇಗೆ? ಅವರು ಹಾಗೇಕೆ ಮಾಡಿದರೋ ವಿವರಿಸಲು ಅವಕಾಶವನ್ನಾದರೂ ಕೊಡಿ'

—ಎಂದು ಗಂಗರಾಜರ ಪರ ವಹಿಸಿ ಬೇಡಿದಳು.

'ನಿನಗೆ ತಿಳಿಯದು ದೇವಿ. ಪ್ರಚಂಡ ದಂಡನಾಯಕರು, ಚೋಳರನ್ನು ಮಣಿಸಬಲ್ಲ ಬಲ ಈ ತೋಳುಗಳಲ್ಲಿ ಇಲ್ಲವೆಂದೇ ನಂಬಿದಾರೆ. ಇಲ್ಲವಾದರೆ ಅವರಿಂದ ಇಂಥ ಅನ್ಯಾಯವಾಗುತ್ತಿತ್ತೇ?'

'ಕ್ಷಮಿಸಬೇಕು.... ಮಹಾಪ್ರಭುಗಳು ಕ್ಷಮಿಸಬೇಕು... ನಮ್ಮ ತಾಯಂದಿರ ಶ್ರೀಪಾದದಾಣೆಗೂ ನನ್ನಲ್ಲಿ ಅಂಥ ಭಾವನೆಯಿಲ್ಲ. ಪ್ರಭುಗಳ ಪರಾಕ್ರಮವನ್ನು ಸಂದೇಹಿಸುವಂಥ ಅಲ್ಪಮತಿ ನಾನಲ್ಲ.'

—ವಿಷ್ಣುವರ್ಧನ ತಮ್ಮ ಮೇಲೆ ಹೊರೆಸಿದ ಪ್ರಬಲ ಆಪಾದನೆಯ ಇದಿರು, ಕಂಗೆಟ್ಟು, ಕಣ್ಣಿನಲ್ಲಿ ನೀರುತುಂಬಿಕೊಂಡು, ಕಳಕಳಿಯಿಂದ ಹೇಳಿದರು ಗಂಗರಾಜರು.

'ಹಾಗಾದರೆ ನಿಮ್ಮ ಇಂದಿನ ತೀರ್ಮಾನಕ್ಕೆ ಏನು ಸಮಾಧಾನ?'

'ಹೇಳುತ್ತೇನೆ ಪ್ರಭು. ತಾಯೀ....ನಮ್ಮ ತೀರ್ಮಾನದಲ್ಲಿ ತಪ್ಪಿದ್ದರೆ ತಾನೇ ದಂಡಿಸಿ ಹೇಳಬೇಕು.'

—ಎಂದು ಶಾನ್ತಲಾದೇವಿಯತ್ತ ನೋಡಿದರು ಗಂಗರಾಜರು.

'ಮಗಳನ್ನು ತಾಯಿ ಎನ್ನಬಾರದು ಗಂಗರಾಜರೇ, ನೀವೇಕೆ ಈ ತೀರ್ಮಾನಮಾಡಿದಿರೋ ನಿರ್ಭಯವಾಗಿ ಹೇಳಿ. ಪ್ರಭುಗಳಿಗೆ ಸಿಟ್ಟಿನಲ್ಲಿ ತಿಳಿಯದೆ. ಹೋದರೂ ಪ್ರಬಲವಾದ ಕಾರಣವಿಲ್ಲದೆ, ನೀವು ಯಾವ ತೀರ್ಮಾನವನ್ನೂ ಮಾಡುವುದಿಲ್ಲವೆಂಬುದನ್ನು ನಾನು ಬಲ್ಲೆ.'

—ಎಂದು ಶಾನ್ತಲಾದೇವಿ ಗಂಗರಾಜರಿಗೆ ಅಭಯ ನೀಡಿದಳು.

'ಅಭಯ ನೀಡುವಾಕೆ ಮಗಳಾದರೂ, ಆಕೆ ಮಾತೃ ಸ್ವರೂಪಿಯೇ. ಇಂದು ನನಗೆ ನೀವೇ ಶರಣು. ನಾನಾಡುವ ಮಾತನ್ನು ಕೇಳಿ, ನನ್ನ ಅಭಿಪ್ರಾಯವನ್ನು ಪ್ರಭುಗಳಿಗೆ ನೀವೇ ವಿವರಿಸಬೇಕು.'

'ಅದೇನು ಹೇಳಿ.'

'ತಾಯಿ— ನನಗಾಗಲಿ, ಸಚಿವ ಮಂಡಲಿಯಲ್ಲಿರುವ ಯಾರೊಬ್ಬರಿಗೇ ಆಗಲಿ, ಪ್ರಭುಗಳ ಪರಾಕ್ರಮದ ವಿಷಯದಲ್ಲಿ ಎಳ್ಳುಕಾಳು ಮುಳ್ಳುಮೊನೆಯಷ್ಟೂ ಸಂದೇಹವಿಲ್ಲ. ಅಂಥ ಮಾತು ಯಾರ ಬಾಯಲ್ಲಾದರೂ ಬಂದಿದ್ದರೆ, ಅವರ ನಾಲಿಗೆಗೆ ಗರ ಬಡಿಯಲಿ. ನಾವು ಹೀಗೆ ಮಾತನಾಡಿಕೊಳ್ಳುವುದಕ್ಕೆ ನಿಜವಾದ ಕಾರಣ ಇದು— ಈಗಿನದು ಪ್ರಭುಗಳು ಪಟ್ಟಕ್ಕೆ ಬಂದ ಹೊಸಪರಿ. ಅಂಥ ವೇಳೆಯಲ್ಲೇ ಈ ಮಹಾ ಸಂಗ್ರಾಮ ಕಾರ್ಯ ಒದಗಿ ಬಂದಿದೆ. ಹೊಯ್ಸಳ ಸಿಂಹಾಸನಕ್ಕೆ ಸುತ್ತು ಮುತ್ತಲೂ ಶತ್ರುಗಳಿರುವ ವಿಷಯ ಪ್ರಭುಚಿತ್ತಕ್ಕೂ ವೇದ್ಯವಾಗಿಯೇ ಇದೆ. ಇಂಥ ಹೊತ್ತಿನಲ್ಲಿ ಪ್ರಭುಗಳು, ರಾಜಧಾನಿಯನ್ನು ಬಿಟ್ಟು, ರಣಾಂಗಣಕ್ಕೆ ತೆರಳಿದರೆ, ಅಲ್ಲಸಲ್ಲದ ಜನ ಏನಾದರೂ ಕೆಟ್ಟ ಸುದ್ದಿ ಹೆಬ್ಬಿಸಿ, ರಾಜ್ಯದಲ್ಲಿ ಅಶಾಂತಿಯನ್ನು ಹುಟ್ಟಿಸಬಹುದು....'

'ಅಂದರೆ ರಾಜಧಾನಿಯಲ್ಲಿರುವ ಜನರ ನಿಷ್ಠೆಯ ವಿಷಯದಲ್ಲಿ, ಮಾಂಡಲಿಕರ ಭಕ್ತಿಯಲ್ಲಿ ನಿಮಗೆ ಸಂಶಯವೇ ಪ್ರಧಾನಿಗಳೇ? ಯಾರ ವಿಷಯದಲ್ಲಿ ನಿಮಗೆ ಅನುಮಾನ?'

—ಶಾನ್ತಲಾದೇವಿ ಕೇಳಿದಳು.

'ಇಂಥವರ ವಿಷಯದಲ್ಲಿ ಅನುಮಾನ ಎಂದು ನಾನು ಹೇಳುವುದಿಲ್ಲ ತಾಯಿ. ಆದರೂ ನಾವು ಇರಬೇಕಾದ ಎಚ್ಚರಿಕೆಯನ್ನು ಮರೆಯಬಾರದು. ಅತಿ ಅನುಮಾನದಂತೆ, ಅತಿ ನಂಬಿಕೆಯೂ ಅಪಾಯಕಾರಿ. ಆದುದರಿಂದಲೇ, ನಾವು- ಇತರರಿಗೆ ಸಲಹೆ ಹೇಳುವ ಬಹು ಹಿರಿದಾದ ಭಾರವನ್ನು ಹೊತ್ತಿರುವವರು, ಹತ್ತು ಕಡೆಯ ಯೋಚನೆಮಾಡಿ ಮಾತನಾಡಬೇಕಾಗುತ್ತದೆ. ಸಂಶಯಕ್ಕೆ ಕಾರಣವಿಲ್ಲದೆಡೆಯಲ್ಲೂ, ಕಾರಣವಿದೆಯೇನೋ ಎಂದು ಊಹಿಸಬೇಕಾಗುತ್ತದೆ. ಆದುದರಿಂದ ಇಂಥ ವೇಳೆಯಲ್ಲಿ ನಾವು ನಮ್ಮನ್ನು ನಂಬಿದವರಿಂದ ನಿರೀಕ್ಷಿಸುವುದು- ನಮ್ಮ ವಿಷಯದಲ್ಲಿ ವೃಥಾ ಅಸಮಾಧಾನಕ್ಕೆ ಎಡೆ ಕೊಡಬಾರದೆಂಬುದುದಷ್ಟನ್ನೇ. ಪ್ರಭುಗಳನ್ನು ನಾವು ಪ್ರಾರ್ಥಿಸುವುದೂ ಇಷ್ಟೇ-ತಲಕಾಡಿನ ಸಮರದಷ್ಟೇ,

ರಾಜ್ಯರಕ್ಷಣೆಯ ಕಾರ್ಯವೂ ಈ ಹೊತ್ತಿನಲ್ಲಿ ಅತ್ಯಗತ್ಯವಾದುದು. ಅರಿಮರ್ಧನದ ಅಲ್ಪ ಕಾರ್ಯವನ್ನು ನಮ್ಮಂಥ ಊಳಿಗದವರಿಗೆ ನೇಮಿಸಿ, ಪ್ರಭುಗಳು ಸಿಂಹಾಸನ ರಕ್ಷಣೆಯ ಕಾರ್ಯವನ್ನು ಕೈಗೊಳ್ಳಬೇಕು.'

—ಗಂಗರಾಜರು ತಾವು ಕೈಗೊಂಡ ತೀರ್ಮಾನಕ್ಕೆ ಕಾರಣವನ್ನು ವಿವರಿಸಿದರು.

ಗಂಗರಾಜರ ವಿವರಣೆಗೆ, ವಿಷ್ಣುವರ್ಧನ ಪ್ರತಿಮಾತನ್ನು ನುಡಿಯುವ ಮೊದಲೇ, ಶಾನ್ತಲಾದೇವಿ ತಾನೇ ಮಾತಿಗೆ ಮುಂದಾಗಿ—

'ಪ್ರಭುಗಳು ನನ್ನನ್ನು ಮನ್ನಿಸಬೇಕು. ಈ ಸಂದರ್ಭದಲ್ಲಿ ಪ್ರಧಾನರನ್ನು ನಾನು ಕೇಳಬೇಕಾದ ಪ್ರಶ್ನೆಯೊಂದಿದೆ.'

—ಎಂದಳು.

'ಕೇಳಿ ತಾಯಿ.'

'ಪ್ರಭುಗಳು ರಾಜಧಾನಿಯನ್ನು ಬಿಟ್ಟರೆ, ರಾಜ್ಯ ಅರಕ್ಷಿತವಾಗುವುದೆಂದು ನಿಮ್ಮ ಭಾವನೆಯೇ ಪ್ರಧಾನಿಗಳೇ?'

'ಅರಕ್ಷಿತವಾಗುವುದೆಂದು ನಾನು ಹೇಳಲಾರೆ ತಾಯಿ, ಆದರೆ ಸ್ವಲ್ಪ ಮಟ್ಟಿಗೆ ಅಭದ್ರವಾಗಬಹುದು.'

'ಪ್ರಧಾನಿಗಳೇ ನೀವು ಪ್ರಭುಗಳಿಗಷ್ಟೇ ಅಲ್ಲ, ನಮಗೂ ಅವಮಾನ ಮಾಡುತ್ತಿದ್ದೀರ.'

—ಗಂಭೀರವಾಗಿ ಹೇಳಿದಳು ಶಾನ್ತಲಾದೇವಿ.

ಸುಳಿವುದೋರದೆ ಬಂದ ಈ ಆಕಸ್ಮಿಕ ಸಿಡಿಲಾಘಾತದಿಂದ ಗಂಗರಾಜರು ತತ್ತರಿಸಿ ಹೋದರು.

’ನಿಮಗೆ.... ನಾನು.... ಅವಮಾನ ಮಾಡುವುದೆ!.... ಇದೇನು ಮಾತಾ ತಾಯಿ....’

’ನಿಜ-ಪ್ರಧಾನಿಗಳೇ. ಪ್ರಭುಗಳೊಬ್ಬರೇ ರಾಜಧಾನಿಯ ರಕ್ಷಣೆಗೆ ಸಮರ್ಥರು ಎಂದಾಗ ನಾವು ಅಸಮರ್ಥರು ಎಂದು ಹೇಳಿದಂತಾಗಲಿಲ್ಲವೇ? ನೀವು ಕೈಲಾಗದವರು ಹೇಡಿಗಳು ಎಂದು ಬಾಯಿಬಿಟ್ಟು ಹೇಳಬೇಕೇ? ನಮ್ಮ ಶಕ್ತಿಯ ವಿಷಯದಲ್ಲಿ ನಿಮಗೆ ಸಂದೇಹವಿದ್ದರೂ ನಮಗೆ ಸಂದೇಹವಿಲ್ಲ. ನಮ್ಮ ಅಪ್ಪಾಜಿಯವರು ನಮಗೆ ನರ್ತನ ವಿದ್ಯೆಯನ್ನಷ್ಟೇ ಅಲ್ಲ ಹೇಳಿಸಿರುವುದು-ಶಸ್ತ್ರವಿದ್ಯೆಯನ್ನೂ ಸ್ವತಃ ಕಲಿಸಿದಾರೆ. ಪ್ರಭುಗಳೂ ನಮ್ಮನ್ನು ಶೃಂಗಾರ ಸರೋವರದ ಹಂಸವಾಗಿ ಬೆಳೆಸಿಲ್ಲ. ಆಪತ್ತಿನ ಸಮಯದಲ್ಲಿ ಆತ್ಮವನ್ನು, ಅರಮನೆಯನ್ನು ಹೇಗೆ ರಕ್ಷಿಸಿಕೊಳ್ಳಬೇಕು ಎಂಬ ರಕ್ಷಣಾತಂತ್ರವನ್ನು ಕಲಿಸಿದಾರೆ. ಹೊತ್ತು ಬಿದ್ದರೆ, ನಮ್ಮ ಅಂತಃಪುರದ ದಾಸಿಯರೇ, ಶಸ್ತ್ರ ಧರಿಸಿ ರಾಜಧಾನಿಯನ್ನು ರಕ್ಷಿಸಬಲ್ಲರು. ಆದುದರಿಂದ, ಈ ಅಲ್ಪ ಕಾರಣಕ್ಕಾಗಿ ಪ್ರಭುಗಳ ಸಮರೇಚ್ಛೆಗೆ ಅಡ್ಡಿಯಾಗುವುದು ಅನಗತ್ಯ.’

ಶಾನ್ತಲಾದೇವಿ ಆಡಿದ ಮಾತುಗಳನ್ನು ಕೇಳಿ ಗಂಗರಾಜರಿಗೆ ಎಷ್ಟು ಆಶ್ಚರ್ಯವಾಯಿತೋ, ವಿಷ್ಣುವರ್ಧನನಿಗೆ ಅಷ್ಟೇಮಟ್ಟಿಗೆ ಹೆಮ್ಮೆಯಿಂದ ಎದೆ ಬಿರಿಯುವಂತಾಯಿತು.

’ಭಲೆ ಭಲೆ-ಸರಿಯಾದದ್ದನ್ನೇ ಆಡಿದೆ ದೇವಿ. ತಮ್ಮ ಯಾವುದೊ ಸಂದೇಹಕ್ಕಾಗಿ, ನಮ್ಮ ’ಆಳಿಂ ಮುನ್ನಿರಿವ’ ಎಂಬ ಬಿರುದನ್ನು ಕೇಳುವ ಕಿವಿಯ ಹೊರೆಯಾಗಿ ಮಾಡಲೆಳೆಸಿದ ಪ್ರಧಾನರ ಪ್ರಯತ್ನಕ್ಕೆ ಸರಿಯಾಗಿಯೇ ಉತ್ತರ ಕೊಟ್ಟೆ, ಇನ್ನೇನು ಪ್ರಧಾನಿಗಳೇ-ನಿಮ್ಮ ಸಂದೇಹ ತೀರಿತೇ?’

—ಎಂದು ಗಂಗರಾಜರತ್ತ ತಿರುಗಿ ಕೇಳಿದ ವಿಷ್ಣುವರ್ಧನ.

ಒಂದು ಗಳಿಗೆ ಸುಮ್ಮನಿದ್ದು, ಶಾನ್ತಲಾದೇನಿಯ ವಿಷಯದಲ್ಲಿ ಮೂಡಿ ಬಂದ ಮೆಚ್ಚುಗೆಯನ್ನು ಹಾಗೇ ತಡೆಹಿಡಿದು ಹೇಳಿದರು ಗಂಗರಾಜರು:

'ಅಶುಭವನ್ನು ನುಡಿಯಬಾರದು ಅಶುಭವನ್ನು ಚಿಂತಿಸಬಾರದು, ಎಂದು ಹಿರಿಯರು ಹೇಳುತ್ತಾರೆ. ಆದರೂ ಈ ಸಂದರ್ಭದಲ್ಲಿ ನಮ್ಮ ಭಯವನ್ನು ಬಾಯಿ ಬಿಟ್ಟು ಆಡದೆ ವಿಧಿಯಿಲ್ಲ. ಕಳೆದ ಕೆಲವು ಸಂವತ್ಸರಗಳಲ್ಲಿ ಹೊಯ್ಸಳ ವಂಶದ ಮೂರು ಹಿರಿಯ ತಲೆಗಳನ್ನು ಕಳೆದುಕೊಂಡ ನಮಗೆ ವಿಧಿ ಮತ್ತೇನು ಹೊಂಚು ಹೂಡಿದೆಯೋ ಎಂಬ ಭೀತಿ ಬಾಧಿಸುತ್ತಿದೆ ತಾಯಿ. ಎಂತಲೇ ಅಲ್ಪ ಅಪಾಯಸೂಚನೆ ಇರುವೆಡೆಯಲ್ಲೂ ಪ್ರಭುಗಳು ಕಾಲಿಡುವುದು ನಮಗೆ ಒಪ್ಪಿಗೆಯಿಲ್ಲ.'

—ಹೇಳಬಾರದ ಮಾತನ್ನು ಹೇಳಲೇಬೇಕಾಗಿ ಬಂದುದಕ್ಕಾಗಿ ಮೂಡಿದ ಪಶ್ಚಾತ್ತಾಪ ತುಂಬಿದ ಧ್ವನಿಯಲ್ಲಿ ತಡೆತಡೆದು ಹೇಳಿದರು ಗಂಗರಾಜರು.

'ನಿಮ್ಮ ರಾಜ್ಯದ ಭಾಗ್ಯದ ವಿಷಯದಲ್ಲಿ ನಿಮಗೇನೇ ಅನುಮಾನ, ಅಪನಂಬಿಕೆಗಳಿದ್ದರೂ, ನಮಗೆ ನಮ್ಮ ಕುಂಕುಮ ಭಾಗ್ಯದಲ್ಲಿ ನಂಬಿಕೆಯಿದೆ ಪ್ರಧಾನರೇ. 'ಹಾವು ಕಂಡವನು ಹಗ್ಗಕ್ಕೆ ಹೆದರಿದ' ಎಂಬ ನಾಣ್ಣುಡಿ, ನಿಮ್ಮಂಥವರ ವಿಚಾರಕ್ಕೆ ಅನ್ವಯಿಸಬಾರದು. ಪ್ರಭುಗಳಿಗೆ, ಈ ಸಮರದಲ್ಲಿ ಭಾಗವಹಿಸಬೇಕು ಎಂಬ ವಿಷಯದಲ್ಲಿ ಎಷ್ಟು ಉತ್ಕಟೇಚ್ಛೆಯಿದೆಯೆಂಬುದನ್ನು ನಾನು ಬಲ್ಲೆ. ನನ್ನ ದೊರೆ, ಚೋಳರನ್ನು ತುಳಿದು, ಅವರ ಕೋಟೆಯ ಮೇಲೆ ಕೈಯಾರ ತಮ್ಮ ಕೀರ್ತಿಧ್ವಜವನ್ನು ಹಾರಿಸಬೇಕೆಂಬ ಬಯಕೆ ನನಗೂ ಅವರಷ್ಟೇ ಇದೆ. ದೊರೆಯ ಪತ್ನಿ ಎನಿಸಿಕೊಳ್ಳುವುದಕ್ಕಿಂತ ವೀರನ ಪತ್ನಿ ಎನಿಸಿಕೊಳ್ಳುವುದು ಹೆಚ್ಚಿನ ಹೆಮ್ಮೆ. ನನ್ನ ಪ್ರಾಣಪಕ್ಷಿ ಸಮರಾಕಾಶದಲ್ಲಿ ವಿಹರಿಸಿ ಬರುವುದಾದರೆ, ಹಾರಾಡಿ ಬರಲಿ. ಆದರೆ ಅವರೊಂದಿಗೆ ಹೋಗುವ ನಿಮ್ಮನ್ನು ಕೇಳುವುದಿಷ್ಟೇ—'

'ಏನು ಹೇಳಿ ತಾಯಿ?'

'ಚೋಳರ ಕೋಟೆಯನ್ನು ಗೆದ್ದ ಇವರು ಅದಿಯಮನ ಅಂತಃಪುರದ ಸೊಗೆಗಣ್ಣಿನ ಚೆಲುವೆ ಯಾರಾದರೊಬ್ಬಳಿಗೆ ಸೆರೆಯಾಗದಂತೆ, ಎಚ್ಚರದಿಂದ ಹಿಂದಕ್ಕೆ ಕರೆತಂದು ಅಂತಃಪುರಕ್ಕೆ ಬಿಡಿ. ಅಷ್ಟೆ.'

—ವಿಷ್ಣುವರ್ಧನನತ್ತ ನೋಡಿ ನಗುತ್ತಾ ಹೇಳಿದಳು ಶಾನ್ತಲಾದೇವಿ.

ಆಕೆಯಾಡಿದ ಮಾತನ್ನು ಕೇಳಿ ವಿಷ್ಣುವರ್ಧನನೂ ನಕ್ಕ. ಗಂಗರಾಜರೂ ಆ ನಗೆಯಲ್ಲಿ ಬೆರೆಯದೆ ಹೋಗಲಿಲ್ಲ.

'ಆಯಿತೇ ಪ್ರಧಾನರೇ–ನಿಮ್ಮ ಅನುವರಾನಗಳೆಲ್ಲಾ ಪರಿಚ್ಛೇದವಾದವೇ? ಇನ್ನಾದರೂ ನಮಗೆ, ನಿಮ್ಮೊಂದಿಗೆ ಬರಲು ಅನುಮತಿ ನೀಡುತ್ತೀರಾ?'

'ತಮಗೆ ನಾನು ಅನುಮತಿ ಕೊಡುವುದೇ ಪ್ರಭು? ತಮ್ಮ ಅಭಿಪ್ರಾಯ ನನಗೆ ಅಪ್ಪಣೆ. ನನ್ನ ಮನದಲ್ಲಿದ್ದ ಮಾತನ್ನು ಮುಚ್ಚುಮರೆ ಮಾಡದೆ ಆಡಿದ್ದಕ್ಕಾಗಿ ನನ್ನನ್ನು ಮನ್ನಿಸಬೇಕು. ಆದರೆ ಪ್ರಭುಗಳಲ್ಲಿ ಇಲ್ಲೇ ಮನವಿಮಾಡಿಕೊಳ್ಳಬೇಕಾದ ವಿಷಯವೊಂದಿದೆ—'

'ಏನು?'

'ಸಮರಾಂಗಣದಲ್ಲಿ ತಮ್ಮ ರಕ್ಷಣೆಗೆ ನಾನು ಮಾಡಿದ ಕ್ರಮಗಳನ್ನು ತಾವು ಮುರಿಯಬಾರದು...'

'ಆಯಿತು....'

'ಮತ್ತೆ....'

'ಮತ್ತೇನು?'

'ಅದಿಯಮನ ತಲೆ ನಮಗೆ ಮೀಸಲು ಎಂಬುದನ್ನು ಪ್ರಭುಗಳು ರಣೋತ್ಸಾಹದಲ್ಲಿ ಮರೆಯಬಾರದು....'

'ಅದೂ ಆಗಲಿ-ಈಗಲಾದರೂ ನಿಮಗೆ ಸಮಾಧಾನವಾಯಿತೇ?'

'ಆಯಿತು ಪ್ರಭು.'

'ಅಂತೂ ನಮ್ಮನ್ನು ನಿಮ್ಮೊಂದಿಗೆ ಕರೆದೊಯ್ಯುವುದಕ್ಕೆ, ಈ ಬನವಾಸಿಯ ಹುಡುಗಿ ಹೇಳಬೇಕಾಯಿತಲ್ಲವೇ ಪ್ರಧಾನಿಗಳೇ. ಅಂತೂ ಹೊರಗಿನಿಂದ ಬಂದವಳ ಇದುರಿಗೆ, ನಿಮ್ಮವರಾದ ನಮ್ಮನ್ನೇ ಕಡಮೆ ಮಾಡಿದಿರಿ.'

—ಎಂದ ವಿಷ್ಣುವರ್ಧನ ನಗುತ್ತಾ.

'ನಾರು ಸ್ವರ್ಗಕ್ಕೆ ಹೋದರೆ, ಹೂವು ಹಿಂದೆ ಉಳಿಯುತ್ತದೆಯೇ-ಕೇಳಿ-ಪ್ರಧಾನಿಗಳೇ?'

—ಶಾನ್ತಲಾದೇವಿಯೂ ನಗುತ್ತಾ ಆಡಿದಳು.

ಆ ದಂಪತಿಗಳ ಪ್ರೇಮ ಅಭಿಮಾನಗಳನ್ನು ನೋಡಿ ಗಂಗರಾಜರಿಗೆ ಎದೆಯಲ್ಲಿ ಜೇನು ಮಳೆ ಕರೆದಂತಾಯಿತು.

'ತಾಯಿ-ಮಾತರಿಯದ ಮೂಢ ನಾನೇನು ಹೇಳಬಲ್ಲೆ? ನನಗೆ ಅನಿಸುವುದಿಷ್ಟೇ-ನಿಮ್ಮನ್ನು ಅಸ್ಥಾನ ಕವಿಗಳು 'ಸದರ್ಥ ಸರಸ ಸಮಯೋಚಿತ ವಚನ ಮಧುರ ರಸಸ್ಯಂದಿ ವದನಾರವಿಂದೆ' ಎಂದು ಕರೆದದ್ದು ಅತಿಶಯೋಕ್ತಿಯಲ್ಲ. ಅಪ್ಪಣೆಯಾದರೆ ನಾನಿನ್ನು ಬರುತ್ತೇನೆ. ಆಸ್ಥಾನ ಜ್ಯೋತಿಷ್ಯರನ್ನು ಕಂಡು ಯುದ್ಧಕ್ಕೆ ತೆರಳುವ ಮುಹೂರ್ತ ನಿಶ್ಚಯಮಾಡಿಸಿ, ಮತ್ತೆ ಕಾಣುತ್ತೇನೆ.'

—ಎಂದು ಹೇಳಿ ಆ ದಂಪತಿಗಳಿಬ್ಬರಿಗೂ ವಂದಿಸಿ, ಗಂಗರಾಜರು ಅಂತಃಪುರದಿಂದ ತೆರಳಿದರು.

ಗಂಗರಾಜರು ಕಣ್ಣು ಮರೆಯಾಗುವವರೆಗೂ ಸುಮ್ಮನಿದ್ದ ಶಾನ್ತಲಾದೇವಿ, ಬಳಿಕ ಪತಿಯ ಬಳಿ ಸಾರಿ—

'ಪ್ರಧಾನರ ಕೈಲಿ ಮಾತಾಳಿ ಎಂದು ಅನ್ನಿಸುವುದಕ್ಕೇ ನನ್ನನ್ನು ಇಲ್ಲಿ ಬೇಡವೆಂದರೂ ನಿಲ್ಲಿಸಿಕೊಂಡದ್ದು?'

—ಎಂದು ಕೇಳಿದಳು ಹುಸಿ ಮುನಿಸಿನಿಂದ.

'ಮತ್ತೆ ನಿನ್ನ ನಾಲಗೆಯ ಕೊರೆತಕ್ಕೆ ನನ್ನ ಕಿವಿಯೇ ಮೀಸಲಾಗಬೇಕೇ? ಅದು ಹೇಗಾದರಾಗಲಿ-ಅಂತೂ ನನ್ನ ದಾಳ, ಬಯಸಿದ ಗರವನ್ನೇ ಉರುಳಿಸಿತು.'

'ಅಂದರೆ....'

'ಗಂಗರಾಜರ ಮಂತ್ರಿ, ನನ್ನ ಕಾಲಾಳಿನ ಇದಿರು ಸೋತು ಹೋದ, ಶಾನ್ತಲಾ'

'ಅಂದರೆ-ಆ ಸಿಟ್ಟು ನಿಮ್ಮ ಕಾಲಾಳೇ? ಅಬ್ಬಾ-ಎಂಥ ಸಿಟ್ಟು ನಿಮ್ಮದು. ಪಾಪ-ಪ್ರಧಾನಿಗಳು ಬೆವೆತು ಬಿಟ್ಟರು. ನೀವಷ್ಟು ಸಿಟ್ಟಾದರೆ ಅವರು ಸೋಲದೆ ಮತ್ತೇನು ಮಾತಾಡುತ್ತಾರೆ. ನನಗೇ ಎಲ್ಲಿಯಾದರೂ ಓಡಿ ಹೋಗಬೇಕು ಎಂಬಷ್ಟು ಭಯವಾಗಿತ್ತು. ಹಿರಿಯರ ಮೇಲೆ ಅಷ್ಟು ಸಿಟ್ಟಾಗುವುದುಂಟೆ? ಗಂಗರಾಜರು ಏನು ಅಂದುಕೊಂಡರೋ.'

'ನಾನು ನಿಜವಾಗಿಯೂ ಅಷ್ಟು ಸಿಟ್ಟಾದೆ ಎಂದು ನೀನೂ ನಂಬಿದೆಯಾ?'

'ಮತ್ತೆ?'

'ಅಂಥ ತಪ್ಪು ಎಂದೂ ನನ್ನಿಂದ ಆಗದು. ಸಿಟ್ಟಾದಂತೆ ಅಭಿನಯಿಸಿದ್ದು ನಿನ್ನನ್ನು ಇಲ್ಲಿ ಇರು ಎಂದದ್ದು ಎಲ್ಲಾ ಒಂದೇ ಉದ್ದೇಶಕ್ಕಾಗಿ.'

'ಅಂದರೆ.'

—ವಿಷ್ಣುವರ್ದ್ವನ ಆಡಿದುದನ್ನು ಕೇಳಿ, ಚಕಿತಳಾಗಿ ಕೇಳಿದಳು ಶಾನ್ತಲಾದೇವಿ.

'ಗಂಗರಾಜರಿಗೆ ನನ್ನನ್ನು ಯುದ್ಧರಂಗಕ್ಕೆ ಕರೆದೊಯ್ಯುವುದು ಇಷ್ಟವಿರಲಿಲ್ಲ. ಆ ಸೂಕ್ಷ್ಮ ನನಗೆ ತಿಳಿದಿತ್ತು. ಅದಕ್ಕೇ ನಿನ್ನನ್ನು ಇರು ಎಂದದ್ದು.'

'ಏಕೆ?'

'ಈಗ ಆಡಿದೆಯಲ್ಲಾ ಆ ಮಾತನ್ನು ಆಡಿ ಗಂಗರಾಜರನ್ನು ಸೋಲಿಸಲಿಕ್ಕೆ.'

'ಹಾಗಾದರೆ ಅಷ್ಟು ಸಿಟ್ಟೇಕೆ ಆಗಬೇಕಾಗಿತ್ತು?'

'ನಿನ್ನ ಬಾಯಿಂದ ಈಗಾಡಿದ ಮಾತು ಹೊರಡಿಸಲಿಕ್ಕೆ. ನನ್ನ ಸಿಟ್ಟಿನಿಂದ ಗಂಗರಾಜರನ್ನು ಉಳಿಸಲಾದರೂ ನೀನು ಹೀಗೇ ಮಾತಾಡುತ್ತೀಯ ಎಂದು ನಾನು ಊಹಿಸಿದ್ದೆ; ಹಾಗಾಯಿತು.'

—ಎಂದು ನಕ್ಕ ವಿಷ್ಣುವರ್ಧನ.

'ಒಂದು ವೇಳೆ-ನಾನು ಗಂಗರಾಜರ ಪಕ್ಷಕ್ಕೇ ಸೇರಿದ್ದರೆ....'

'ಊಹೂ, ಆ ಊಹೆಗೆ ಅವಕಾಶವೇ ಇರಲಿಲ್ಲ.'

'ಏಕೋ?'

'ನಿನ್ನ ಭಾಗ್ಯದಲ್ಲಿ ನಿನಗೆಷ್ಟು ನಂಬಿಕೆಯಿದೆಯೋ, ನನ್ನ ಭಾಗ್ಯದಲ್ಲಿ ನನಗೂ ಅಷ್ಟೇ ನಂಬಿಕೆಯಿದೆ. ಶಾನ್ತಲಾ, ಹಂಸ ಸಮೂಹದಲ್ಲಿ ಎಂದಾದರೂ ಕಾಗೆ ಸೇರಿತೇ?'

ತನ್ನ ವಿಷಯದಲ್ಲಿ ವಿಷ್ಣುವರ್ಧನ ಆಡಿದ ಅಭಿಮಾನದ ಮಾತನ್ನು ಕೇಳಿ, ಶಾನ್ತಲಾದೇವಿಯ ಹೃದಯ ಪ್ರೇಮ, ಅಭಿಮಾನದಿಂದ ಬೀಗಿತು. ಆ ಭಾವೋತ್ಕರ್ಷದಲ್ಲಿ ಪತಿಯನ್ನು ಆಲಂಗಿಸಿ, ಆತನ ವಿಶಾಲ ವಕ್ಷಸ್ಥಲದಲ್ಲಿ ಮುಖ ಮರೆಯಿಸಿ, ಹೇಳಿದಳು—

’ನಿಮಗೆ ಮಾತಿನಲ್ಲಿರುವ ಚಾತುರಿಯಲ್ಲಿ, ನೂರರಲ್ಲಿ ಒಂದು ಪಾಲು ಯುದ್ಧದಲ್ಲಿದ್ದರೂ, ಅದಿಯಮ-ಖಂಡಿತವಾಗಿಯೂ-ನನ್ನ ಊಳಿಗದಾಳು.’

—ಎಂದು ನಗುತ್ತಾ ಹೇಳಿದಳು.

’ಪ್ರಧಾನಿಗಳು ಮಾತಾಳಿ ಎಂದದ್ದು ನನ್ನನ್ನಲ್ಲ, ಅರಗಿಳಿಯೇ, ನಿನ್ನನ್ನು.’

—ಎಂದು, ತಾನೂ ಪತ್ನಿಯನ್ನು ಬಿಗಿದಪ್ಪಿ, ಮತ್ತೆ ಆಕೆ ಮಾತಾಡದಂತೆ, ಆಕೆಯ ಹವಳದುಟಿಗಳನ್ನು ತನ್ನ ತುಟಿಗಳಿಂದ ಬಂಧಿಸಿದ.

೭

ಶಕವರ್ಷ ಸಾನಿರದ ಮೂವತ್ತೆಂಟನೆಯ ದುರ್ಮುಖಿ ನಾಮ ಸಂವತ್ಸರದ ಆಶ್ವಯುಜ ಶುದ್ಧ ವಿಜಯದಶಮಿಯ ಶುಭದಿನದಂದು, ಹೊಯ್ಸಳ ಸೇನೆ, ತನ್ನ ವಿಜಯ ಯಾತ್ರೆಯನ್ನು ಆರಂಭಿಸುವುದೆಂದು, ರಾಜ ಜ್ಯೋತಿಷಿಗಳು, ದಂಡಯಾತ್ರೆಯ ಮುಹೂರ್ತ ನಿಶ್ಚಯ ಮಾಡಿದರು. ಅದರಂತೆಯೇ ಆ ದಿನ ಸೂರ್ಯೋದಯಾನಂತರ ಸೇನೆ, ಸೀಮೋಲ್ಲಂಘನ ಮಾಡಿ, ತಲಕಾಡಿನತ್ತ ನಡೆಯುವುದಕ್ಕೆ ಬೇಕಾದ ಸಿದ್ಧತೆಗಳೆಲ್ಲವೂ ಮಿಂಚಿನ ವೇಗದಲ್ಲಿ ನಡೆದವು.

ಜ್ಯೋತಿಷ್ಯರು ದಿನ ನಿಶ್ಚಯ ಮಾಡಿದ ಗಳಿಗೆಯಲ್ಲೇ ಗಂಗರಾಜರು ಹೊಯ್ಸಳರ ಸಾಮಂತರಿಗೆ, ಮಾಂಡಲಿಕ, ಮನ್ನೆಯರಿಗೆ ತಮ್ಮ ತಮ್ಮ ಸೇನಾಬಲದೊಂದಿಗೆ ದುರ್ಗಾಷ್ಟಮಿಯ ವೇಳೆಗೇ ರಾಜಧಾನಿಗೆ ಬರುವುದೆಂದು

ಓಲೆಗಳನ್ನು ಬರಿಸಿ, ಕುದುರೆಯಾಳುಗಳನ್ನು ಅಟ್ಟಿದರು. ಅದರಂತೆ ದಿನಕ್ಕೆ ಒಂದೊಂದು ದಿಕ್ಕಿನಿಂದ ಸಾಮನ್ತರ ಸೇನಾವಾಹಿನಿ ದ್ವಾರಸಮುದ್ರಕ್ಕೆ ಬರತೊಡಗಿ, ದ್ವಾರಸಮುದ್ರ ಸೇನಾಸಮುದ್ರವಾಯಿತು.

ದಿನದಿನವೂ ರಾಜಧಾನಿಗೆ ಬರುವ ಸಾಮಂತರು, ಮಾಂಡಲಿಕರನ್ನು ಭೇಟಿ ಮಾಡಿ, ಅವರು ತಂದ ಕಾಣಿಕೆಗಳನ್ನು ಸ್ವೀಕರಿಸಿ, ಅವರ ಸೇನಾ ಬಲದ ವಿವರಗಳನ್ನು ವಿಚಾರಿಸಿ, ಒಬ್ಬೊಬ್ಬರಿಗೂ ಅವರ ಅಂತಸ್ತು ಮರ್ಯಾದೆಗಳಿಗನುಸಾರವಾಗಿ ಊಟ-ವಸತಿಗಳಿಗೆ ಏರ್ಪಾಟು ಮಾಡುವುದರಲ್ಲಿ ಗಂಗರಾಜರು, ಉಳಿದ ಸಚಿವರು, ಆಸ್ಥಾನಿಕರಿಗೆ ಒಂದು ಗಳಿಗೆಯೂ ತಮ್ಮ ಊಟ, ನಿದ್ರೆಗೂ ಬಿಡುವು ಉಳಿಯಲಿಲ್ಲ.

ಒಂದುಕಡೆ ಬಂದ ಸಾಮಂತರಿಗೆ, ಸೇನೆಗೆ ಊಟೋಪಚಾರಗಳಿಗೆ ವ್ಯವಸ್ಥೆ ನಡೆದಂತೆಯೇ ಮತ್ತೊಂದು ಕಡೆ, ಸಮರಾಂಗಣಕ್ಕೆ ತೆರಳಲಿರುವ ಸೇನಾಸಮೂಹಕ್ಕೆ ಬೇಕಾದ ಆಹಾರಸಾಮಗ್ರಿಗಳನ್ನೂ, ಉಳಿದ ಅಗತ್ಯ ವಸ್ತುಗಳನ್ನೂ ಶೇಖರಿಸುವ ಕೆಲಸವೂ ನಡೆಯಿತು.

ದ್ವಾರಸಮುದ್ರದ ಪಟ್ಟಣಶೆಟ್ಟಿಯನ್ನು ಕರೆಸಿ ಗಂಗರಾಜರು, ಸೇನೆಗೆ ಬೇಕಾದ ವಸ್ತುಗಳ ವಿವರಗಳೆಲ್ಲವನ್ನೂ ತಿಳಿಸಿ, ಅವರಿಗೆ ಮುಂಗಡ ಹಣ ಸಂದಾಯ ಮಾಡಿ, ಆರು ಮಾಸ ಮುತ್ತಿಗೆ ನಡೆದರೂ ಯಾವುದಕ್ಕೂ ಕೊರತೆ ಬೀಳದಂತೆ ವ್ಯವಸ್ಥೆ ಮಾಡಬೇಕೆಂದು ಕಟ್ಟುಮಾಡಿ ಕಳಿಸಿದರು.

ಈ ಅನಿವಾರ್ಯವಾದ ನೂರೆಂಟು ಕೆಲಸಗಳ ಗಡಿಬಿಡಿಯಲ್ಲಿ, ಯಾರೊಬ್ಬರಿಗೂ ದಿನಗಳು ಸರಿದುದೂ ಅರಿವಾಗಲಿಲ್ಲ.

ಅರಮನೆ ಆಸ್ಥಾನ, ದಂಡನಾಯಕರ ವಾಡೆಗಳಲ್ಲಿದ್ದಷ್ಟೇ ಗದ್ದಲ, ನಗರದ ಮನೆ ಮನೆಯಲ್ಲೂ ಇತ್ತು. ಮನೆಗೆ ಒಬ್ಬರಂತಾದರೂ, ಒಂದಲ್ಲ ಒಂದು ಕಾರಣಕ್ಕೆ

ಯುದ್ಧಭೂಮಿಗೆ ಹೊರಟಿದ್ದರು. ಹಾಗೆ ಹೋಗುವವರಿಗೆ ಬೇಕಾದ ಸಕಲವಸ್ತುಗಳನ್ನು ಜೋಡಿಸಿ ಕೊಡುವ ಸಡಗರ ಮನೆಯ ಹೆಂಗಸರಿಗೆ.

ಅಂಗಡಿಗಳಲ್ಲಂತೂ ಒಂದು ಗಳಿಗೆಯೂ ಬಿಡುವಿಲ್ಲದೆ ವ್ಯಾಪಾರ ನಡೆಯಲಾರಂಭಿಸಿ, ಇರುಳೂ ಹಗಲಾಯಿತು.

ರಾಜಧಾನಿಯ ಬಸದಿ, ದೇವಾಲಯಗಳಲ್ಲೂ ಅದೇ ಸಂಭ್ರಮ.

ಒಂದು ಕಡೆ ದೊರೆಯ ವಿಜಯಾಭಿವೃದ್ಧಿಗಾಗಿ, ನಾನಾ ದೇವಾಲಯಗಳಲ್ಲಿ ಹೋಮ ಹವನಗಳನ್ನು ನಡೆಸುತ್ತಿದ್ದರು. ದೇವತೆಗಳಿಗೆ ವಿಶೇಷ ಪೂಜೆ ಮಾಡುತ್ತಿದ್ದರು. ಅರಮನೆಯ ಬಳಿಯ ಯಾಗಶಾಲೆಯಲ್ಲಿ 'ಶತ ಚಂಡಿ' ಹೋಮ ನಡೆಯುತ್ತಿತ್ತು. ಬಸದಿಗಳಲ್ಲಿ ಶಾಂತಿಪೂಜೆಗಳು ನಡೆಯುತ್ತಿದ್ದವು. ಅವರೊಂದಿಗೆ ಮನೆಮನೆಯವರೂ ಬಂದು ಹರಕೆ ಹೊತ್ತು, ಪೂಜೆ ಮಾಡಿಸುವ ಗದ್ದಲ.

ಬೆಟ್ಟದ ಭೈರವನ ಗುಡಿಯಲ್ಲಂತೂ ಒಂದು ಗಳಿಗೆಯೂ ಬಿಡುವಿರಲಿಲ್ಲ. ದೊರೆಗೆ ವಿಜಯವನ್ನು ಕೋರಿ, ಹರಕೆಯಾಳುಗಳು, ಕುರಿಕೋಣಗಳೊಂದಿಗೆ ತಮ್ಮ ತಲೆಯನ್ನೂ ಅರ್ಪಿಸಿದರು. ಆ ನೂರಾರು ಬಲಿಗಳಿಂದ ಬೆಟ್ಟಕ್ಕೆ ಬೆಟ್ಟವೇ ರಕ್ತದಲ್ಲಿ ಅದ್ದಿ ತೆಗೆದಂತೆ ಕೆಂಪಾಯಿತು.

ಆಶ್ವಯುಜ ಶುದ್ಧ ಪಾಡ್ಯದಂದು ಆರಂಭವಾದ ಪೂಜೆಗಳು ದುರ್ಗಾಷ್ಟಮಿಯ ವೇಳೆಗೆ ಒಂದು ಘಟ್ಟಕ್ಕೆ ಬಂದು, ಆ ದಿನ ದ್ವಿಜರು ಮಂತ್ರತಂತ್ರೋಕ್ತವಾಗಿ, ಮಹಿಷಾಸುರ ಮರ್ಧಿನಿಯಾದ ದುರ್ಗಾಮಾತೆಯನ್ನು ಆರಾಧಿಸಿ ರಾಜಧಾನಿಯ ಹೊರವಲಯದಲ್ಲಿ 'ರಣಸ್ತಂಭ' ವನ್ನು ಸ್ಥಾಪಿಸಿ ಅದಕ್ಕೆ ಸಲ್ಲಬೇಕಾದ ಪೂಜೆಗಳನ್ನೆಲ್ಲಾ, ಮಿಂದುಮಡಿಯುಟ್ಟ ದೊರೆಯಿಂದ, ಸಕಲ ಸೇನಾಧಿಪತಿ ಗಂಗರಾಜರಿಂದ ಮಾಡಿಸಿದರು.

ಅದರ ಮಾರನೆಯ ದಿನವೇ ಆಯುಧಪೂಜೆ ನಡೆಯಿತು.

ದೊರೆಯಂತೆಯೇ ಲಕ್ಷಾಂತರ ಸೇನೆಯೂ ತನ್ನ ತನ್ನ ಆಯುಧ, ವಾಹನಗಳನ್ನು ಅರ್ಚಿಸಿ ವಿಜಯ ಕೋರಿತು.

ಆದಿನ ರಾತ್ರಿ-ಮರುದಿನವೇ ಸೀಮೋಲ್ಲಂಘನೆಯ ದಿನವಾದುದರಿಂದ-ಯುದ್ಧಭೂಮಿಗೆ ತೆರಳಲಿದ್ದ ವಿಷ್ಣುವರ್ಧನನೂ, ರಾಜಸೋದರ ಉದಯಾದಿತ್ಯನೂ, ಗಂಗರಾಜರೇ ಮೊದಲಾದ ದಂಡನಾಯಕರೂ ಮಡಿಯಲ್ಲೇ ದರ್ಭೆಯ ಮೇಲೆ ಮಲಗಿದರು.

ಆದರೆ ನಿದ್ರೆ ಮಾತ್ರ ಯಾರೊಬ್ಬರಿಗೂ ಬರಲಿಲ್ಲ. ಎಲ್ಲರಿಗೂ ಒಂದು ಗಳಿಗೆ ಕಣ್ಣು ಹತ್ತಿ ಏನಾದರೂ ಶುಭಸ್ವಪ್ನವಾಗಲಿ ಎನಿಸಿದರೂ, ಹಗಲು ಎಷ್ಟು ಹೊತ್ತಿಗಾದೀತೊ, ಎಷ್ಟು ಹೊತ್ತಿಗೆ ಸೇನೆ ಹೊರಟೀತೋ ಎಂಬ ಕಾತರದಲ್ಲಿ ಮನೆಯವರೊಂದಿಗೆ ಹೊರಡುವ ಹೊತ್ತಿನ ನಾನಾ ಮಾತು ಕಥೆಗಳನ್ನಾಡುವ ಅವಸರದಲ್ಲಿ, ರೆಪ್ಪೆಗೆ ರೆಪ್ಪೆ ತಾಗಲಿಲ್ಲ.

ಉಳಿದವರಂತೆ ವಿಷ್ಣುವರ್ಧನನಿಗೂ ಆ ರಾತ್ರಿ ಜಾಗರಣೆಯೇ ಆಯಿತು. ವಿಷ್ಣುವರ್ಧನ ಎಷ್ಟು ಹೊತ್ತಾದರೂ ನಿದ್ದೆ ಮಾಡದುದನ್ನು ಕಂಡ ಆತನ ಪಕ್ಕದಲ್ಲಿ ಕುಳಿತ ಶಾನ್ತಲಾದೇವಿ—

'ನಾಳಿನಿಂದ ಹೇಗೋ ಏನೋ. ಇವೊತ್ತಾದರೂ ಒಂದು ಗಳಿಗೆ ಎಲ್ಲವನ್ನೂ ಮರೆತು ನಿದ್ರೆಮಾಡಿ'

—ಎಂದಳು.

'ನನಗೆ ಬುದ್ಧಿ ಹೇಳುವ ಜಾಣೆ, ನೀನೇಕೆ ಮಲಗಬಾರದು. ನಾಳಿನಿಂದ ನನ್ನಂತೆ ನಿನಗೂ ನಿದ್ರೆ ವೈರಿ.'

'ಅದೇನೊ ನಿಜ. ನಾಳಿನಿಂದ ಒಂಟಿಯಾಗಿ, ಹಾಸಿಗೆಯಲ್ಲಿ ಹೊರಳುವುದು ಇದ್ದೇ ಇದೆ. ಅದಕ್ಕೇ ಅವಕಾಶವಿರುವಷ್ಟು ಹೊತ್ತನ್ನು ನಿಮ್ಮ ಬಳಿಯೇ ಕಳೆಯಬೇಕೆಂದು ಕೂತಿರುವುದು.'

'ಅಷ್ಟಕ್ಕೇ ಅದರೆ, ಆಗಬಹುದು. ಬೇರೆ ಚಿಂತೆ ಭಯವೇನೂ ಇಲ್ಲ ತಾನೇ?'

'ಚಿಂತೆ-ಭಯ-ಏಕೆ?'

'ನಾನು ಯುದ್ಧ ಭೂಮಿಗೆ ತೆರಳುತ್ತೇನೆಂದು....'

'ಊಹೂ-ಆ ಭಯವಿದ್ದರೆ, ಅದಿಯಮನ ಹೆಂಡತಿ, ಮಕ್ಕಳಿಗೆ ಇರಬೇಕು. ನನಗಿರುವ ಯೋಚನೆಯೇ ಬೇರೆ'

'ಏನು?'

'ನಿಮ್ಮೊಂದಿಗೆ ವಿವಾಹ ವೇದಿಕೆ ಏರಿದಂತೆ, ಸಿಂಹಾಸನವನ್ನು ಹತ್ತಿದ್ದಾಯಿತು. ಇನ್ನೊಂದು ಉಳಿಯಿತು....'

'ಯಾವುದು?'

'ರಣಾಶ್ವವನ್ನು ಹತ್ತುವುದು. ಆ ಭಾಗ್ಯವೊಂದರಲ್ಲಿ ಪಾಲು ಕೊಡಲಿಲ್ಲವಲ್ಲಾ ಎಂದು ನನಗೂ ಆ ಯೋಗ ಎಂದು ಚಿಂತಿಸುತ್ತಿದ್ದೇನೆ. ಅದೇಕೊ ನಾನು ಕಾಣೆ ಅಂತೂ ಈಚೆಗೆ ಏಕೋ ಕತ್ತಿ ಹಿಡಿಯಬೇಕು, ನಿಮ್ಮಂತೆಯೇ ಸಮರಾಂಗಣದಲ್ಲಿ ರಕ್ತಸ್ನಾನ ಮಾಡಿ, ಮೈ ತಂಪುಮಾಡಿಕೊಳ್ಳಬೇಕು ಎಂಬ ಬಯಕೆ ಬಹುವಾಗಿದೆ—'

—ಆ ಮಾತನ್ನು ಶಾನ್ತಲಾದೇವಿ ಲಘುವಾಗಿಯಾಗಲಿ, ನಗೆದನಿಯಲ್ಲಾಗಲಿ ಹೇಳದೆ, ಏನೋ ವಿಚಿತ್ರ ಉತ್ಕಟತೆ ತುಂಬಿದ ಧ್ವನಿಯಲ್ಲಿ ಹೇಳಿದಳು.

ಆ ಮಾತನ್ನು, ಆಕೆ ಆ ಮಾತನ್ನು ಹೇಳಿದ ರೀತಿಯನ್ನು ಕೇಳಿ, ವಿಷ್ಣುವರ್ಧನನಿಗೆ ಆಶ್ಚರ್ಯವಾಯಿತು.

’ಇದೆಂಥ ವಿಚಿತ್ರ ಬಯಕೆ ನಿನ್ನದು ಶಾನ್ತಲಾ? ನಾನು ಯುದ್ಧಕ್ಕೆ ಹೋಗುವೆನೆಂದು ದಿನವೂ ಆ ಕನಸು ಕಾಣುತ್ತಿರುವೆಯಾ?’

—ಎಂದು ಮಲಗಿದಂತೆಯೇ ಮಗ್ಗುಲಾಗಿ, ಬಳಿಯಲ್ಲಿ ಕುಳಿತ ಶಾನ್ತಲಾದೇವಿಯ ಬಾಳೆಯದಿಂಡಿನಂತೆ ದುಂಡಾದ, ನಯವಾದ ತೋಳನ್ನು ಸಸ್ನೇಹವಾಗಿ ನೇವರಿಸಿ ಕೇಳಿದ.

’ಇದು ವಿಚಿತ್ರ ಬಯಕೆಯಲ್ಲ. ವಸಂತ ಕಾಲದಲ್ಲಿ ಕೋಗಿಲೆ ಕೂಗುವುದು ವಿಚಿತ್ರವೇ?’

’ಅಲ್ಲ. ಆದರೆ ಹೆಣ್ಣು ರಕ್ತಸ್ನಾನ, ರಣಕೇಳಿಯನ್ನು ಬಯಸುವುದು ವಿಚಿತ್ರವಲ್ಲವೆ’

’ಊಹೂ.’

’ಏಕೆ?’

’ಇಷ್ಟು ದಿನ, ಈಗ ಒಂದು ಪಕ್ಷದಿಂದ ನಿಮಗೆ ಏನೋ ಮಾತು ಹೇಳಬೇಕೆಂದಿದ್ದೆ. ಹೇಗೆ ಹೇಳುವುದು ಎಂದು ಸುಮ್ಮನಾಗಿದ್ದೆ. ಆದರೆ ಈ ದಿನ...’

’ಏನು ಹೇಳಬೇಕೆಂದಿದ್ದೆ. ನನ್ನೂ ಯುದ್ಧಕ್ಕೆ ಕರೆದುಕೊಂಡು ಹೋಗಿ ಎಂದು ಕೇಳಬೇಕೆಂದಿದ್ದೆಯಾ? ಮೊದಲೇ ಹೇಳಬೇಕಾಗಿತ್ತು. ನಾರು ಅದಕ್ಕೆ ಅಡ್ಡಿ ಮಾಡುತ್ತೇನೆಂದು ಹೆದರಿದೆಯಾ?’

’ಊಹೂ. ನೀವಲ್ಲ ಅಡ್ಡಿಯಾದುದು?’

'ಮತ್ತೆ... ಅವ್ವೆ ಬೇಡವೆಂದಳೇ?'

'ಅಲ್ಲ.'

'ಮತ್ತೆ ಯಾರು ಅಡ್ಡಿಯಾದರು?'

—ಅಚ್ಚರಿಯಾಗಿ ಕೇಳಿದ ವಿಷ್ಣುವರ್ಧನ.

'ಎಲ್ಲವನ್ನು ನಾನೇ ಬಾಯಿಬಿಟ್ಟು ಆಡಬೇಕೇ? ಬಾಯಿಬಿಟ್ಟು ಆಡದ ಮಾತಿನ ಅರ್ಥ ತಿಳಿದುಕೊಳ್ಳುವ ಜಾಣ್ಮೆ ಪ್ರಭುಗಳಿಗೆ ಇದೆ ಎಂದಿದ್ದೆ...'

'ಕಣ್ಣ ನೋಟದ ಅಲುಗಾಟದ ಮೇಲೆ ಕಾವ ಕಟ್ಟುವ ಜಾಣ್ಮೆಯನ್ನು ಭಗವಂತ ಸ್ತ್ರೀಯರೊಬ್ಬರಿಗೇ ಅನುಗ್ರಹಿಸಿರುವುದು. ನನ್ನಂಥಾ ಗಂಡಸರಿಗೆ ಅದು ತಿಳಿಯದ ವಿದ್ಯೆ. ಆಯಿತೇ— ನನ್ನ ಅಜ್ಞತೆಯನ್ನು ಒಪ್ಪಿಕೊಂಡೆನಲ್ಲಾ— ನಿನ್ನ ಉತ್ಸಾಹಕ್ಕೆ ಅಡ್ಡಿಯಾದವರು ಯಾರು ಹೇಳು?'

'ನಾನೇ ಆಡಿದರೆ—ನಾಣ್ಗೇಡಿ ಎನ್ನುತ್ತೀರೋ ಏನೋ.'

'ಊಹೂ. ಯಾವುದೋ ಮಾತಿಗೆ ಬಲವಾಗಿಯೇ ಪೀಠಿಕೆ ಹಾಕುತ್ತಿದ್ದೀಯ. ಅದೇನು ಹೇಳು.'

'ನನ್ನ.. ನನ್ನ... ಗರ್ಭದಲ್ಲಿ ಕುಳಿತ... ನಿಮ್ಮ ಮಗ?'

—ಲಜ್ಜೆಯಿಂದ ಅವನತಶಿರಳಾಗಿ, ನುಡಿ ತೊದಲಾಗಿ ಹೇಳಿ, ತೋಳಿನಲ್ಲಿ ಮುಖ ಮರೆಸಿಕೊಂಡಳು ಶಾನ್ತಲಾದೇವಿ.

'ನಿಜವೇ... ಹೌದೆ...'

—ಧಿಗ್ಗನೆ ಎದ್ದು ಕುಳಿತು ಬಳಿಯಲ್ಲಿದ್ದ ಪತ್ನಿಯನ್ನು , ಆನಂದೋದ್ರೇಕದಲ್ಲಿ ಆಲಿಂಗಿಸಿ ಕೇಳಿದ ವಿಷ್ಣುವರ್ಧನ—

'ಮೊದಲೇ ಏಕೆ ಹೇಳಲಿಲ್ಲ?'

'ಅತ್ತೆಯವರು ಹೇಳು ಎಂದರು. ನಿನಗಾಗದಿದ್ದರೆ ನಾನೇ ಹೇಳುತ್ತೇನೆ ಎಂದರು. ಆದರೆ ಯುದ್ಧ ಚಿಂತೆಯಲ್ಲಿದ್ದ ನಿಮಗೆ ಹೇಳಿ, ಮನಸಿಗೆ ಯೋಚನೆ ಮಾಡುವುದೇಕೆಂದು ನಾನೇ ಬೇಡವೆಂದೆ.'

'ಹುಚ್ಚಿ... ಹುಚ್ಚಿ.. ಈ ಸಂತೋಷಕ್ಕೆ ಯೋಚನೆ ಎಂದು ಸಲ್ಲದ ಹೆಸರಿಡುತ್ತಾರೆಯೇ? ನಿನ್ನನ್ನು ಅಂದೇನು ಉಪಯೋಗ- ದಿನ ದಿನಕ್ಕೆ ನಿನ್ನ ಸೌಂದರ್ಯ ಪುಟಕಿಟ್ಟ ಮಿಸುನಿಯಂತಾಗುತ್ತಿರುವುದನ್ನು ನೋಡಿದಾಗ— ನಾನೇ ಊಹಿಸಬೇಕಾಗಿತ್ತು. ನನ್ನದೇ ತಪ್ಪಾಯಿತು.'

'ತಪ್ಪು ನಿಮ್ಮದೇ ಎಂದು ಒಪ್ಪಿಕೊಂಡರೆ, ಆದಷ್ಟು ಬೇಗ ಈ ಯುದ್ಧ ಮುಗಿಸಿಕೊಂಡು ಬಂದುಬಿಡಿ. ನೀವು ಯುದ್ಧಕ್ಕೆ ಹೋದಾಗ ನಿಮ್ಮನ್ನು ಬಿಟ್ಟು ಹೇಗಿರುವುದು ಎಂದು ಯೋಚಿಸುತ್ತಿದ್ದೆ. ಅದನ್ನು ಮರೆಯಲು ದೇವರೇ ಈ ಸಂತೋಷದ ದಾರಿತೋರಿಸಿದ. ಆದರೆ, ಯುದ್ಧವನ್ನು ಮಾತ್ರ ಬೇಗ ಮುಗಿಸಿಕೊಂಡು, 'ಆ ಹೊತ್ತಿ'ಗಾದರೂ ಬಂದುಬಿಡಿ. ಹಾಗೇ ನೀವು ನನಗೊಂದು ಮಾತು ಕೊಡಬೇಕು...'

'ಏನು ಬೇಕು-ಕೇಳು? ಮೂರು ಲೋಕದ ಸಿರಿ ಬೇಕೆಂದರೂ ತಂದು ನಿನ್ನ ಕಾಲ ಬಳಿ ರಾಶಿ ಹಾಕುತ್ತೇನೆ.'

'ನಮ್ಮ ಅರಮನೆಯಲ್ಲಿರುವುದು ದೇವೇಂದ್ರನ ಆಸ್ಥಾನದಲ್ಲಿ ತಾನೇ ಏನಿದ್ದೀತು. ಅದಲ್ಲ-'

'ಮತ್ತೇನು?'

'ಒಂದು—ಯುದ್ಧ ಶಿಬಿರದಲ್ಲಿ ನನ್ನ ಚಿಂತೆ ಮಾಡಬಾರದು. ಮತ್ತೊಂದು ತಲಕಾಡಿನ ಯುದ್ಧದಲ್ಲಿ, ನೀವು ಗೆದ್ದಾಗ, ಆಲ್ಲಾಗಲಿ, ದಾರಿಯಲ್ಲಿ ಕೈಸೆರೆ ಹಿಡಿಯುವ ಊರುಗಳಲ್ಲಾಗಲಿ, ಎಲ್ಲೂ ಯಾವ ಹೆಂಗಸು ಮಕ್ಕಳಿಗೂ ಸೇನೆ ಹಿಂಸೆ ಮಾಡದಂತೆ ನೋಡಿಕೊಳ್ಳಿ. ನಿಮ್ಮನ್ನು ಯುದ್ಧರಂಗಕ್ಕೆ ಹೋಗಲು ನಾನು ಒಪ್ಪಿದುದು—ಈ ಕಾರಣಕ್ಕಾಗಿ. ಸಣ್ಣ ತುರುಗಾಳಗವೆಂದರೂ, ಹಸು ಕರು ಹಿಡಿಯುವುದಲ್ಲದೆ, ಶತ್ರು ಹೆಂಗಸರ ಮಾನಭಂಗ ಮಾಡುವುದು ಸೈನಿಕರಿಗೆ ವಾಡಿಕೆಯಾಗಿ ಹೋಗಿದೆ. ನಾನು ಬಲ್ಲೆ- ನಾನು ಬೇಡ ಎಂದರೆ ಹುಲಿ ಮಾಂಸ ತಿನ್ನುವುದನ್ನು ಬಿಟ್ಟು, ಹುಲ್ಲು ಮೇಯುವುದಿಲ್ಲ. ಆದರೆ ಇದೊಂದು ಯುದ್ಧದಲ್ಲಾದರೂ ಈ ಘೋರ ಬೇಡ'

—ಎಂದು ಕಕ್ಕುಲತೆಯಿಂದ ಪತಿಯನ್ನು ಬೇಡಿದಳು ಶಾನ್ತಲಾದೇವಿ.

'ಆಯಿತು. ಹಾಗಾಗದಂತೆ ನೋಡಿಕೊಳ್ಳುತ್ತೇನೆ. ಗಂಗರಾಜರಿಗೆ ಹೇಳಿ, ಸೇನೆಯಲ್ಲಿ ಡಂಗುರ ಸಾರಿಸುತ್ತೇನೆ. ನೀನು ನಿಶ್ಚಿಂತಳಾಗಿರು.'

—ಎಂದು ಆಕೆಗೆ ವಚನವಿತ್ತ ವಿಷ್ಣುವರ್ಧನ.

'ನೀವಷ್ಟು ಹೇಳಿದರೆ ಸಾಕು-ಹತ್ತು ಬಳ್ಳ ಹಾಲು ಕುಡಿದಷ್ಟು ಸಂತೋಷವಾಯಿತು. ಇಷ್ಟು ದಿನ ಈ ಮಾತೆಲ್ಲಾ ಹೇಳಬಾರದು ಎಂದುಕೊಂಡಿದ್ದೆ. ಈ ದಿನ ಕರಳು ತಡೆಯಲಿಲ್ಲ.'

'ಹೇಳಿ ಒಳ್ಳೆಯದೇ ಮಾಡಿದೆ ದೇವಿ...'

'ಏನು ಒಳ್ಳೆಯದೋ-ನಿಮ್ಮ ನಿದ್ದೆ ತಪ್ಪಿಸಿದೆ.'

'ಊಹೂ-ಈ ಸಮರದಲ್ಲಿ ಗೆಲುವು ನಮ್ಮದೇ ಎಂಬ ಭರವಸೆಯನ್ನು ಮೂಡಿಸಿದೆ. ಈಗ ನೀನು ಹೇಳುವುದಕ್ಕಿಂತ ಇನ್ನೇನು ಶುಭ ಶಕುನ ಬೇಕು ಹೇಳು.'

—ಎಂದ ಉತ್ಸಾಹದಿಂದ ವಿಷ್ಣುವರ್ಧನ.

’ಮನಸ್ಸಿಗೆ ಆ ನೆಮ್ಮದಿ ಇದ್ದರೆ ಒಂದು ಗಳಿಗೆ ಮಲಗಿ ನಿದ್ರೆಮಾಡಿ’

—ಎಂದಳು ಶಾನ್ತಲಾದೇವಿ.

’ಇದು ನೀನು ನಿದ್ರೆ ಕೆಡುವ ಕಾಲವಲ್ಲ. ಮಲಗು.’

—ಎಂದು ವಿಷ್ಣುವರ್ಧನ ಪತ್ನಿಗೆ ಹೇಳಿದ.

ಒಬ್ಬರು ಮತ್ತೊಬ್ಬರಿಗೆ ’ನಿದ್ರೆ ಮಾಡು’ ಎಂದು ಹೇಳಿದರೇ ವಿನಾ ಇಬ್ಬರೂ ಮಲಗಲಿಲ್ಲ.

ಅವರಿಬ್ಬರೂ ಹಾಗೆ ಮಾತಿನಲ್ಲಿ ಕಾಲ ಕಳೆಯುತ್ತಿರುವಾಗಲೇ, ಇರುಳು ಸವೆದು, ವಿಜಯ ಯಾತ್ರೆ ಹೊರಟ ಹೊಯ್ಸಳ ಸೇನೆಗೆ ದಿಗಂಗನೆ ಎತ್ತಲೆಂದು ತಂದ ಕುಂಕುಮಾರತಿಯ ಹೊಂದಳಿಗೆಯಂತೆ, ಮೂಡಲಲ್ಲಿ ರವಿ ಮೂಡಿದ.

೮

ಶುಭ ಬ್ರಾಹ್ಮೀ ಮುಹೂರ್ತದಲ್ಲಿ ಮೊರೆಯಲಾರಂಭಿಸಿದ ಸನ್ನಾಹ ಭೇರೀರವವನ್ನು ಕೇಳಿ, ಜಾಗ್ರತವಾದ ಹೊಯ್ಸಳ ಸೇನೆ, ಪ್ರಯಾಣ ಸನ್ನದ್ಧವಾಗಿ, ತರಂಗ ತರಂಗವಾಗಿ ಬಂದು, ನಿಯತ ಕಾಲಕ್ಕೆ ’ರಣಗಂಭ’ ದ ಬಯಲಲಲ್ಲಿ ಕಲೆತವು. ಕಾರ್ಗಾಲದ ಕಡಲ ತೆರೆಯಂತೆ, ಒಂದನ್ನು ಹಿಂಬಾಲಿಸಿ ಮತ್ತೊಂದು, ಕಾಲಾಳು ತಂಡಗಳು, ಬಿಲ್ಗಾರರ ಗುಂಪುಗಳು, ರಥದ ಸಾಲುಗಳು, ಆನೆ ಕುದುರೆಯ ಪಡೆಗಳು, ನೋಡುವ ಜನರ ಎದೆಯಲ್ಲಿ, ಭಯವನ್ನೂ, ಆಶ್ಚರ್ಯವನ್ನೂ ಮೂಡಿಸುತ್ತಾ ಬಂದು, ತಮ್ಮ ಚೂಣಿಯ ನಾಯಕರ ನಿರ್ದೇಶದಂತೆ ಗೊತ್ತಾದ ಸ್ಥಳದಲ್ಲಿ ನಿಂತಿತ್ತು. ಸೇನೆಯ ಒಂದೊಂದು ತರಂಗ ತನ್ನ ವಿಶಿಷ್ಟ ವಾದ್ಯರವನೊಡನೆ ಬಂದು, ಬಯಲಿನಲ್ಲಿ

ನಿಂತಾಗಲೂ, ಸೇನೆಯನ್ನು ನೋಡಲು ಬಯಲಿನ ಸುತ್ತಲೂ ನೆರೆದ ಅಸಂಖ್ಯಾತ ಜನಕೋಟಿ, ಮುಗಿಲು ಮಾರ್ದನಿಸುವಂತೆ ಕೇಕೆ ಹಾಕಿತು.

ಸಕಲ ಸೇನೆ, ದೊರೈ, ದಂಡನಾಯಕರು ಎಲ್ಲರೂ ಬಂದ ಬಳಿಕ, ದ್ವಿಜರು 'ರಣಸ್ತಂಭಾರ್ಚನೆ' ಮಾಡಿ, ಸಮರವಿಜಯವನ್ನು ಕೈಗೂಡಿಸುವ ಮಂತ್ರಗಳನ್ನು ಪಠಿಸಿ, ದೊರೆಗೂ, ಸಕಲ ಸೇನಾಧಿಪತಿ ಗಂಗರಾಜರಿಗೂ ವೀರ ಕಂಕಣ ಕಟ್ಟಿದರು. ವೇದೋಕ್ತವಾದ ಪೂಜೆ ಹೋಮ ಹವನಗಳು ನಡೆದ ಬಳಿಕ, ಮೂರು ನಾಲ್ಕು ಮಂದಿ ಭಾಷೆಯಾಳುಗಳು ರಣಗಂಭಕ್ಕೆ ತಮ್ಮ ತಲೆಯೊಪ್ಪಿಸಿ, ದೊರೆಗೆ ದಿಗ್ವಿಜಯ ಕೋರಿದರು. ಒಂದೊಂದು ಬಲಿಯೊಪ್ಪಿಸಿದಾಗಲೂ ಸಹಸ್ರಾರು ರಣವಾದ್ಯಗಳು ಮೊರೆದು, ದಿಕ್ಕುಗಳನ್ನು ಬೆದರಿಸಿದವು. ಒಮ್ಮೊಮ್ಮೆ ರಣವಾದ್ಯ ಮೊರೆದಾಗಲೂ, ಸೇನಾಕೋಟಿ ಹರ್ಷೋದ್ಗಾರದ ಕೇಕೆಯನ್ನು ಹಾಕಿದಾಗಲೂ, ಆ ಸದ್ದು ರಾಜಧಾನಿಯ ಬಳಿಯ ಮೂರು ಬೆಟ್ಟದ ಬಂಡೆಗಳಿಂದಲೂ ಮಾರ್ದನಿಸಿ, ಉತ್ಸಾಹ ಮತ್ತವಾದ ಬೆಟ್ಟಗಳೂ ಜೀವದಾಳಿ ಹರ್ಷೋದ್ಗಾರ ಮಾಡುತ್ತಿರುವವೇನೋ ಎಂಬ ಭ್ರಾಂತಿಯನ್ನು ಮೂಡಿಸಿದವು.

ಆ ಬಳಿಕ, ಪ್ರಚಂಡ ದಂಡನಾಯಕರು, ಗಂಗರಾಜರು ಶತ್ರು ಸಂಕೇತವಾಗಿ ನಿಲ್ಲಿಸಿದ ಬಾಳೆಯ ದಿಂಡುಗಳನ್ನು ತಮ್ಮ ಹರಿತವಾದ ಕರವಾಳದಿಂದ ಕತ್ತರಿಸಿ, ಆಗ ಮಾಡಿದ ಹರ್ಷೋದ್ಗಾರದ ಸದ್ದು ಅಡಗಿದ ಬಳಿಕ, ಮುಗಿಲ ಗುಡುಗಿನಂತೆ ಮೊಳಗುವ ಧ್ವನಿಯಲ್ಲಿ ಹೇಳಿದರು—

'ಹೊಯ್ಸಳ ಸಾಮ್ರಾಜ್ಯ ರಕ್ಷಣಾ ದಕ್ಷರಾದ ವೀರ ಪಟುಭಟರೇ— ಇಂದು ನಮ್ಮೆಲ್ಲರ ಸತ್ವಪರೀಕ್ಷೆಯ ಸಮಯ. ಹೊಯ್ಸಳ ರಾಜ್ಯಲಕ್ಷ್ಮಿಯ ಆಜನ್ಮ ವೈರಿಗಳಾದ ಚೋಳರನ್ನು, ಮರ್ಧಿಸಿ, ಅವರ ಹೆಣಗಳ ಬಣಬೆಯ ಮೇಲೆ, ನಮ್ಮ ವಿಜಯ ಧ್ವಜವನ್ನು ಹಾರಿಸುವ ಹೊತ್ತು ಸನ್ನಿಹಿತವಾಗಿದೆ. ಈ ಬಾರಿಯ ಸಮರದಲ್ಲಿ ಚೋಳಬಲ ಸಂಪೂರ್ಣವಾಗಿ ಸೋಲಿಸಲ್ಪಟ್ಟು, ಮತ್ತೆಂದೂ ನಮ್ಮ ದೇಶದತ್ತ

ತಲೆಯಿಕ್ಕದಂತಾಗಬೇಕೆಂಬುದು ಪ್ರಭುಗಳ ಮಹದಾಶಯ. ಆ ದಿವ್ಯ ಆಶಯವನ್ನು ಭವ್ಯ ಸತ್ಯವಾಗಿ ಮಾಡುವ ಶಕ್ತಿ ಸಾಮರ್ಥ್ಯಗಳು, ಶ್ರೀ ವಾಸನ್ತಿಕಾದೇವಿಯ ಅನುಗ್ರಹದಿಂದ, ನಮ್ಮೆಲ್ಲರ ತೋಳುಗಳಲ್ಲಿಯೂ ನೆಲೆಸಿದೆ. ಅಂತೆಯೇ ಯಾವ ಭಯಕ್ಕೂ ಬಳುಕದ ಭೀಮಬಲ, ಯಾವ ಲೋಭಕ್ಕೂ ಸೋಲದ ನಿಷ್ಠಾ ಶಕ್ತಿಗಳ ಅಕ್ಷಯ ಭಂಡಾರ ನಮ್ಮಲ್ಲಿದೆ ಎಂಬ ನಂಬಿಕೆಯೂ ನಮಗಿದೆ. ಆ ನಿಮ್ಮ ಪ್ರಚಂಡಬಲ, ಇದು ಸಹಸ್ರಮಡಿಯಾಗಿ ವೃದ್ಧಿತವಾಗಲಿ. ರೂಕ್ಷ ರಾಕ್ಷಸಮರ್ಧನ ಸಮಯದಲ್ಲಿ ದೇವತಾ ಸೇನೆಯ ತೋಳಿನಲ್ಲಿ ವಿಜೃಂಭಿಸಿದ ಬಲ, ರಾವಣ ಪ್ರಾಣಹರಣದ ಸಮಯದಲ್ಲಿ ಕಪಿಸೇನೆಯ ಬಾಹುಗಳಲ್ಲಿ ಪ್ರಜ್ವಲಿಸಿದ ಶಕ್ತಿ, ಇಂದು ರಣಚಂಡಿಯ ಹರಕೆಯಿಂದ ನಿಮ್ಮದಾಗಲಿ.

’ಈ ಗಳಿಗೆಯಲ್ಲಿ ಒರೆಗಳಚಿದ ನಿಮ್ಮ ಖಡ್ಗ ಶತ್ರು ಸಮ್ಮರ್ಧನ ಕಾರ್ಯ ಮುಗಿಯುವವರೆಗೂ ಕೆಳಗಿಳಿಯದಿರಲಿ. ಹೊಯ್ಸಳ ಸೈನಿಕರಲ್ಲಿ ಒಬ್ಬರ ಬೆನ್ನನ್ನು ಶತ್ರುಸೇನೆ ಕಾಣದಂತಾಗಲಿ.’

—ಎಂದು ಹೇಳಿ ಸೇನೆಯನ್ನು ಹರಸಿದರು.

ಆ ಬಳಿಕ, ದ್ವಿಜರು ದೇವತಾ ಗೃಹಗಳ ತೀರ್ಥ ಪ್ರಸಾದವನ್ನು ಇಂದ್ರರು ಬಸದಿಗಳ ಗಂಧೋದಕ-ಸೇಸೆಗಳನ್ನು ದೊರೆಗೆ, ದಂಡನಾಯಕರಿಗೆ ನೀಡಿದ ಬಳಿಕ, ನೂರಾರು ಜನ ಮುತ್ತೈದೆಯರು, ದೊರೆಗೆ, ದಂಡನಾಯಕರಿಗೆ ವಿಜಯಾರತಿಯನ್ನೆತ್ತಿ, ಹಣೆಗೆ ಕುಂಕುಮವಿಟ್ಟರು.

ಆ ಕಾರ್ಯಗಳೆಲ್ಲವೂ ಮುಗಿದ ಬಳಿಕ, ಗಂಗರಾಜರ ಸೂಚನೆಯಂತೆ ಪ್ರಸ್ಥಾನ ಭೇರಿಗಳು ಮೊಳಗಲಾರಂಭಿಸಿದವು. ಅದರೊಂದಿಗೇ ಅದುವರೆಗೆ, ಕಡೆದ ವಿಗ್ರಹಗಳಂತೆ ನಿಂತ ತಮ್ಮ ತಮ್ಮ ಚೂಣಿಗಳಿಗೆ ಚಲನೆಯ ಅಪ್ಪಣೆಯನ್ನು ಕೊಡುವ

ದಳಪತಿಗಳ ಕೂಗಿನ ಸದ್ದು ನಿಂತ ಅನೆಗಳನ್ನು ತಿವಿದು ಎಚ್ಚರಿಸುವ ಮಾವುತರ ಕೂಗು, ಗಜಗಳ ಘೀಂಕಾರ, ಅಶ್ವಗಳ ಹೇಷಾರವದ ಸದ್ದೂ ಬಯಲನ್ನು ತುಂಬಿ ಬಿರಿಯಿತು.

ತನ್ನಿದುರು ಆರೋಹಣಕ್ಕೆ ಸಿದ್ಧವಾಗಿ ಬಂದ ರಾಜರಥವನ್ನು ಏರುವ ಮುನ್ನ ವಿಷ್ಣುವರ್ಧನ, ತನ್ನ ಬಳಿಯಿದ್ದ ಶಾನ್ತಲಾದೇವಿಯ ನೆತ್ತಿಯನ್ನು ಹರಸುವಂತೆ ನೇವರಿಸಿ—

'ನಾನಿನ್ನು ಹೋಗಿ ಬರಲೇ ಶಾನ್ತಲಾ? ಯಾವ ಬಗೆಯ ಚಿಂತೆಗೂ ಮನಸ್ಸಿನಲ್ಲಿ ಎಡೆಕೊಡಬೇಡ, ಮೂರು ಮಾಸದ ಯುದ್ಧವನ್ನು ಮೂರೇ ದಿನದಲ್ಲಿ ಮುಗಿಸಿ ಬರುತ್ತೇನೆ. ಬಳ್ಳಿಗಾಮೆಯಿಂದ ನಿನ್ನ ಅವ್ವೆಯವರನ್ನು ಕರೆಸಿಕೋ. ಮಾವಯ್ಯನವರೂ ಬಂದಿರುವುದಾದರೆ ಮತ್ತಷ್ಟು ಸಂತೋಷ'

—ಎಂದು ಹೇಳಿದ.

'ಗೆದ್ದು ಬನ್ನಿ, ನಾನು ಹೇಳಿದುದನ್ನು ಮರೆಯಬೇಡಿ. ವೃಥಾ ಹೆಂಗಸರು ಮಕ್ಕಳಿಗೆ ನೋವಾಗದಿರಲಿ.'

—ಎಂದು ತನ್ನ ಬೇಡಿಯನ್ನು ಜ್ಞಾಪಿಸಿ, ಪತಿಯ ಚರಣಗಳಿಗೆರಗಿ, ಆತನ ಪಾದಧೂಳಿಯನ್ನು ತನ್ನ ನೆತ್ತಿಗಿರಿಸಿಕೊಂಡಳು ಶಾನ್ತಲಾದೇವಿ.

'ಮಹಾರಾಜ್ಞಿಯವರ ಆಜ್ಞೆಯನ್ನು ಮೀರುವ ಉನ್ಮತ್ತರಾರೂ ಹೊಯ್ಸಳ ರಾಜ್ಯದಲ್ಲಿಲ್ಲ ದೇವಿ.'

—ಎಂದು ಆಕೆಗೆ ಆಶ್ವಾಸನವಿತ್ತ, ಹಿರಿಯರಿಗೆ, ಗುರುಜನಕ್ಕೆ ವಂದಿಸಿ, ವಿಷ್ಣುವರ್ಧನ ರಥಾರೋಹಣ ಮಾಡಿದ.

ಆತನು ರಥವನ್ನೇರಿದ ಕೂಡಲೇ, ಚಂಡೆ, ತಮಟೆ, ಕೊಂಬು, ಕಹಳೆ-ಮೊದಲಾದ ನೂರಾರು ರಣವಾದ್ಯಗಳ ಮೊಳಗು, ಸೈನಿಕರ ಉತ್ಸಾಹ ಮತ್ತು

ರಣಕೇಕೆಯ ಅಬ್ಬರ ಹೊಮ್ಮಿ ಹೊರಸೂಸಿ, ದ್ವಾರಸಮುದ್ರದ ಕೆರೆಗಳ ನೀರು, ಬಿರುಗಾಳಿಯ ಹೊಯ್ಲಿಗೆ ಸಿಕ್ಕಾಗ ಹೊಯ್ದಾಡುವಂತೆ ಹೊಯ್ದಾಡಿತು.

ವಿಷ್ಣುವರ್ಧನ, ಆತನ ಹಿಂದೆ ಗಂಗರಾಜರು, ಅವರ ಹಿಂದೆ ಉದಯಾದಿತ್ಯ, ಪುಣಿಸಮಯ್ಯ ಮೊದಲಾದ ದಂಡನಾಯಕರು, ಅವರ ಹಿಂದೆ ವೇಳೆವಡಿಚರ ಪಡೆ, ನಿಶ್ಚಯಿಸಿದ ದಿಕ್ಕಿನತ್ತ ಚಲಿಸಿದರು.

ಅವರನ್ನು ಹಿಂಬಾಲಿಸಿ, ರಥಗಳೂ, ಗಜಾಶ್ವಪಡೆಗಳೂ, ಬಿಲ್ಗಾರರೂ ಕಾಲಾಳುಗಳೂ, ಆಯುಧದ ಬಂಡಿಗಳೂ, ಬಡಗ ಕಮ್ಮಾರ ಮೊದಲಾದ ಕೆಲಸಗಾರರೂ, ರಣವೈದ್ಯರು, ಸೇನಾರಂಜನೆಯ ಕುಶಲರು, ವೇಶ್ಯೆಯರು, ಹರದರು ಮೊದಲಾದ ಜನ ಕುಳಿತ, ಎತ್ತು, ಕುದುರೆ ಕತ್ತೆಗಳ ಬಂಡಿಗಳು ಸಾಲು ಸಾಲಾಗಿ ಹೊರಟವು.

ಹೋಗುತ್ತಿರುವ ಸೇನೆಯಕೇಕೆ, ಅವರನ್ನು ಬೀಳ್ಕೊಡುವ ಜನತೆಯ ಹರ್ಷಧ್ವನಿ, ಗಜಾಶ್ವರಥ ಮೊದಲಾದುವುಗಳ ಬಗೆ ಬಗೆಯ ಸದ್ದು ತುಂಬಿ ಕೇಳಿದ ಕಿವಿ ಕಿವುಡಾಯಿತು. ಪದಾಘಾತದಿಂದ ಹಬ್ಬಿದ ಧೂಳಿಯಲ್ಲಿ ಹಗಲು ಕತ್ತಲಾಯಿತು.

ಹಗಲು ಆರಂಭವಾದ ಸೇನಾಚಲನೆ, ಆ ದಿನ ಸಂಜೆಯವರೆಗೂ ನಡೆಯುತ್ತಲೇ ಇತ್ತು.

ಪತಿ ಹೋದ ದಿಕ್ಕನ್ನೇ ನೋಡುತ್ತಾ ನಿಂತ ಶಾನ್ತಲಾದೇವಿ, ಸೇನೆಯ ಸದ್ದು ಕೇಳದಂತಾಗುವವರೆಗೂ, ಆದರ ಚಲನೆಯಿಂದ ಹುಟ್ಟಿದ ಪ್ರಚಂಡ ಧೂಳಿನ ಮೋಡ ದಿಗಂತದ ಅಂಚಿನಲ್ಲಿ ಕರಗುವವರೆಗೂ, ಹಾಗೇ ನೋಡುತ್ತಲೇ ನಿಂತಿದ್ದಳು.

ಗಳಿಗೆ ಗಳಿಗೆಗೂ ಆಕೆಯ ಹೃದಯ—

’ಬೇಗ ಬನ್ನಿ, ಗೆದ್ದು ಬನ್ನಿ, ಮೈಯ ಕೂದಲೂ ಕೊಂಕದಂತೆ ಬನ್ನಿ.’

—ಎಂದು ಬೇಡುತ್ತಿತ್ತು.

ಶಾನ್ತಲಾದೇನಿಯ ಹೃದಯದ ಬೇಡಿಕೆಯೂ, ರಾಜಧಾನಿಯ, ಹೊಯ್ಸಳ ರಾಜ್ಯದ ಕೋಟಿ ಕೋಟಿ, ಮಾತೆಯರು, ಮಡದಿಯರು, ಸಹೋದರಿಯರು, ಮಕ್ಕಳು ಮರಿಗಳ ಹೃದಯದಲ್ಲೂ ಮಾರ್ದನಿಸುತ್ತಿತ್ತು.

೯

ಮಡದಿ ಗರ್ಭಿಣಿಯೆಂಬ ಸುದ್ದಿಯನ್ನರಿತು, ವಿಷ್ಣುವರ್ಧನನ ತೋಳ ಉತ್ಸಾಹ ದ್ವಿಗುಣಿತವಾಗಿ, ಆದಷ್ಟು ಬೇಗ ಈ ಸಮರವನ್ನು ಮುಗಿಸಿ ರಾಜಧಾನಿಗೆ ಹಿಂದಿರುಗಬೇಕೆಂಬ ಬಯಕೆ ಬೆಳದಂತೆಯೇ ದೊರೆಯಿಂದ ಆ ಸುದ್ದಿಯನ್ನರಿತ ಗಂಗರಾಜರಲ್ಲೂ ಉತ್ಸಾಹ ಉಕ್ಕೇರಿತು.

ವಿಷ್ಣುವರ್ಧನನ ಆಜ್ಞೆಯಂತೆ ಗಂಗರಾಜರು, ಶಾನ್ನಲಾದೇವಿಯ ಬೇಡಿಕೆಯನ್ನು, ರಾಜಾಜ್ಞೆಯಾಗಿ ಸೇನೆಯಲ್ಲಿ ಸಾರಿಸಿದರು.

ಆ ಆಜ್ಞೆ ಕಟ್ಟಿನೊಂದಿಗೆ ಹೊತ್ತು ತಂದ ಹರ್ಷ ವಾರ್ತೆಯನ್ನು ಕೇಳಿದ ಹೊಯ್ಸಳ ಸೇನೆ ಹರ್ಷದ ಕೇಕೆ ಹಾಕೆ, ತಲಕಾಡಿನತ್ತ ಓಡಿತು.

ಆ ಪ್ರಚಂಡ ಸೇನಾ ಪ್ರವಾಹಕ್ಕೆ ಇದಿರಾದ ಚೋಳ ಸೀಮೆಯ ನೂರಾರು ಹಳ್ಳಿಗಳು ಕತ್ತಿಯೆತ್ತದೆಯೇ ಶರಣಾಗತವಾದವು. ಶರಣಾಗತವಾದ ಹಳ್ಳಿಯಲ್ಲಿ ಹೊಯ್ಸಳ ಸೇನೆ ನಡೆದುಕೊಂಡ ರೀತಿ, ಅಲ್ಲಿಯ ಹೆಂಗಸರು ಮಕ್ಕಳ ವಿಷಯದಲ್ಲಿ ತೋರಿದ ಗೌರವ ಭಾವ, ಹಾಲು ಕರೆಯುವ ಹಯನುಗಳನ್ನಾಗಲಿ, ಅವುಗಳ ಕರುಗಳನ್ನಾಗಲಿ, ಹಿಂಸಿಸದೆ, ಪ್ರತಿಭಟಿಸದ ಪುರುಷರಾರನ್ನೂ ಕೊಲ್ಲದೆ ವಿಶ್ವಾಸದಿಂದ ನಡೆಸಿಕೊಂಡ ವಿಚಾರ- ಸುತ್ತಮುತ್ತಲ ಸೀಮೆಯಲ್ಲಿ ಕಥೆಯಾಗಿ ಹಬ್ಬಿತು.

’ಪುಣ್ಯಾತ್ಮ ವಿಷ್ಣುವರ್ಧನ. ಆತನನ್ನು ಹಡೆದ ತಾಯಿ, ಕೈ ಹಿಡಿದ ಮಡದಿಯ ಹೊಟ್ಟೆ ತಣ್ಣಗಿರಲಿ. ದೊರೆ ಎಂದರೆ ಹೀಗಿರಬೇಕು. ಕೈಯಲ್ಲಿ ಕತ್ತಿ ಇದೆ, ತೋಳಲ್ಲಿ ಬಲವಿದೆ ಎಂದು ಸೊಕ್ಕು, ಹಸುವಿನ ಕೆಚ್ಚಲು ಕೊಯ್ದು ಅಸಹಾಯಳಾದ ಹೆಂಗಸಿನ ಮರ್ಯಾದೆ ಕಳೆದು ಹಿಗ್ಗುವ ರಕ್ಕಸ ದೊರೆಗಳೆಲ್ಲಾ ನಿರ್ನಾಮವಾಗಿ, ನನ್ನಪ್ಪ, ಧರ್ಮರಾಯ ವಿಷ್ಣುವರ್ದನ ಲೋಕಕ್ಕೆಲ್ಲಾ ದೊರೆಯಾಗಲಿ.’

—ಎಂದು ಹಳ್ಳಿ ಹಳ್ಳಿಯಲ್ಲೂ ಸಹಸ್ರಾರು ಸ್ತ್ರೀ ಹೃದಯಗಳು ವಿಷ್ಣುವರ್ದ್ವನನನ್ನು ಹರಸಿದವು.

ಈ ವಿಷಯವನ್ನು ಕೇಳಿದ ಹತ್ತಾರು ಹಳ್ಳಿಯ ಗಾವುಂಡಗಳು, ತಮ್ಮ ಹಳ್ಳಿಯ ಬಳಿ ಬಂದ ಹೊಯ್ಸಳ ಸೇನೆಯನ್ನು ಎದುರಿಸದೆ, ಕಳಶ, ಕನ್ನಡಿಯ ಮರ್ಯಾದೆಯೊಂದಿಗೆ ಎದುರುಗೊಂಡು, ತಮ್ಮ ಹಳ್ಳಿಗಳನ್ನು ದೊರೆಗೆ ಮೆಚ್ಚುಗಾಣಿಕೆಯಾಗಿ ಕೊಟ್ಟರು. ಹೆಂಗಸರು ಕೊಡಗಟ್ಟಲೆ ಹಾಲು ತಂದು ಸೇನೆಗೆ ಹಂಚಿದರು. ವಿಷ್ಣುವರ್ಧನನ, ಗಂಗರಾಜರ ಹಣೆಗೆ ಕುಂಕುಮವಿಟ್ಟು, ಹೂಮಾಲೆ ಹಾಕಿ—

’ಭೂಮಿ ನಿಮ್ಮಂಥ ಧರ್ಮಾತ್ಮರಿಗಾಗಲಿ’

—ಎಂದು. ಹರಸಿದರು.

ಶಾನ್ತಲಾದೇವಿಯ ಹೆಣ್ಣು ಹೃದಯದ ಸಹಜವಾದ ಬೇಡಿಕೆ, ತಮ್ಮ ವಿಜಯಯಾತ್ರೆಯಲ್ಲಿ ಮೆರೆದ ಪವಾಡವನ್ನು ಕಂಡು, ವಿಷ್ಣುವರ್ಧನನ ಕಣ್ಣಿನಲ್ಲಿ ಆನಂದದ ಕಂಬನಿ ಹೊಳೆಯಾಗಿ ಹರಿಯಿತು. ಗಂಗರಾಜರೂ—

’ತಾಯಿಯವರ ಒಂದು ಮಾತಿಗೆ, ಕೋಟಿ ಸೇನೆಗೂ ಇರದಂಥ ಬಲ ಇದೆ. ತಮ್ಮ ಪ್ರೀತಿಯಿಂದ ಅವರೇ ಚೋಳ ಸೀಮೆಯನ್ನು ಗೆದ್ದರು. ತಲಕಾಡೂ ಹೀಗೇ ಸೋತು ಬಿಟ್ಟರೆ, ಮೀಸೆ ಹೊತ್ತ ಗಂಡಸರು ಮಾಡುವುದು ಏನೂ ಉಳಿಯುವುದೇ ಇಲ್ಲ.’

—ಎಂದಾಡಿ ತಮ್ಮ ಮೆಚ್ಚುಗೆಯನ್ನು ಸೂಚಿಸಿದರು.

ಮಾರ್ಗದ ಗ್ರಾಮ ಜನರು ತಮ್ಮಲ್ಲಿ ತೋರುವ ಸ್ನೇಹ, ವಿಶ್ವಾಸವನ್ನು ಕಂಡ ಸೇನೆ—

’ಇದೇನು-ನಾವು ಹೊರಬರುವುದು ಯುದ್ಧಕ್ಕೋ, ನಂಟರ ಮನೆಯ ಮದುವೆಗೋ’

—ಎಂದು ಆಶ್ಚರ್ಯಪಟ್ಟಿತು.

ಇದರಿಂದಾಗಿ, ಹೆಜ್ಜೆ ಹೆಜ್ಜೆಗೂ ಹೋರಾಡುತ್ತಾ, ಪ್ರತಿಭಟನೆಯನ್ನು ಮುರಿಯುತ್ತಾ, ದಿನಕ್ಕೊಂದು ಗಾವುದ ದೂರವೂ ಸವೆಯದೆ, ಎಷ್ಟು ದಿನ ಶ್ರಮಪಟ್ಟು, ಎಷ್ಟು ಸೇನೆಯನ್ನು ಕಳೆದು ಕೊಂಡು ತಲಕಾಡು ತಲುಪಬೇಕೋ ಎಂದಿದ್ದ ಗಂಗರಾಜರ ಚಿಂತೆ ಹುಸಿಯಾಗಿ, ಒಬ್ಬ ಆಳೂ ಸಾಯದೆ, ಒಂದು ಅಸ್ತ್ರ ಮುಕ್ಕಾಗದೆ, ಒಂದು ವಾರದೊಳಗಾಗಿ, ಹೊಯ್ಸಳ ಸೇನೆ ಕಾವೇರಿಯ ಬದಿಯ ಜನನಾಥಪುರದ ಬಳಿ ತಲಪಿತು.

ಜನನಾಥಪುರದ ಪಾರ್ಶ್ವದಲ್ಲಿ ಹರಿಯುವ ಕಾವೇರಿಯನ್ನು ದಾಟಿದರೆ, ಇದಿರು ಬದಿಯ ದಂಡೆಯಲ್ಲೇ, ಚೋಳರು ರಾಯರಾಯಪುರವೆಂದು ಹೆಸರು ಬದಲಿಸಿದ, ರಾಜಧಾನಿ ತಲಕಾಡು.

ಬೇಹುಗಾರರಿಂದ, ಹೊಯ್ಸಳ ಸೇನೆ, ರಾಜಧಾನಿಗೆ ಕೊಂಬಿನ ದೂರವೂ ಇಲ್ಲದ ಜನನಾಥಪುರದ ಬಳಿಗೆ ಬಂದುದನ್ನು ಬೇಹುಗಾರರಿಂದ ಕೇಳಿದ ಚೋಳ ಮಂಡಲಾಧೀಶ್ವರ ಅದಿಯಮ, ಕಾಲಡಿಯಲ್ಲೇ ಭೂಕಂಪವಾದಂತೆ, ನಡುಗಿದ.

ದೂರದ ದ್ವಾರಸಮುದ್ರದಿಂದ ಹೊರಟ ಹೊಯ್ಸಳ ಸೇನೆ, ಇಷ್ಟು ಬೇಗ ತಲಕಾಡಿನ ಬಳಿ ಬಂದು, ರಾಜಧಾನಿಯನ್ನು ಭೀತಿಯ ಮೋಡದಿಂದ ಕವಿಸುವುದೆಂದು ಅದಿಯಮ ನಿರೀಕ್ಷಿಸಿರಲಿಲ್ಲ. ಆ ಸೇನೆಯ ಮಾರ್ಗದಲ್ಲಿದ್ದ ಚೋಳರ ಪ್ರಭುತ್ವಕ್ಕೆ ಒಳಪಟ್ಟ ಹಳ್ಳಿಯ ಜನ ಯುದ್ಧಮಾಡದೆ ಶರಣಾಗತರಾದುದನ್ನು ಕೇಳಿ, ಅವನ ಕಣ್ಣುಗಳಲ್ಲಿ ಕ್ರೋಧ ಬೆಂಕಿಯಂತೆ ಉರಿಯಿತು.

'ಈ ಕನ್ನಡ ಜನವೇ ಇಷ್ಟು. ತಮ್ಮ ಭಾಷೆಯಾಡುವ ದೊರೆ ದೇವರು ಎನ್ನುತ್ತಾರೆ... ಕನ್ನಡದಲ್ಲಿ 'ಅಣ್ಣ' ಎಂದರೆ ಶತ್ರುವನ್ನು ಸೋದರನಂತೆ ಆಲಂಗಿಸುತ್ತಾರೆ. ನಾವೂ ಕನ್ನಡವಾಡುವ ಜನವಾಗಿದ್ದರೆ ನಮ್ಮನು ಹೀಗೆ ಬಿಟ್ಟುಕೊಡುತ್ತಿದ್ದರೆ? ಚಕ್ರವರ್ತಿಗಳಿಗೆ ನಾನು ಎಂದೋ ಹೇಳಿದ್ದೆ- ಈ ಸೀಮೆಯಲ್ಲಿ ನಮಗೆ ನಮ್ಮ ಸೇನೆಯದೇ ನಂಬಿಕೆಯಲ್ಲದೆ, ಈ ಕನ್ನಡ ಜನದಲ್ಲ-ಎಂದ್ಕು ಅದು ನಿಜವಾಯಿತು. ಇರಲಿ. ಈ ಜನಕ್ಕೆ ಇವರ ದೊರೆಗೆ ಇಬ್ಬರಿಗೂ ಚೋಳ ಖಡ್ಗದ ರುಚಿ ತೋರಿಸುತ್ತೇನೆ'

—ಎಂದು ಹಟತೊಟ್ಟ.

ಅದರಂತೆಯೇ ರಾಜಧಾನಿ ತಲವನಪುರದ ರಕ್ಷಣೆಗೆ ಬೇಕಾದ ಸಿದ್ಧತೆಗಳನ್ನು ಮಾಡತೊಡಗಿದುದೇ ಅಲ್ಲದೆ, ಜನನಾಥಪುರದಲ್ಲಿದ್ದ ಚೋಳ ಸೇನೆಗೆ ಕಡೆಯ ಆಳು ಉರುಳುವವರೆಗೂ, ಹೊಯ್ಸಳ ಸೇನೆ ಮುಂದುವರಿಯಲು ಬಿಡಕೂಡದು ಎಂದು ಕಟ್ಟಪ್ಪಣೆ ಮಾಡಿ, ಆ ಸೇನೆಯ ನಾಯಕತ್ವಕ್ಕೆ, ತನ್ನ ಸಾಮನ್ತನಾದ ಕಂಚಿಯ ದಾಮೋದರನನ್ನು ಕಳುಹಿಸಿದ.

ಜನನಾಥಪುರದ ಕೋಟೆಯ ಮೇಲೆ, ಚೋಳ ಸೇನೆ ಹೊಯ್ಸಳ ಸೇನೆಯನ್ನೆದುರಿಸಲು ಸಿದ್ಧವಾಗಿ ನಿಂತಿತು.

ಪ್ರತಿಭಟನೆಗೆ ಸಿದ್ಧವಾದ ಜನನಾಥಪುರವನ್ನು ನೋಡಿ, ತಮ್ಮ ಸೇನೆಗೆ ದಾಳಿಯ ಸೂಚನೆಯನ್ನು ಕೊಡುತ್ತಿದ್ದ ಗಂಗರಾಜರು, ಕೋಟೆಯತ್ತಣಿಂದ ಹೊಯ್ಸಳ ಪಾಳಯದತ್ತ ಹಾರಿಬಂದ ಚೋಳರ ಬಾಣಗಳನ್ನು ನೋಡಿ—

'ಜನನಾಥಪುರವಾದರೂ ನಮ್ಮನ್ನು ಪ್ರತಿಭಟಿಸಿದುದು ಒಳಿತಾಯಿತು. ಇಲ್ಲವಾದರೆ ತಲವನಪುರ ತಲಪುವ ವೇಳೆಗೆ ನಮ್ಮ ಸೇನೆಗೆ ರಣವಿದ್ಯೆಯೇ ಮರೆತು ಹೋಗುತ್ತದೇನೊ ಎಂದು ಭಯವಾಗಿತ್ತು. ಸದ್ಯ ಇಲ್ಲಾದರೂ ಶತ್ರು ಭೇಟಿಯಾಯಿತಲ್ಲಾ'

—ಎಂದು ಹೇಳಿ ಬಯಸಿದ ಯುದ್ಧ ಸಂದರ್ಭಬಂದುದಕ್ಕಾಗಿ ತೃಪ್ತಿಯ ನಿಟ್ಟುಸಿರು ಬಿಟ್ಟರು.

ಗಂಗರಾಜರ ಸೂಚನೆಯಂತೆ, ಹೊಯ್ಸಳ ಸೇನೆ ಕೋಟೆಗಾಳಗಕ್ಕೆ ಸಿದ್ಧವಾಯಿತು.

ಕಬ್ಬಿಣದ ತಗಡುಗಳ ಆಂಗರಕ್ಷೆಯಿಂದ ರಕ್ಷಿತವಾದ ಗಜಪಡೆಯ ಕೋಟೆಯ ಹಿಂದೆ, ಬಗೆ ಬಗೆಯ ಶಸ್ತ್ರಗಳನ್ನು ಧರಿಸಿದ ಸೈನಿಕರೂ, ಕೋಟೆಯನ್ನು ಹತ್ತಲು ಅಗತ್ಯವಾದ ಸಾಧನಗಳನ್ನು ಹೊಂದಿದ ಭಟರೂ ಕೋಟೆಯತ್ತ ಚಲಿಸಿದರು. ಕೋಟೆಯತ್ತ ನಡೆಯುತ್ತಿರುವ ಹೊಯ್ಸಳ ಸೇನೆಯ ಮೇಲೆ, ಕೋಟೆಯ ಮೇಲೆ ನಿಂತ ಚೋಳ ಸೈನಿಕರು ಬಾಣದ ಮಳೆಗರೆಯದಂತೆ, ಬಡಗಿಗಳು ನಿರ್ಮಿಸಿದ ಮರದ ಅಟ್ಟಲಿಗೆಗಳ ಮೇಲೆ ನಿಂತ ಹೊಯ್ಸಳ ಧನುರ್ಧರರು, ತಮ್ಮ ಪಡೆಯ ನೆತ್ತಿಯಮೇಲೆ ಬಾಣದ ಕೋಟೆ ಕಟ್ಟಿದರು.

ಈ ರಕ್ಷಣೆಯಲ್ಲಿ ಮೊರೆಯುವ ನೂರಾರು ರಣವಾದ್ಯಗಳೊಂದಿಗೆ ಸ್ಪರ್ಧಿಸಿ, ಶತ್ರುಗಳ ಎದೆ ಬಿರಿಯುವಂತೆ ರಣಕೇಕೆ ಹಾಕುತ್ತಾ ಮುಂದುವರಿದ ಸೇನೆ, ಚೋಳ

ಸೈನಿಕರ ಬಾಣ ತಗುಲಿ ಸಾಯುವವರನ್ನು ಲೆಕ್ಕಿಸದೆ ಒಬ್ಬ ಸತ್ತ ಸ್ಥಳದಲ್ಲಿ ಹತ್ತು ಜನ ನಿಂತು ಕೋಟೆಯ ಬಳಿ ಸೇರಿ, ಕೋಟೆಯ ಗೋಡೆಯನ್ನು ಹತ್ತಲು ನಿಚ್ಚಣಿಗೆಗಳನ್ನು ಹಾಕಿದರು. ಆದರೆ, ಗೆಲುವಿನ ಭರವಸೆಯಿಂದ ಕೋಟೆಯನ್ನು ಹತ್ತಲು ಯತ್ನಿಸಿದ ಹೊಯ್ಸಳ ಬಲ, ನೆತ್ತಿಯಮೇಲೆ ಸುರಿದ ಹುರಿದ ಮರಳು, ಕುದಿಯುವ ಎಣ್ಣೆ ಕಾದ ಅಂಬಲಿ, ಹಸಿದ ಹುಲಿಯಂತೆ ಬೀಳುವ ಹೆಬ್ಬಂಡೆಗಳಿಗೆ ನೂರಾರು ಜೀವ ಬಲಿ ಕೊಟ್ಟು ಹಿಂಜರಿಯ ಬೇಕಾಯಿತು.

ಒಂದು ಗಳಿಗೆ ಗೆಲುವಿನ ಕೇಕೆಗಳಿಂದ ತುಂಬಿದ ರಣಾಂಗಣ, ಮರುಗಳಿಗೆ ಗಾಯಗೊಂಡ ಆನೆಗಳು, ಕುದುರೆಗಳು, ಕಾಲಾಳುಗಳ ನೋವಿನ ಚೀರುಧ್ವನಿಯಿಂದ, ಸಾವಿನ ಭೀತಿಯ ಆಕ್ರಂದನದಿಂದ ತುಂಬಿತು.

ಕೋಟೆಯ ಬಳಿ ಕೈಕಾಲು ಮುರಿದು, ತಲೆಯೊಡೆದು ನೆತ್ತರು ಸೂಸುವ ಹೆಣಗಳು ರಾಶಿ ರಾಶಿಯಾಗಿ, ರಣರಂಗಕ್ಕಿಕ್ಕಿದ ಭೂತಬಲಿಯಂತೆ ಬಿದ್ದವು.

ಹಗಲು ಆರಂಭವಾದ ಯುದ್ಧ ಸಂಜೆಯಾಗಿ ಕತ್ತಲು ಕವಿಯುವ ಹೊತ್ತಾದರೂ, ಮುಗಿಯದೆ, ಕಡೆಗೆ ಕತ್ತಲೆಯೇ ಎರಡು ಬಲಗಳಿಗೂ ನಡುವೆ ನಿಂತು, ಆ ರಾತ್ರಿಯ ಮಟ್ಟಿಗೆ ಯುದ್ಧವನ್ನು ನಿಲ್ಲಿಸಿತು.

ಗಂಗರಾಜರೊಂದಿಗೆ ಪಾಳಯದಲ್ಲಿ ಸಂಚರಿಸಿ, ರಣವೈದ್ಯರಿಂದ ಚಿಕಿತ್ಸೆ ಪಡೆಯುತ್ತಿದ್ದ ಸೈನಿಕರ ಯೋಗಕ್ಷೇಮವನ್ನು ವಿಚಾರಿಸಿಕೊಂಡು ಬಂದ ವಿಷ್ಣುವರ್ಧನ, ರಾತ್ರಿಯೆಲ್ಲಾ ಮಲಗದೆ, ಗಂಗರಾಜರೇ ಮೊದಲಾದ ದಂಡನಾಯಕರೊಂದಿಗೆ ಕುಳಿತು, ಹೆಚ್ಚು ಜೀವ ಹಾನಿಯಾಗದಂತೆ, ಕೋಟೆಯನ್ನು ಹಿಡಿಯುವ ಕ್ರಮಗಳನ್ನು ವಿಚಾರಿಸಿದರು.

ಒಬ್ಬೊಬ್ಬರೂ ತಮಗೆ ಸೂಕ್ತವೆಂದು ಕಂಡ ಕ್ರಮಗಳನ್ನು ವಿವರಿಸಿದರು. ಆ ಹೊತ್ತಿನಲ್ಲಿ ಬೋಕಿಮಯ್ಯ—

’ಹೆಚ್ಚು ಕಷ್ಟವಾಗದಂತೆ ಕೋಟೆಯನ್ನು ಹಿಡಿಯಲು ನನಗೊಂದು ಉಪಾಯ ತೋಚುತ್ತದೆ’

—ಎಂದ.

’ಏನು?’

’ನಾವು ಕೋಟೆಯಮೇಲೆ ದಾಳಿ ಮಾಡುವ ಹೊತ್ತಿನಲ್ಲಿ, ಕೋಟೆಯ ಒಳಗೂ ಏನಾದರೂ ಗದ್ದಲವಾದರೆ, ಆಗ ಚೋಳ ಸೈನಿಕರ ಗಮನ ಅತ್ತ ಕಡೆ ಎಳೆದು, ನಾವು ಕೋಟೆಯನ್ನು ಹಿಡಿಯುವುದು ಸಾಧ್ಯವಾಗುತ್ತದೆ.’

—ಎಂದು ಸೂಚಿಸಿದ.

’ಆದರೆ ಅದನ್ನು ಹೇಗೆ ಮಾಡುವುದು ಸಾಧ್ಯ? ಕೋಟೆಯೊಳಗಿನವರು ಒಬ್ಬರೂ ಹೊರಸುಳಿಯದಂತೆ ಕಟ್ಟು ಮಾಡಿದಾರೆ. ಒಳಗಿನ ಪರಿಸ್ಥಿತಿ ಹೇಗೋ ಏನೋ? ಆದುದರಿಂದ ಕೋಟೆಯೊಳಗೆ ಹೇಗೆ ಗದ್ದಲ ಎಬ್ಬಿಸುವುದು?’

—ದೊರೆಯ ಅಂಗರಕ್ಷಕ ಪಡೆಯ ನಾಯಕನಾದ ಹಟಗಾರ ಕೇತಯ ನಾಯಕ ಕೇಳಿದ.

’ನಮಗೇನೋ ಅದಕ್ಕೆ ಒಂದು ದಾರಿ ಕಾಣುತ್ತದೆ.’

—ಎಂದ ವಿಷ್ಣುವರ್ಧನ.

ದೊರೆಯಾಡಿದ ಮಾತನ್ನು ಕೇಳಿ ಗಂಗರಾಜರಿಗೆ ಆಶ್ಚರ್ಯವಾಯಿತು.

’ಏನು? ಕೋಟೆಯ ವಿಷಯ ನಿಮಗೆ ಗೊತ್ತೆ?’

'ಗೊತ್ತಿರಲಿಲ್ಲ. ಇವೊತ್ತು ಬೆಳಿಗ್ಗೆ ಯುದ್ಧವಾಗುತ್ತಿದ್ದಾಗ ನಾವು ಅಟ್ಟಲಗೆಯಮೇಲೆ ನಿಂತು ನೋಡುತ್ತಿದ್ದೆವಲ್ಲ ಆಗ ಗೌರಾಚಾರ್ಯರ 'ಆಕಾಶದರ್ಶಿ' ಒಂದು ದಾರಿ ಸೂಚಿಸಿತು. ಈ ದಿನವೇ ಯುದ್ಧ ಮುಗಿಯದಿದ್ದರೆ ಬಳಿಕ ನಿಮಗೆ ಹೇಳುವುದೆಂದು ಸುಮ್ಮನಾದೆವು.'

—ಎಂದ ವಿಷ್ಣುವರ್ಧನ.

'ಆಕಾಶದರ್ಶಿ ಏನು ತೋರಿಸಿತು?'

—ಉತ್ಸಾಹದಿಂದ ಕೇಳಿದರು ಗಂಗರಾಜರು.

'ಇದು ಭತ್ತದ ಪ್ರಾಂತವಲ್ಲವೇ? ಕೋಟೆಯೊಳಗೆ, ಮನೆ ಮನೆಯ ಮುಂದೂ ಒಂದೊಂದು ಬೆಟ್ಟದಂಥ ಹುಲ್ಲಿನ ಬಣವೆಗಳಿವೆ. ಹೇಗಾದರೂ ಅದಕ್ಕೆ ಬೆಂಕಿ ತೋರಿಸುವುದು ಸಾಧ್ಯವಾದರೆ ನಮ್ಮ ಕೆಲಸ ಅರ್ಧ ಮುಗಿದಂತಾಗುತ್ತದೆ.'

'ನಿಜ, ನಿಜ'

—ಎಂದು ಗಂಗರಾಜರು, ದೊರೆಯ ಸಲಹೆಗೆ ತಮ್ಮ ಸಮ್ಮತಿ ಸೂಚಿಸಿ—

'ನಾಳೆ ಅದರ ವ್ಯವಸ್ಥೆ ಮಾಡಿಸುತ್ತೇನೆ.'

—ಎಂದರು.

ಆ ಮಾರ್ಗ ನಿಶ್ಚಯವಾದ ಬಳಿಕ ಎಲ್ಲರಿಗೂ ಮನಸ್ಸು ಹಗುರವಾಗಿ ಗಂಗರಾಜರು ವಿಷ್ಣುವರ್ಧನನ ಮಾತಿನಂತೆ ಮಲಗಲು ಹೋದರು.

ದಂಡನಾಯಕರನ್ನು ಮಲಗಲು ಕಳಿಸಿದ ವಿಷ್ಣುವರ್ಧನ, ತಾನು ಮಾತ್ರ ಮಲಗಲಿಲ್ಲ. ತನ್ನ ಬಳಿಯಲ್ಲಿದ್ದ ಬೋಕಿಮಯ್ಯ, ಕೇತಯನಾಯಕನಕಡೆ ತಿರುಗಿ 'ಗಂಗರಾಜರಿಗೆ ತಲಕಾಡಿನ ಯುದ್ಧ ಕಾದಿದೆ. ಈ ಪೊಳ್ಳುಕೋಟೆಯನ್ನು ಹಿಡಿಯುವ

ಕೆಲಸದಲ್ಲಿ ಅವರಿಗೇಕೆ ಶ್ರಮವಾಗಬೇಕು. ಹತ್ತುಜನ ನಮ್ಮೊಂದಿಗೆ ಬರುವುದಾದರೆ ಪ್ರಧಾನಿಗಳು ಏಳುವುದರೊಳಗಾಗಿ ನಾವೇ ಆ ಕೆಲಸ ಮಾಡಿ ಮುಗಿಸಬಹುದು.'

—ಎಂದ.

ಆತನ ಮಾತನ್ನು ಕೇಳಿದ ಕೇತಯನಾಯಕ, ಬೋಕಿಮಯ್ಯ ಕಾಣದ ಬೆಂಕಿಯನ್ನು ಮುಟ್ಟಿದಂತೆ ಬೆರಗಾದರು.

'ಅದೇನು ಮಾಡುವುದಿದ್ದರೂ ನಮಗೆ ಹೇಳಿ, ಯಾವುದಕ್ಕೂ ನೀವು ಮುಂದೆ ಬರುವುದು ಬೇಡ. ಯಾವ ಅಪಾಯಕ್ಕೂ ತಮ್ಮನ್ನು ಬಿಡಕೂಡದೆಂದು ಪ್ರಧಾನಿಗಳು ಕಟ್ಟಪ್ಪಣೆ ಮಾಡಿದಾರೆ.'

—ಎಂದ ಬೋಕಿಮಯ್ಯ.

'ಆ ಅಪ್ಪಣೆ ಮಾಡಿ ಅವರು ಅವರ ಕರ್ತವ್ಯ ನಿರ್ವಹಿಸಿದರು. ಆದರೆ ನಾವೂ ಮಾಡಬೇಕಾದ ಕರ್ತವ್ಯವಿದೆ. ಆದುದರಿಂದ ಯಾರೂ ಇದಿರು ಮಾತನಾಡಬೇಡಿ. ಈ ಬಾರಿಯ ಯುದ್ಧದಲ್ಲಿ ಇದು ನಾವು ಮಾಡಿದ ಕೆಲಸ ಎಂದು ಹೇಳಿಕೊಳ್ಳುವುದಕ್ಕೆ ಏನೂ ಬೇಡವೇ? ಆದ್ದರಿಂದ ಬೋಕಿಮಯ್ಯ, ನೀನು ಹೋಗಿ, ನಮ್ಮ ವೇಳೆ ವಡಿಚರ ಪಡೆಯೊಳಗೆ ಬಹು ಕುಶಲರಾದ ಇಪ್ಪತ್ತು ಮಂದಿ ಬಿಲ್ಗಾರರನ್ನು ಹೊರಡಿಸಿ ಸಿದ್ಧರಾಗಿ. ಮುಂದಿನ ಕೆಲಸ ಇಲ್ಲಿಂದ ಹೋದ ಬಳಿಕ ಹೇಳುತ್ತೇನೆ. ಹಾಗೇ ಎಲ್ಲೂ ನಾವು ಹೋಗುವ ಗದ್ದಲವಾಗಬಾರದು; ಸುದ್ದಿಯ ಎಳೆಯೂ ತಿಳಿಯಬಾರದು. ಎಚ್ಚರವಾಗಿರಿ.'

—ಎಂದು ಬೋಕಿಮಯ್ಯನಿಗೆ ಅಪ್ಪಣೆ ಮಾಡಿ—

'ಕೇತಯನಾಯಕರೇ, ನೀವು ಹೋಗಿ ಎಣ್ಣೆಯಲ್ಲಿ ಚೆನ್ನಾಗಿ ತೋಯಿಸಿದ ಒಂದು ಹೊರೆ ಪಂಜುಗಳನ್ನು ಸಿದ್ಧಪಡಿಸಿಕೊಂಡು ಬನ್ನಿ.'

—ಎಂದು ಹೇಳಿ, ಅವರಿಬ್ಬರನ್ನೂ ಕಳುಹಿಸಿ, ಅವರು ಹಿಂದಿರುಗಿ ಬರುವುದನ್ನೇ ಕಾದು ಕುಳಿತ.

ಅನತಿ ಕಾಲದಲ್ಲಿಯೇ ಅವರಿಬ್ಬರೂ ಬಂದು, ದೊರೆ ತಮಗೊಪ್ಪಿಸಿದ ಕೆಲಸವನ್ನು ಮಾಡಿರುವುದಾಗಿ ತಿಳಿಸಿದರು.

ಕೂಡಲೇ ವಿಷ್ಣುವರ್ಧನ, ಆಳು ತೊಡಿಸಿದ ಅಂಗರಕ್ಷೆಯನ್ನು ಧರಿಸಿ ತಾವು ಬಿಡಾರದಿಂದ ಹೊರ ತೆರಳಿದದು ಯಾರೊಬ್ಬರಿಗೂ ತಿಳಯ ಕೂಡದೆಂದು ಆಳಿಗೆ ಕಟ್ಟು ಮಾಡಿ, ಕಾಲು ನಡಗೆಯಲ್ಲೇ ಪಾಳಯದ ಆಚೆಯವರೆಗೂ ನಡೆದು, ಪಾಳಯದ ಕಾವಲು ಕಾಯುವ ಸೈನಿಕರಿಗೂ ಯಾರಿಗೂ ತಿಳಿಸಕೂಡದೆಂದು ಅಪ್ಪಣೆ ಮಾಡಿ, ಸಿದ್ಧವಾದ ಕುದುರೆಯನ್ನೇರಿ ತಮ್ಮನ್ನು ಹಿಂಬಾಲಿಸಿದ ಭಟರೊಂದಿಗೆ, ಜನನಾಥಪುರದ ಕೋಟೆಯತ್ತ ತೆರಳಿದರು.

ಇರುಳಿನ ಕಾರ್ಗತ್ತಲಲ್ಲಿ ಜನನಾಥಪುರದ ಕೋಟೆ, ಭೀಮಾಕಾರವಾಗಿ ಕಾಣುತ್ತಿತ್ತು. ಕೋಟೆಯ ಮೇಲೆ ಕಾವಲು ತಿರುಗುವ ಭಟರ ಕೂಗಲ್ಲದೆ, ಬೇರಾವ ಸದ್ದೂ ಇಲ್ಲದ ಗಂಭೀರಮೌನ ಎಲ್ಲೆಡೆಯಲ್ಲೂ ವ್ಯಾಪಿಸಿತ್ತು.

ಆ ಕತ್ತಲಿನಲ್ಲಿ ಚಲಿಸುವ ಕತ್ತಲೆಯ ಮರಿಗಳಂತೆ ನಡೆದ, ಹೊಯ್ಸಳ ಸೈನಿಕರೂ, ಕಾಲ ನಡಗೆಯದಾಗಲಿ, ಆಡಿಸುವ ಉಸಿರಿನದಾಗಲಿ, ಸದ್ದಾಗದಂತೆ ವಿಷ್ಣುವರ್ಧನನನ್ನು ಹಿಂಬಾಲಿಸಿದರು.

ವಿಷ್ಣುವರ್ಧನ, ಹಗಲು 'ಆಕಾಶದರ್ಶಿ'ಯ ಮೂಲಕ ನೋಡಿ, ಗುರುತು ಮಾಡಿಕೊಂಡಿದ್ದ ಸ್ಥಳದ ಬಳಿಗೆ ಸೈನಿಕರನ್ನು ಕರೆತಂದು—

'ಇಲ್ಲಿ ಕೋಟೆಗೆ ದೂರವೆಂದು ನಾಲ್ಕಾರು ಮರಗಳನ್ನು ಚೋಳರು ಉಳಿಯಗೊಟ್ಟಿದಾರೆ. ಈ ಮರಗಳ ಮೇಲೆ ಹತ್ತಿ ತುದಿಯ ರೆಂಬೆಗಳ ಮೇಲೆ ಕುಳಿತರೆ ಕೋಟೆಯೊಳಗಿನ ಹುಲ್ಲು ಬಣವೆಗಳನ್ನು ಕಾಣಬಹುದು. ಆ ಬಣವೆಗಳಿಗೆ,

ಗುರಿಯಿಟ್ಟು, ಪಂಜು ಕಟ್ಟಿದ ಬಾಣಗಳನ್ನು ಬಿಟ್ಟರೆ ಹುಲ್ಲು ಬಣವೆಗಳಿಗೆ ಉರಿ ಹೊತ್ತಿಸಬಹುದು. ಒಂದು ಪಂಜು ಕೋಟೆಯ ಮೇಲೆ ಹಾರಿದಾಗಲೂ, ನಾವು ಇರುವ ಸ್ಥಳ, ನಮ್ಮ ಉದ್ದೇಶ ಶತ್ರುಗಳಿಗೆ ಅರಿವಾಗುವುದರಿಂದ, ಬಾಣ ಬಿಡುವವರು ಒಮ್ಮೆಗೇ ಬಿಟ್ಟು, ಅಲ್ಲಿ ಉರಿ ಹೊತ್ತಿದುದು ಕಂಡ ಕೂಡಲೇ, ಇಲ್ಲಿಂದ ಮರೆಯಾಗಬೇಕು. ಒಂದು ಬಾಣವೂ ಹುಸಿಯಾಗಬಾರದು. ಒಂದೊಂದು ಬಣವೆಯನ್ನು ಹೊತ್ತಿಸಿದವರಿಗೆ ಒಂದೊಂದು ಗ್ರಾಮ ಬಹುಮಾನ'

—ಎಂದು ಹೇಳಿದ.

ದೊರೆಯ ಮಾತನ್ನು ಕೇಳಿದ ಬಿಲ್ಗಾರರು ಆ ಸಾಹಸಕ್ಕೆ ಸಿದ್ಧವಾದರು. ಆ ಬಳಿಕ ಬೋಕಿಮಯ್ಯ—

'ಪ್ರಭುಗಳು ನಮಗೆ ಕೆಲಸ ಒಪ್ಪಿಸಿದ್ದಾಯಿತು. ಆ ಕೆಲಸವನ್ನು ಮಾಡುವುದು ನಮ್ಮದಾಯಿತು, ತಾವಿನ್ನು ಸುರಕ್ಷಿತವಾಗಿ ಬಿಡಾರಕ್ಕೆ ಹಿಂದಿರುಗಬಹುದು'

—ಎಂದು ಬೇಡಿದ.

'ಅದಾಗದು. ನಮ್ಮ ಭಟರ ಪ್ರಾಣ ಹೋಗುವೆಡೆಯಲ್ಲಿ ನಮ್ಮದು ಹೋದರೂ ಸರಿಯೆ. ಕಂಡವರ ಪ್ರಾಣವನ್ನು ಸಾವಿಗೆ ತಳ್ಳಿ, ಜೀವ ಉಳಿಸಿಕೊಳ್ಳುವ ಬಯಕೆ ನಮಗಿಲ್ಲ. ಬೋಕಿಮಯ್ಯ-ಹೇಳಿದಷ್ಟು ಕೆಲಸಮಾಡಿ. ಇದು ಮಾತಿಗೆ ವೇಳೆಯಲ್ಲ'

—ಎಂದ ವಿಷ್ಣುವರ್ಧನ.

ದೊರೆ ಆ ಮಾತನ್ನು ಹೇಳಿದ ಬಳಿಕ ಬೋಕಿಮಯ್ಯ ಬೇರೇನೂ ಮಾತಾಡಲು ಆಗದಾಗಿ, ದೈವದ ಮೇಲೆ ಭಾರ ಹಾಕಿ, ಬಿಲ್ಗಾರರಿಗೆ ದೊರೆಯ ಅಪ್ಪಣೆಯನ್ನು ನೆರವೇರಿಸುವಂತೆ ತಿಳಿಸಿದ.

ಆತನ ಸೂಚನೆಯಂತೆ, ಬಿಲ್ಗಾರರು ಬಿಲ್ಲು ಬತ್ತಳಿಕೆಗಳೊಂದಿಗೆ ಮರದ ತುದಿಯನ್ನೇರಿ, ಕೊಂಬೆಗಳಿಗೆ ತೊಡೆ ಬಿಗಿದು ಕುಳಿತು ತಮ್ಮೊಂದಿಗೆ ತಂದ ಚಕಮಕಿಯ ಕಲ್ಲುಗಳನ್ನು ಕುಟ್ಟಿ, ಹತ್ತಿಯಲ್ಲಿ ಬೆಂಕೆ ಮಾಡಿ ಪಂಜುಗಳನ್ನು ಹೊತ್ತಿಸಿ, ಅವನ್ನು ತಮ್ಮ ತಲೆಗೆ ಬಿಗಿದುಕೊಂಡ ಬಾಣಗಳನ್ನು ಬಿಲ್ಲಿಗೆ ಹೂಡಿ, ಕತ್ತಲಿನಲ್ಲೂ ಅಸ್ಪಷ್ಟವಾಗಿ ಕಾಣುತ್ತಿದ್ದ ಹುಲ್ಲು ಬಣವೆಗಳನ್ನು ಗುರುತಿಸಿ, ಕಣ್ಣಿನಿಂದಲೇ ದೂರವನ್ನಳೆದು, ಅಷ್ಟು ದೂರ ಹೋಗುವಂತೆ ಬಿಟ್ಟರು.

ಉರಿಗಾರುತ್ತಾ ಹಾರಿ ಬಂದ ಆ ಬಾಣಗಳನ್ನು ನೋಡಿ, ಕೋಟೆಯ ಮೇಲೆ ಕಾವಲು ತಿರುಗುತ್ತಿದ್ದ ಚೋಳ ಸೈನಿಕರು ಉಲ್ಕೆಗಳು ಬೀಳುತ್ತಿವೆಯೇನೊ ಎಂದು ಭಾವಿಸಿ ಗಾಬರಿಯಾದರು.

’ಇದು ಏನೊ, ಎಲ್ಲಿಯೊ’

—ಎಂದು ಅವರು ಇನ್ನೂ ಯೋಚಿಸುತ್ತಿರುವಾಗಲೇ, ಕೋಟೆಯೊಳಗಿನ ಹತ್ತಾರು ಹುಲ್ಲು ಬಣವೆಗಳಲ್ಲಿ ಬೆಂಕಿ ಕಾಣಿಸಿಕೊಂಡು, ದಹದಹಿಸಿ ಉರಿಯಲಾರಂಭಿಸಿ, ಕೋಟೆಯಲ್ಲೆಲ್ಲಾ—

’ಬೆಂಕಿ....ಬೆಂಕಿ....ಬೆಂಕಿ....’

—ಎಂಬ ಹಾಹಾಕಾರ ಹರಡಿತು.

ಆ ಕೂಗನ್ನು ಅಣಗಸಿ ನಕ್ಕಂತೆ ಮತ್ತೆ ಹತ್ತಾರು ಕಡೆ ಬೆಂಕಿ ಕಾಣಿಸಿಕೊಂಡು, ಇರುಳು ಹಗಲಾದಷ್ಟು ಬೆಳಕಾಯಿತು.

ಗಳಿಗೆ ಗಳಿಗೆಗೂ ಕೋಟೆಯೊಳಗೆ ಕೂಗು ಹೆಚ್ಚಿತು.

ಆ ಕೂಗನ್ನು ಹುಡುಕಿಕೊಂಡು ಬಂದಂತೆ ಸದ್ದುಮಾಡದೆ, ಹೊಯ್ಸಳ ಪಾಳಯದ ಕಡೆಯಿಂದ ಸಹಸ್ರಾರು ಸೈನಿಕರು ಕೋಟೆಯತ್ತ ನುಗ್ಗುವುದನ್ನು ಕಂಡು, ವಿಷ್ಣುವರ್ಧನ ಚಕಿತನಾಗಿ, ಬಳಿಯಲ್ಲಿದ್ದ ಬೋಕಿಮಯ್ಯನನ್ನು—

'ಇದೇನು?'

—ಎಂದು ಕೇಳಿದ.

'ದೊರೆಗಳು ಹೀಗೆ ಎಂದು ಹೇಳಿದಾಗಲೇ, ಪ್ರಭುಗಳ ಚಿತ್ತ ಮನವರಿಕೆಯಾಗಿ, ಗಂಗರಾಜರಿಗೆ ತೊಂದರೆ ಕೊಡದಂತೆ ಹಗಲಾಗುವುದರೊಳಗೆ ಕೋಟೆಯನ್ನು ಸಾಧಿಸಬೇಕೆಂದು, ಆ ಕೂಗು ಕೇಳಿಸಿದಾಗ ನಿಚ್ಚಣಿಗೆಗಳೊಡನೆ ಕೋಟೆಯತ್ತ ನುಗ್ಗಲು ಸಿದ್ಧರಾಗಬೇಕೆಂದು ವೇಳೆ ವಡಿಚರ ಪಡೆಗೆ ಹೇಳಿ ಬಂದಿದ್ದೆ.'

—ಎಂದ ಬೋಕಿಮಯ್ಯ

'ಒಳ್ಳೆಯದನ್ನೇ ಮಾಡಿದಿರಿ. ಹಗಲಾಗುವುದರೊಳಗೆ ಕೋಟೆಯನ್ನು ಹಿಡಿದೇ ಪಾಳಯಕ್ಕೆ ಹಿಂದಿರುಗೋಣ.'

—ಎಂದ ವಿಷ್ಣುವರ್ಧನನೂ ಉತ್ಸಾಹಿತನಾಗಿ.

ಕೋಟೆಯಲ್ಲಿ ಅಲ್ಲಲ್ಲಿ ಹತ್ತಾರು ಕಡೆ ಹೊತ್ತಿದ ಬೆಂಕಿಗಳನ್ನು ಆರಿಸುವುದರಲ್ಲಿ ನಿರತರಾಗಿ, ಕೋಟೆಯ ಮೇಲಿನ ಕಾವಲವರೂ ಅತ್ತ ನೋಡುತ್ತಿರುವಾಗಲೇ, ವೇಳೆ ವಡಿಚರ ಪಡೆ ಮಿಂಚಿನ ವೇಗದಲ್ಲಿ ಕೋಟೆಯ ಬಳಿಸೇರಿ, ಕೋಟೆಯ ಗೋಡೆಗೆ ನಿಚ್ಚಣಿಗೆಗಳನ್ನು ಒರಗಿಸಿ, ಕಪಿಗಳಂತೆ ವೇಗವಾಗಿ ಮೇಲೇರಿ, ಕಾವಲು ಭಟರು 'ಇದೇನು' ಎಂದು ತಿರುಗಿ ನೋಡುವಷ್ಟರಲ್ಲಿ ಅವರನ್ನು ತುಂಡರಿಸಿ, ಕೋಟೆಯೊಳಗೆ ನುಗ್ಗಿದರು. ಹತ್ತಾರು ಜನ ಕೋಟೆಯ ಬಾಗಿಲಬಳಿ ಸೇರಿ, ಅಲ್ಲಿ ಕಾವಲಿದ್ದವರನ್ನು

ಕತ್ತರಿಸಿ, ಕೋಟೆಯ ಬಾಗಿಲಿಗೆ ಬಿಗಿದ ಸರಪಳಿಯನ್ನು ಬಿಚ್ಚಿ, ಲಾಳಮುಂಡಿಗೆಗಳನ್ನು ಸರಿಸಿ ಬಾಗಿಲು ತೆರೆದರು.

ಆ ಬಾಗಿಲು ಬಾಯಿ ಬಿಡುವುದನ್ನೇ ಕಾದಿದ್ದ ಕೋಟೆಯ ಹೊರಗಿನ ವೇಳೆವಡಿಚರ ಪಡೆ, ಕೆರೆಯ ನೀರಿನಂತೆ ಕೋಟೆಯೊಳಗೆ ನುಗ್ಗಿತು.

ಹಗಲಿನ ಯುದ್ಧಾಯಾಸದಿಂದ ಮೈಮರೆತು ಮಲಗಿದ ಚೋಳ ಸೈನಿಕರು ಅಗ್ನಿಕುಂಡದ ಅನಾಹುತದಿಂದ ದಿಗ್ಭ್ರಾಂತರಾಗಿ, ಅರೆ ಎಚ್ಚರವಾದ ಹೊತ್ತಿನಲ್ಲಿ ಕೋಟೆಯ ಒಳಗೆ ನುಗ್ಗಿದ ಹೊಯ್ಸಳ ವೇಳೆವಡಿಚರ ಪಡೆ ಅವರು ಕತ್ತಿ ಧರಿಸುವುದಕ್ಕೂ ಅವಕಾಶ ಕೊಡದೆ ಕೊಚ್ಚಿ ಕೆಡಹಿತು.

ಇದನ್ನು ಕಂಡ ವಿಷ್ಣುವರ್ಧನನೂ ಕತ್ತಿಯನ್ನು ಒರೆಗಳಚಿ, ಹಿಂಬಾಲಿಸಿದ ಬೋಕಿಮಯ್ಯ, ಕೇತಯನಾಯಕರೊಂದಿಗೆ ಕೋಟೆಯತ್ತ ದೌಡಾಯಿಸಿ, ಸೇನೆಯೊಂದಿಗೆ ಕೋಟೆಯನ್ನು ಪ್ರವೇಶಿಸಿದ.

ಅನಿರೀಕ್ಷಿತವಾಗಿ ಶತ್ರುಸೇನೆ ಕೋಟೆಯೊಳಗೆ ನುಗ್ಗಿದುದನ್ನು ಕಂಡ ಚೋಳಸೇನೆ, ಭಯದಿಗ್ಭ್ರಾಂತವಾಗಿ, ಯುದ್ಧ ಮಾಡುವುದನ್ನು ಮರೆತು, ಜೀವ ಉಳಿಸಿಕೊಳ್ಳಲು ದಾರಿಗಂಡತ್ತ ಓಡಿತು.

ಗೆದ್ದು ಕೋಟೆಯನ್ನು ಹಿಡಿಯಲೇಬೇಕೆಂಬ ಹಟದಿಂದ ನುಗ್ಗಿದ ಎರಡು ಸಾವಿರ ಮಂದಿ ಭಾಷೆಯಾಳುಗಳ ವಿಕಟಾಟ್ಟಹಾಸದ ಇದಿರು, ಚೋಳಸೇನೆ, ಉರಿ ಸೋಕಿದ ಬೆಣ್ಣೆಯಂತೆ ಕರಗಿತು. ಬಣವೆಗಳ ಬೆಂಕಿಯು ಕೆಂಬೆಳಕಿನಲ್ಲಿ ರಕ್ತಸ್ನಾನ ಮಾಡಿ, ವಿಕಟಾಟ್ಟಹಾಸದಿಂದ ಮುಂಬರಿಯುವ ವೇಳೆವಡಿಚರನ್ನು ಕಂಡು, ಭೂತದರ್ಶನವಾದಂತೆ ಬೆದರಿ, ಪಲಾಯನ ಮಾಡಿದರು ಚೋಳರು. ಸಾವಿರಾರು ಜನ ಉರಿಯುವ ಬಣವೆಯ ಹುಲ್ಲನ್ನೇ ಕಿತ್ತು ಬಾಯಲ್ಲಿಟ್ಟುಕೊಂಡು ಶರಣಾಗತರು, ಬೆತ್ತಲೆಯಾಗಿ ನಿಂತು ಜೀವದಾನ ಬೇಡಿದರು.

ಉರಿದು ನೆಲಸಮವಾದ ಹುಲ್ಲು ಬಣವೆಗಳ ಬದಲು ಮುಗಿಲುದ್ದ ಹೆಣದ ಬಣವೆಗಳು ಬೆಳೆದವು.

ವೇಳೆವಡಿಚರಂತೆಯೇ, ವಿಷ್ಣುವರ್ಧನನ ಖಡ್ಗಕ್ಕೂ ವಿಶ್ರಾಂತಿ ಇರಲಿಲ್ಲ. ನೂರಾರು ಜನ ಚೋಳ ಸೈನಿಕರ ರಕ್ತ ಕುಡಿದು ಉನ್ಮತ್ತಳಾಗಿ ಗಹ ಗಹಿಸಿದಳು, ಆತನ ಖಡ್ಗಕಾಳಿ.

ಕೋಟೆಯಲ್ಲಾದ ಈ ಅಗಾಧ ಗದ್ದಲವನ್ನು ಕೇಳಿ ಎಚ್ಚರವಾದ ಗಂಗರಾಜರು, ಎಚ್ಚೆತ್ತು ಕಣ್ಣುಜ್ಜಿಕೊಂಡು ಕೋಟೆಯತ್ತ ನೋಡುವಾಗ, ಆ ಕಡೆಯಿಂದ—

’ಉಘೇ .... ಉಘೇ ... ವಿಷ್ಣುವರ್ಧನ ಮಹಾರಾಜ ಉಘೇ... ಉಘೇ’ ಎಂಬ ಜಯ ಘೋಷವನ್ನು ಕೇಳಿ ಇದೇನು ಪವಾಡವೆಂದು ಚಕಿತರಾದರು. ಅವರ ಕಿವಿ ಕೇಳಿದ ಜಯಘೋಷನವನ್ನು, ಎಚ್ಚೆತ್ತ ಹೊಯ್ಸಳ ಸೇನೆಯೂ ಕೇಳಿತ್ತು.

ಆ ಜಯ ಘೋಷದಿಂದ ಉತ್ತೇಜಿತವಾದ ಹೊಯ್ಸಳ ಸೇನೆಯೂ ಉತ್ಸಾಹದಿಂದ ಕೇಕೆ ಹಾಕಿತು. ಹೇಗಿದ್ದವರು ಹಾಗೇ, ಕೈಗೆ ಸಿಕ್ಕ ಶಸ್ತ್ರಗಳನ್ನು ಹಿಡಿದು, ಕೋಟೆಯತ್ತ ನುಗ್ಗಿದರು.

ಜೀವ ಉಳಿಸಿಕೊಳ್ಳಲೆಂದು ಕೋಟೆಯೊಳಗಿನಿಂದ ಹೊರಗೆ ಓಡಿಬಂದ ನೂರಾರು ಜನ ಚೋಳ ಸೈನಿಕರು, ಒಳನುಗ್ಗುವ ಸೇನೆಯ ಕುದುರೆಗಳ ಕಾಲ ತುಳಿತಕ್ಕೆ ಸಿಕ್ಕು ಜೀವ ಕಳೆದುಕೊಂಡರು. ಸಾವಿರಾರು ಜನ, ಜೀವ ಉಳಿಸಿಕೊಳ್ಳಲು ಬೇರೆ ದಾರಿ ಕಾಣದೆ, ತುಂಬಿ ಹರಿಯುವ ಕಾವೇರಿಯ ಹೊಳೆಗೆ ಧುಮುಕಿ ತೇಲಿ ಹೋದರು.

ಪಾಳಯದತ್ತಣಿಂದ ನುಗ್ಗಿದ ಸೇನೆಯ ಅಗ್ರಭಾಗದಲ್ಲೇ ಕುದುರೆಯೇರಿಬಂದ ಗಂಗರಾಜರು, ಕೋಟೆಯೊಳಗೆ ಪ್ರವೇಶಿಸುವ ವೇಳೆಗೆ ಚೋಳ ಸಾಮನ್ತ ದಾಮೋದರನ ಕತ್ತರಿಸಿದ ತಲೆಯನ್ನು, ಖಡ್ಗದ ತುದಿಯಲ್ಲಿ ತನ್ನ ಪರಾಕ್ರಮ ಪತಾಕೆಯಂತೆ ಹಿಡಿದ ವಿಷ್ಣುವರ್ಧನ ಅವರಿಗೆ ಕಾಣಿಸಿಕೊಂಡ.

’ಪ್ರಭೋ’

—ಎಂದು ಕೂಗುತ್ತಾ ತನ್ನತ್ತ ಧಾವಿಸಿದ ಗಂಗರಾಜರನ್ನು ಕಂಡ ವಿಷ್ಣುವರ್ಧನ, ತನ್ನ ಕುದುರೆಯನ್ನು ಅವರತ್ತ ತಿರುಗಿಸಿ—

’ಜನನಾಥಪುರ ನಮ್ಮದಾಯಿತು ಗಂಗರಾಜರೇ, ಜನನಾಥಪುರ ನಮ್ಮದಾಯಿತು’

—ಎಂದ ಉತ್ಸಾಹದಿಂದ, ಸಾಮಾನ್ಯ ಸೈನಿಕನಂತೆ ಕೇಕೆ ಹಾಕಿ.

ಆತನ ಉತ್ಸಾಹ, ಹರ್ಷವನ್ನು ಕಂಡು ಗಂಗರಾಜರಿಗೆ, ಸಂತೋಷದಿಂದ ಗಂಟಲು ಕಟ್ಟಿ ಹೋಯಿತು. ಕುದುರೆಯ ಮೇಲೆ ಕೂತಿದ್ದಂತೆಯೇ ದೊರೆಯನ್ನು ಆಲಿಂಗಿಸಿದರು.

ದೊರೆ, ದಂಡನಾಯಕ ಇಬ್ಬರ ಕಣ್ಣುಗಳಿಂದಲೂ ಹರ್ಷಾಶ್ರುಧಾರೆ ಧಾರೆಯಾಗಿ ಉರುಳಿತು. ಆ ಹರ್ಷದ ನೆರೆ ಇಳಿದ ಬಳಿಕ ಈ ಅದ್ಭುತ ಹೇಗೆ ಸಾಧ್ಯವಾಯಿತೆಂಬುದನ್ನು ಕೇತಯನಾಯಕನಿಂದ ಅರಿತು ಮೈಮರೆತರು ಗಂಗರಾಜರು.

ಜನನಾಥಪುರದ ಕೋಟೆಯನ್ನೇರಿ, ಹೊಳೆಯಾಚೆಯ ತಲಕಾಡನ್ನು ಬಯಕೆಗಣ್ಣುಗಳಿಂದ ದಿಟ್ಟಿಸಿ ನೋಡಿದ ಗಂಗರಾಜರು—

’ಆರ್ಧಸೀಮೆ ತಾಯಿಯವರ ಪ್ರೀತಿಗೆ ಸೋತಿತು; ಜನನಾಥಪುರ ನಿಮ್ಮ ತೋಳಿಗಾಯಿತು. ಅದೊಂದನ್ನಾದರೂ ನಮ್ಮ ಪಾಲಿಗೆ ಬಿಡಿ. ನಾವು ಬಂದದ್ದು ಬರಡಾಗದಿರಲಿ’

—ಎಂದು ತಲಕಾಡಿನತ್ತ ಕೈದೋರಿ, ವಿಷ್ಣುವರ್ಧನನನ್ನು ಬೇಡಿದರು.

'ಅದಿಯಮನ ತಲೆ ನಿಮ್ಮ ಮೀಸಲು ಎಡೆ ಎಂಬುದನ್ನು ನಾವು ಮರೆತಿಲ್ಲ ಪ್ರಧಾನರೇ. ಅದು ನಿಮ್ಮದೇ.'

—ಎಂದು ಆಶ್ವಾಸನವಿತ್ತ ವಿಷ್ಣುವರ್ಧನ.

'ನಿಮ್ಮನ್ನು ನಮ್ಮೊಂದಿಗೆ ಕರೆತಂದುದು ಕಡೆಗೂ ನಮ್ಮ ತಪ್ಪಾಯಿತು. ಅವಕಾಶ ಕೊಟ್ಟರೆ ನೀವು ತಲಕಾಡನ್ನೂ ನಮ್ಮ ಪಾಲಿಗೆ ಉಳಿಸುವುದಿಲ್ಲ.'

—ಎಂದು ಹೇಳಿದ ಗಂಗರಾಜರು, ಆ ಗಳಿಗೆಯಲ್ಲೇ ತಲಕಾಡಿನತ್ತ ನುಗ್ಗುವ ದಾರಿ ಏನೆಂದು ಯೋಚಿಸ ತೊಡಗಿದರು.

ಆ ವೇಳೆಗೆ ಬೋಕಿಮಯ್ಯ ಅವರ ಕಿವಿಗೆ ಅಮೃತವೆರೆಯುವ ವಾರ್ತೆಯನ್ನು ತಂದ.

೧೦

ಸಂತೋಷದಿಂದ ಕುಣಿಯುತ್ತಾ, ಉತ್ಸಾಹದಿಂದ ಕೇಕೆ ಹಾಕುತ್ತಾ ತಮ್ಮ ಬಳಿ ಸಾರಿದ ಗರುಡ ಬೋಕಿಮಯ್ಯನನ್ನು ಕಂಡು, ವಿಷ್ಣುವರ್ಧನ ಚಕಿತನಾಗಿ—

'ಮತ್ತೇನು ಸಂತೋಷವಾರ್ತೆಯನ್ನು ತಂದೆ ಬೋಕಿಮಯ್ಯ?'

—ಎಂದು ಕೇಳಿದ.

'ತಲಕಾಡು....ತಲಕಾಡು....ನಮ್ಮದೇ....'

—ಎಂದ ಬೋಕಿಮಯ್ಯ ಉತ್ಸಾಹದಲ್ಲಿ ತೊದಲುತ್ತಾ.

'ಏನು? ತಲಕಾಡೂ ಉರುಳಿತೆ?'

—ಸಿಡಿಲು ಬಡಿದಂತೆ ಕೇಳಿದರು ಗಂಗರಾಜರು.

ಬೋಕಿಮಯ್ಯನಿಗೆ ತನ್ನ ಸಂತೋಷದಲ್ಲಿ ಒಂದು ಗಳಿಗೆ ಮಾತೇಹೊರಡಲಿಲ್ಲ. ಒಂದು ಗಳಿಗೆ ಸುದಾರಿಸಿ ಉಸಿರು ತಿರುಗಿಸಿಕೊಂಡು ಹೇಳಿದ—

'ಊಹೂ....ತಲಕಾಡು ಇನ್ನೂ ಉರಳಲಿಲ್ಲ. ಆದರೆ ಉರಳಲಿಕ್ಕೆ ಬಹಳ ಹೊತ್ತು ಬೇಕಿಲ್ಲ.'

'ಅಂದರೆ....'

'ಪ್ರಭುಗಳ ಜಾಣ್ಮೆಯಿಂದ ಜನನಾಥಪುರ ನಮ್ಮದಾದ ಬಳಿಕ, 'ತಲಕಾಡು ಇಷ್ಟು ಹತ್ತಿರ. ಈ ಹಾಳು, ಹೊಳೆಯೊಂದು ನಡುವೆ ಇಲ್ಲದಿದ್ದರೆ, ಇವೊತ್ತೆ ತಲಕಾಡನ್ನು ಹಿಡಿದು ಬಿಡಬಹುದಾಗಿತ್ತಲ್ಲಾ' ಎಂದು ಯೋಚಿಸುತ್ತಿದ್ದೆ. ಅಷ್ಟರಲ್ಲೇ ನಮ್ಮ ಕಡೆಯ ಸೈನಿಕನೊಬ್ಬ, 'ತಿಗುಳರು ಜೀವ ಉಳಿಸಿಕೊಂಡು ಓಡುವ ಅವಸರದಲ್ಲಿ ಹೊಳೆ ದಂಡೆಯಲ್ಲಿದ್ದ 'ಬೆಟ್ಟದೆಪ್ಪ'ಗಳನ್ನು ನಾಶಮಾಡದೆ, ಹಾಗೇ ಬಿಟ್ಟು ಹೋಗಿದಾರೆ. ಬೇಕಾದರೆ, ಈಗಲೇ ಹೊಳೆ ದಾಟ ಬಹುದು ಎಂಬ ಸುದ್ದಿ ತಂದ. ಆ ಸಂತೋಷವನ್ನು ನಿಮಗೆ ತಿಳಿಸಬೇಕೆಂದು ಬಂದೆ'

—ಎಂದು ತನ್ನ ಸಂತೋಷಕ್ಕೆ ಕಾರಣವನ್ನು ವಿವರಿಸಿದ ಬೋಕಿಮಯ್ಯ.

ಬೋಕಿಮಯ್ಯ ಹೇಳಿದುದನ್ನು ಕೇಳಿ ಗಂಗರಾಜರಿಗೆ ಒಂದು ಗಳಿಗೆ ತಮ್ಮ ಕಿವಿಯನ್ನು ನಂಬುವುದೂ ಆಗಲಿಲ್ಲ. ತುಂಬಿದ ಹೊಳೆಯನ್ನು ದಾಟಿ ತಲಕಾಡಿಗೆ ಹೇಗೆ ಲಗ್ಗೆ ಹಾಕುವುದು ಎಂದು ಯೋಚಿಸುತ್ತಿದ್ದ ಅವರಿಗೆ, ತಮ್ಮ ಚಿಂತೆ ಅಷ್ಟು ಸುಲಭವಾಗಿ ಪರಿಹಾರವಾಗುವುದೆಂದು ಕನಸು ಮನಸಿನಲ್ಲಿಯೂ ಅನಿಸಿರಲಿಲ್ಲ.

ಎಂತಲೇ ಆ ಸುದ್ದಿಯನ್ನು ಕೇಳಿ ಪ್ರಚಂಡ ಆಶ್ಚರ್ಯವಾಯಿತು. ಆ ಆಶ್ಚರ್ಯದ ಏರು ಇಳಿಯುತ್ತಿದ್ದ ಹಾಗೇ, ಹಾಗೇ ನೆಲದ ಮೇಲೆ ಬಾಗಿ—

'ಪ್ರಭೋ ಆದಿ ತೀರ್ಥಂಕರಾ! ನಿನ್ನ ಕೃಪೆ ಅಗಾಧವಾದದ್ದು, ನಿನ್ನ ದಯೆ ಎಂದೆಂದೂ ಹೀಗೇ ಅಪಾರವಾಗಿ ಅಮೃತವರ್ಷವಾಗಿ ನಮ್ಮ ನೆತ್ತಿಯ ಮೇಲಿರಲಿ'—ಎಂದು ದೈವಾನುಗ್ರಹಕ್ಕೆ ಮಣಿದು ದೊರೆಯತ್ತ ತಿರುಗಿ—

'ಪ್ರಭೋ ತಲಕಾಡಿನತ್ತ ನಡೆಯಲು ನಮಗೆ ಅಪ್ಪಣೆಯಾಗಲಿ. ನಾಳೆ ಅದಿಯಮನ ಅರಮನೆಯಲ್ಲಿ ಪ್ರಭುಗಳ ಮಧ್ಯಾಹ್ನದ ಭೋಜನಕ್ಕೆ ಎಡೆ ಸಿದ್ಧಮಾಡಿಸುತ್ತೇನೆ.'

—ಎಂದು ಬೇಡಿದರು.

'ಗೆದ್ದು ಬನ್ನಿ, ದಂಡನಾಯಕರೇ, ನಿಮ್ಮ ಕೀರ್ತಿ ಲೋಕ ಜ್ಯೋತಿಯಾಗಲಿ'

—ಎಂದು ಎದೆತುಂಬಿ ಹಾಕಿಸಿದ ವಿಷ್ಣುವರ್ಧನ—

ಆ ಗಳಿಗೆಯಲ್ಲೇ ಸಕಲಸೇನೆಯೂ ತಲಕಾಡಿನ ದಾಳಿಗೆ ಸಿದ್ದರಾಗಬೇಕೆಂದು ಗಂಗರಾಜರು ಸೇನೆಗೆ ಅಪ್ಪಣೆಮಾಡಿ, ಬೆಟ್ಟದೆಪ್ಪಗಳಿದ್ದ ಹೊಳೆಕೆರೆಯ ಬಳಿಗೆ ಧಾವಿಸಿದರು.

ಮಿಂಚಿನವೇಗದಲ್ಲಿ ಸಿದ್ಧವಾದ ಸೇನೆ, ತೆಪ್ಪಗಳಲ್ಲಿ ಕುಳಿತು ಕೇಕೆ ಹಾಕಿತು. ಆ ಕೇಕೆಯ ಅಬ್ಬರಕ್ಕೆ ಕಾವೇರಿಯ ಮೈ ನಡುಗಿದಂತೆ, ತೆರೆಗಳು ಹೊಯ್ದಾಡಿದವು.

ಆದಷ್ಟು ಬೇಗ ತಲಕಾಡಿನ ತೀರವನ್ನು ಸೇರಬೇಕೆಂಬ ಉತ್ಸಾಹದಿಂದ ಉಕ್ಕಿದ ತೋಳುಗಳ ಸೈನಿಕರು ಹುಟ್ಟುಗಳನ್ನು ವೇಗವಾಗಿ ಮೀಟಿ, ತೆಪ್ಪಗಳನ್ನು ನಡೆಸಿದರು.

ಕನ್ನಡಿಗರಾದ, ದೋಣಿಗಳನ್ನು ನಡೆಸುವ ಪರಿವಾರದ ಜನವೂ ಉತ್ಸಾಹದಿಂದ ಹೊಯ್ಸಳ ಸೇನೆಗೆ ನೆರವಾದರು.

ಚೋಳ ಬಲವನ್ನು ತುಳಿಯುವ ಮದ್ದಾನೆಗಳಂತೆ ಬೆಟ್ಟದೆಪ್ಪಗಳು ತೋರಿದವು.

ತೆಪ್ಪಗಳಲ್ಲಿ ಎಡೆ ದೊರೆತವರು, ಅದರಲ್ಲಿ ಕುಳಿತರೆ, ಎಷ್ಟೋ ಜನ ಈಜಿಯೇ ಬರುತ್ತೇವೆಂದು ತುಂಬು ಹೊಳೆಯಲ್ಲಿ ಧುಮುಕಿದರು. ಎಷ್ಟೋ ಜನ ಸಾಹಸಿಗಳು ಚೋಳ ಸೈನಿಕರ ಹೆಣಗಳನ್ನು ಹೊಳೆ ನೀರಿನಲ್ಲಿ ಹಾಕಿ, ತೇಲುವ ಅವನ್ನೇ ಹಿಡಿದು ಹೊಳೆಯನ್ನು ದಾಟಿದರು.

ಉಳಿದವರು ಜನನಾಥಪುರದವರಿಂದ ಹೊಳೆಯ ನೀರಿನ ಆಳ ಎಲ್ಲಿ ಕಡಮೆಯೆಂದು ತಿಳಿದುಕೊಂಡು, ಆನೆಗಳನ್ನು ದಾಟಿಸಬಹುದಾದ ಕಡೆಗಳಲ್ಲಿ ಅವನ್ನು ದಾಟಿಸಿದರು.

ಒಮ್ಮೆ ತಲಕಾಡಿನ ಬಳಿ ತಲುಪಿದ ತೆಪ್ಪಗಳು, ಅಲ್ಲಿ ಸೈನಿಕರನ್ನಿಳಿಸಿ, ಮತ್ತೆ ಹಿಂದಿರುಗಿ,—ಹೀಗೇ ಹತ್ತಾರು ಬಾರಿ ಸೈನಿಕರನ್ನು, ಹಗುರವಾದ ರಥಗಳನ್ನು, ಅಸ್ತ್ರಗಳನ್ನು ಸಾಗಿಸಿದರು.

ತಲಕಾಡಿನ ಬಳಿಯಲ್ಲಿ, ಕಾವೇರಿಯ ಮರಳಿನಲ್ಲಿ ಕಿಕ್ಕಿರಿದ ಹೊಯ್ಸಳಸೇನೆಯ ಅಬ್ಬರಕ್ಕೆ ತಲಕಾಡು ಗಡಗಡ ನಡುಗಿತು.

ತಮಗೆ ನೆರವಾದ ಬೆಸ್ತ ಜನರಿಂದ ತಲಕಾಡಿನ ಹೊಳೆಬದಿಯ ಕೋಟೆಯ ವಿವರಗಳನ್ನು ಅರಿತುಕೊಂಡ ಗಂಗರಾಜರು, ಅವರು ತಿಳುಹಿಸಿದ ನಾಲ್ಕಾರು ಎಡೆಗಳಲ್ಲಿ ಉಚಿತವಾದುದನ್ನು ಆರಿಸಿ, ಆ ಕಡೆ ಸೇನೆಯನ್ನು ನಡೆಯಿಸಿದರು.

ಹೊಯ್ಸಳ ಸೇನೆ ತಲಕಾಡಿನ ಮೇಲೆ ದಾಳಿ ಮಾಡುವ ವೇಳೆಗೆ ತಲಕಾಡಿನ ನಗರದಲ್ಲೂ ಕೋಲಾಹಲವಾಗಿತ್ತು.

ಅದಿಯಮ ಏನಾದರೂ ಜನನಾಥಪುರ ಒಂದು ವಾರದ ಕಾಲವಾದರೂ, ಹೊಯ್ಸಳರ ದಾಳಿಯನ್ನು ತಡೆಯಬಹುದೆಂದೂ, ಒಂದುವೇಳೆ ಆ ಕೋಟೆ ಉರುಳಿದರೂ, ಕಾವೇರಿಯ ಪ್ರವಾಹ ತನಗೆ ಒಂದೆರಡು ದಿನ ರಕ್ಷಣೆ ನೀಡಬಹುದೆಂದೂ ನಂಬಿದ್ದ.

ಆದರೆ ಆ ನಂಬಿಕೆ, ಭರವಸೆಗಳೆಲ್ಲವೂ, ಜನನಾಥಪುರದಲ್ಲಿ ಹಬ್ಬಿದ ಬೆಂಕಿಯಲ್ಲಿ ಭಸ್ಮವಾಗಿ, ಒಂದೇದಿನದಲ್ಲಿ ಜನನಾಥಪುರ ಉರುಳಿ, ಹೊಯ್ಸಳ ಸೇನೆ, ಆ ದಿನವೇ ತಲಕಾಡಿನ ಮೇಲೆ ನುಗ್ಗಿದುದನ್ನು ಕಂಡು, ಅದಿಯಮ ದಿಗ್ಭ್ರಾಂತನಾಗಿದ್ದ.

ಜನನಾಥನ ಪುರದ ಬೆಂಕಿಯನ್ನು ನೋಡಿದ ತಲಕಾಡಿನ ಜನವೂ 'ಹೊಯ್ಸಳರ ಪಡೆಯಲ್ಲಿ ಕೊಳ್ಳಿಯ ದೆವ್ವಗಳ ಪಡೆಯೇ ಇರಬೇಕು. ಇಲ್ಲವಾದರೆ ಆ ಕಲ್ಲಿನ ಕೋಟೆಯನ್ನು ಕರ್ಪೂರದ ಹಾಗೆ ಉರಿಸಿ, ವಶಮಾಡಿಹೊಳ್ಳುವುದು ಸಾಧ್ಯವೇ?' ಎಂದು ಕಥೆಕಟ್ಟಿ, ತಾನು ಕಟ್ಟಿದ ಕಥೆಗೆ ತಾನೇ ಹೆದರಿ, 'ಆ ಭೂತ ಪಡೆಯ ಮುಂದೆ ಅದಿಯಮ ಏನು ರಕ್ಷಣೆ ನೀಡಿಯಾನು' ಎಂದು, ದಿಕ್ಕಾಪಾಲಾಗಿ ಓಡತೊಡಗಿದ್ದರು.

ಒಬ್ಬೊಬ್ಬರಿಗೂ ಈ ಅನಿರೀಕ್ಷಿತ ದಾಳಿಯ ಹೊತ್ತಿನಲ್ಲಿ ತಮ್ಮ ಜೀವ ಉಳಿಸಿಕೊಳ್ಳುವುದು ಹೇಗೆಂಬ ಚಿಂತೆಯೇ ಹಿರಿದಾಗಿ, ಕೆಲವರು ತಮ್ಮ ಧನಕನಕಗಳನ್ನು ರಕ್ಷಿಸಿಕೊಳ್ಳುವ ಆತುರದಲ್ಲಿ ಕಳ್ಳದಾರಿಗಳನ್ನು ತೆರೆದು, ಹೊಯ್ಸಳ ಸೇನೆಗೆ ಅನುಕೂಲ ಮಾಡಿಕೊಟ್ಟರು.

ಹೀಗಾಗಿ ಹೊಯ್ಸಳ ಸೇನೆ, ಹೆಚ್ಚು ಶ್ರಮವಿಲ್ಲದೆ ತಲಕಾಡನ್ನು ಪ್ರವೇಶಿಸುವುದು ಸಾಧ್ಯವಾಯಿತು.

ಮೊದಲೇ ಜನನಾಥಪುರದಲ್ಲಾದ ಅನಿರೀಕ್ಷಿತ ಗೆಲುವಿನಿಂದ ಉತ್ಸಾಹಿತವಾದ ಹೊಯ್ಸಳ ಸೈನಿಕರು, ತಲಕಾಡು ಪ್ರವೇಶವೂ ಸುಲಭವಾದುದನ್ನು ಕಂಡು, ದೈವವೇ ತಮಗೆ ಬೆಂಬಲವಾಗಿದೆಯೆಂದು ನಂಬಿ, ನೂರ್ಮಡಿ ಉತ್ಸಾಹದಿಂದ, ಇದಿರಾದ ಚೋಳ ಬಲವನ್ನು ಸದೆಯ ತೊಡಗಿದರು,.

ಹಗಲಿನ ಕೆಂಬೆಳಕು ಮುಗಿಲಿನಲ್ಲಿ ಹರಡುವ ಹೊತ್ತಿಗೆ, ತಲಕಾಡಿನ ಬೀದಿ ಬೀದಿಯಲ್ಲೂ ರಕ್ತದ ಹೊಳೆ ಹರಿಯಿತು.

ಉಳಿದ ಸೈನಿಕರಿಗೆ ನಗರವನ್ನು ವಶಪಡಿಸಿಕೊಳ್ಳುವುದನ್ನು ಒಪ್ಪಿಸಿದ ಗಂಗರಾಜರು ಆರಿಸಿದ ಆಳುಗಳೊಂದಿಗೆ, ಇದಿರಾದವರನ್ನು ಕೊಚ್ಚಿ ಕೆಡಹುತ್ತಾ ತಮ್ಮ ಭೇಟಿಯಾದ ಅದಿಯಮನನ್ನು ಹುಡುಕಿಕೊಂಡು ಅಲೆಯತೊಡಗಿದರು. ಅವರ ತೋಳುಗಳಿಗೆ ಆ ದಿನ ದೈತ್ಯಬಲ ಬಂದಂತಿತ್ತು. ಅವರ ಪ್ರಚಂಡ ಕ್ರೋಧದ ಇದಿರು, ಇದಿರಾದ ಸೇನೆ ಮಂಜಿನಂತೆ ಕರಗಿತು.

ನಖಶಿಖಾಂತವಾಗಿ, ಚೋಳ ರಕ್ತಸ್ನಾನ ಮಾಡಿದ ಗಂಗರಾಜರು, ಅದಿಯಮನನ್ನು ಅರಸುತ್ತಾ ಅವನು ಅವಿತಿದ್ದ ಅರಮನೆಗೇ ನುಗ್ಗಿದರು.

ನಗರವನ್ನು ಉಳಿಸುವುದಾಗದಿದ್ದರೆ ಹೋಗಲಿ, ತಮ್ಮ ಪ್ರಭುವಿನ ತಲೆಯನ್ನಾದರೂ ಉಳಿಸಬೇಕು ಎಂಬ ಹಟದಿಂದ ಅರಮನೆಯನ್ನು ಕಾಯುತ್ತಿದ್ದ ಚೋಳಪಡೆ, ಗಂಗರಾಜರನ್ನು ಎದುರಿಸಿತು. ಆದರೆ ಗಂಗರಾಜರ ಹಿಂದೆ ಬಂದ ಪಡೆಯವರ ಪೌರುಷದ ಇದಿರು, ಚೋಳ ಸೈನಿಕರು ಬೆಂಕಿಯನ್ನು ಮುತ್ತಲೆತ್ತಿಸಿದ ಪತಂಗಗಳಾದರು.

ಚೋಳರ ಬಯಕೆ ಮುದಿರು ಬಿದ್ದಂತೆ ಅರಮನೆಯ ಹೆಬ್ಬಾಗಿಲು ಮುರಿದು ಬಿತ್ತು.

'ಅದಿಯಮಾ, ಕುನ್ನಿ, ಎಲ್ಲಿ ಅಡಗಿದ್ದೀಯೆ ಹೇಡಿ?'

—ಎಂದು ತನ್ನ ಹೆಸರು ಹಿಡಿದು, ಅರಮನೆಯ ಗೋಡೆಗಳೂ ನಡುಗುವಂತೆ ಅಬ್ಬರಿಸುತ್ತಾ, ಬಿರುಗಾಳಿಯಂತೆ ನುಗ್ಗಿದ ಗಂಗರಾಜರನ್ನು ಕಂಡ ಅದಿಯಮ ಸಮೀಪಕ್ಕೆ ಸಾರುತ್ತಿರುವ ಮೃತ್ಯುವನ್ನು ಕಂಡಂತೆ ಬೆದರಿ, ಹೇಗಾದರೂ ಜೀವ ಉಳಿಸಿಕೊಳ್ಳಬೇಕೆಂದು ಕೋಣೆಯಿಂದ ಕೋಣೆಗೆ ಓಡತೊಡಗಿದ.

ಅಂತಃಪುರದ ರಾಜಸ್ತ್ರೀಯರು ದಾಸದಾಸಿಯರು ಭಯದಿಂದ ಬೆದರಿ ಚೀತ್ಕರಿಸಿದರು. ಅದಿಯಮನ ಮಡದಿಯರು ಗಂಗರಾಜನ ಕಾಲಿಗೆ ಬಿದ್ದು

ಪತಿಯನ್ನುಳಿಸುವಂತೆ ಬೇಡಿದರು. ತಮ್ಮ ಓಲೆ ಕಂಕಣಗಳನ್ನು ತೆಗೆದು ಅವರ ಪಾದದ ಬಳಿ ಇಟ್ಟರು. ನಮ್ಮನ್ನು ಕೊಂದು ಸಿಟ್ಟು ತೀರಿಸಿಕೊಳ್ಳಿ ಎಂದು ಅವರ ಕಾಲಿಗೆರಗಿದರು.

ಕ್ರೋಧದಿಂದ ಕುರುಡಾಗಿ, ಪ್ರತೀಕಾರ ತೃಷೆಯಿಂದ ಹುಚ್ಚಾಗಿದ್ದ ಗಂಗರಾಜರಿಗೂ, ಆ ಹೆಣ್ಣುಗಳ ಹಾಹಾಕಾರವನ್ನು ಕೇಳಿ ಎದೆಗರಗಿತು.

'ತಾಯಿ, ನಿಮಗಿಂದು ಅವನ ಜೀವದಾನ ಮಾಡಿದ್ದೇನೆ. ಹೆಣ್ಣಿನ ಕಣ್ಣೀರು ನಮಗೆ ಗಂಗಾಜಲದಷ್ಟು ಪವಿತ್ರ. ಅದು ಎಂದೂ ನಮ್ಮಿದುರು ವ್ಯರ್ಥವಾಗುವುದಿಲ್ಲ.'

—ಎಂದು ನುಡಿದು, ಅಂತಃಪುರದ ಶಯ್ಯಾಗಾರದಲ್ಲಿ, ಹೆಣ್ಣುಗಳ ಹಿಂದೆ, ಭಯದಿಂದ ಹಲ್ಲುಗಿರಿಯುತ್ತಾ ಹುದುಗಿದ ಅದಿಯಮನನ್ನು ಜುಟ್ಟು ಹಿಡಿದು, ಹೊರಗೆಳೆದು ಅವನ ತಲೆಯ ಮೇಲೆ ತಮ್ಮ ಪಾದವನ್ನಿಟ್ಟು—

'ಹೆಂಗಸರ ಹಿಂದೆ ಅವಿತು ಬದುಕುವ ಹೇಡಿ, ನಮ್ಮ ಪಾದಲಾಂಛನ ಹೊತ್ತು ಬದುಕು'

—ಎಂದು ಭೂತದರ್ಶನವಾದಂತೆ ಗಡಗಡ ನಡುಗುತ್ತಿದ್ದ ಅವನನ್ನು ಅವನ ಹೆಂಡಿರತ್ತ ದೂಡಿದರು. ಅವರು ದೂಡಿದ ರಭಸಕ್ಕೆ ನಿಲ್ಲಲಾಗದೆ, ತನ್ನ ಹೆಂಡಿರ ಕಾಲಡಿಯಲ್ಲೇ ಬಿದ್ದು ಹೊರಳಿದ ಅದಿಯಮ.

ಅವನೊಂದಿಗೆ ತಲಕಾಡಿನ ಕೋಟೆಯ ಮೇಲೆ ಹಾರಾಡುತ್ತಿದ್ದ ಚೋಳಧ್ವಜವೂ ಉರುಳಿ, ಹೊಯ್ಸಳ ಪತಾಕೆ ಹೆಮ್ಮೆಯಿಂದ ಹಾರಿತು.

೧೧

ಗಂಗರಾಜರು ವಿಷ್ಣುವರ್ಧನನಿಗೆ ಮಾತಿತ್ತಂತೆಯೇ, ಅದೇ ದಿನ ಮಧ್ಯಾಹ್ನ ಅದಿಯಮನ ಮನೆಯಲ್ಲಿ ವಿಷ್ಣುವರ್ಧನನಿಗೆ ವಿಜಯಸ್ನಾನ ಮಾಡಿಸಿದರು.

ಆ ದಿನ ಸಂಜೆ ತಲಕಾಡಿನ ಅರಮನೆಯ ಓಲಗಸಾಲೆಯ ಸಿಂಹಾಸನದ ಮೇಲೆ—

'ಸ್ವಸ್ತಿ ಶ್ರೀ ಸಮಧಿಗತ ಪಂಚ ಮಹಾ ಶಬ್ದ ಮಹಾ ಮಂಡಲೇಶ್ವರ ದ್ವಾರಾವತೀ ಪುರವರಾಭೀಶ್ವರ, ಯದುವಂಶಾಂಬರದ್ಯುಮಣಿ ಸಮ್ಯಕ್ತ ಚೂಡಾಮಣಿ ಮಲೆಪರೊಳ್ಗಂಡ, **ತಲಕಾಡು ಗೊಂಡ** ಭುಜಬಲ ಗಂಗ ಶ್ರೀಮತು ತ್ರಿಭುವನಮಲ್ಲ ವಿಷ್ಣುವರ್ಧನ ಹೊಯ್ಸಳೇಶ್ವರ'

—ಎಂದು ವಂದಿಮಾಗಧರಿಂದ ಹೊಗಳಿಸಿಕೊಂಡ, ವಿಷ್ಣುವರ್ಧನನನ್ನು ನೋಡಿ, ಗಂಗರಾಜರ ಕಣ್ಣುಗಳಲ್ಲಿ ಹರ್ಷಾಶ್ರು ತುಂಬಿತು. ಆನಂದೋದ್ರೇಕದಿಂದ ಕಂಪಿಸುವ ಧ್ವನಿಯಲ್ಲಿ—

ಪ್ರಭೋ ಇಂದು ನನ್ನ ಬಾಳು ಸಾರ್ಥಕವಾಯಿತು. ಚೋಳರ ಪಾದಧೂಳಿಯಿಂದ ಕಲಂಕಿತವಾದ ನನ್ನ ಹಿರಿಯರ ಅರಮನೆ, ಚೋಳರ ರಕ್ತಸ್ನಾನದಿಂದಲೇ ಮಿಂದು ಮಡಿಯಾಗಿ, ತಮ್ಮ ಸಿಂಹಾಸನಾರೋಹಣದಿಂದ ಧನ್ಯವಾಯಿತು. ಪ್ರಭುಗಳಲ್ಲಿ ನಾನು ಬೇಡಿಕೊಳ್ಳುವುದಿಷ್ಟೇ- ಹಿಂದಿನ ಗಂಗದೊರೆಗಳಂತೆ ಧರ್ಮದಿಂದ ಪಾಲಿಸಿ, ನನ್ನ ಗಂಗವಾಡಿಯನ್ನು ಉದ್ಧರಿಸಬೇಕು.'

—ಎಂದರು.

ಅವರ ಮಾತನ್ನು ಕೇಳಿದ ವಿಷ್ಣುವರ್ಧನ ತೃಪ್ತಿಯ ಮಂದಹಾಸವನ್ನು ಮುಖದ ಮೇಲೆ ಮಿನುಗಿಸಿ—

'ಪ್ರಧಾನಿಗಳೇ ಗಂಗವಾಡಿ ನಮ್ಮದಲ್ಲ, ನಿಮ್ಮದು. ಇದು ಮತ್ತೆ ತನ್ನ ಪ್ರಾಚೀನ ಕೀರ್ತಿಯನ್ನು ಪಡೆಯಲು, ಏನು ಧರ್ಮಕಾರ್ಯವಾಗಬೇಕೊ, ಎಷ್ಟು ಬಸದಿ, ದೇವಾಲಯಗಳ ನಿರ್ಮಾಣವಾಗಬೇಕೊ-ಅದಷ್ಟನ್ನು ನಮ್ಮ ಅಪ್ಪಣೆಗಾಗಿ ಕಾಯದೆಯೇ ಮಾಡಿ. ಹಾಗೆ ಗಂಗವಾಡಿಯ ದೇವಾಲಯ, ಜಿನಾಲಯಗಳಿಗೆ, ಹಿಂದಿನ ಗಂಗದೊರೆಗಳ ಧರ್ಮ, ದತ್ತಿ ಏನಿದ್ದರೂ ಮತ್ತೆ ಅವು ನಡೆಯುವಂತೆ, ಶಾಸನಗಳನ್ನು ಕೊಡಿಸಿ. ಚೋಳರ ದಾಳಿಯಿಂದ ಯಾರು ಏನು ಕಳೆದುಕೊಂಡಿದ್ದರೂ ಆದು ನಮ್ಮ ಭಂಡಾರದಿಂದ ಅವರಿಗೆ ಸಲ್ಲಿಸಿ. ಹಾಗೇ ಇಂದು ನಮಗೆ ವಶವಾದ ಚೋಳಭಂಡಾರವನ್ನು ಈ ಗೆಲುವನ್ನು ನಮಗೆ ನೀಡಿದ ಸೇನೆಗೆ ಹಂಚಿಬಿಡಿ. ಹಾಗೇ ನೀವು ಗೆದ್ದ ಈ ಸೀಮೆ ನಿಮ್ಮದೇ ಆಗಿ ಇರಲಿ. ಇದು ನಮ್ಮದಾಯಿತೆಂಬ ಕೀರ್ತಿ ಮಾತ್ರ ನಮಗೆ ಸಾಕು.'

—ಎಂದು ಹೇಳಿದ.

ಆ ಮಾತನ್ನು ಕೇಳಿದ ಗಂಗರಾಜರ ಬಾಯಿ ಕಟ್ಟಿ ಹೋಯಿತು.

ಸಭೆ 'ಕೀರ್ತಿ ಮಾತ್ರ ಸಾಕು' ಎಂದ ದೊರೆಯನ್ನು 'ಕೀರ್ತಿ ನಾರಾಯಣ ಉಘೇ ಉಘೇ' ಎಂದು ಕೂಗಿ ಹೊಗಳಿ ನಲಿಯಿತು.